# "ಚದುರಂಗರ ಸಮಗ್ರ ನಾಟಕಗಳ ಅಧ್ಯಯನ"

ಕನ್ನಡ ಎಂ.ಫಿಲ್ ಪದವಿಗಾಗಿ

ಕಾವ್ಯಮಂಡಲದ ವತಿಯಿಂದ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ನಿಬಂಧ

2009-10

ಸಂಶೋಧನಾ ವಿದ್ಯಾರ್ಥಿ

**ಎಂ. ದೇವರಾಜ**

ಎಂ. ಎ., ಬಿ.ಇಡಿ.

ನೋಂದಣಿ ಸಂಖ್ಯೆ : KVMBKS - 00432

ಮಾರ್ಗದರ್ಶಕರು

**ಡಾ.ಕೆ.ವಿ. ಚಂದ್ರಣ್ಣಗೌಡ. ಎಂ.ಎ.ಎಲ್ ಎಲ್.ಬಿ, ಪಿ.ಹೆಚ್.ಡಿ**

ಉಪ-ಪ್ರಾಚಾರ್ಯರು, ವಿ.ವಿ.ಪುರ ಪದವಿ ಸಂಜೆ ಕಾಲೇಜು

ಕೆ.ಆರ.ರಸ್ತೆ, ಬೆಂಗಳೂರು-560004

ಹಂಪಿ ಕನ್ನಡ ವಿಶ್ವವಿದ್ಯಾಲಯದ

**ಕಾವ್ಯಮಂಡಲ**

13/85, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಬಸವನಗುಡಿ, ಬೆಂಗಳೂರು-560004

8184

# ಮಾರ್ಗದರ್ಶಕರ ಪ್ರಮಾಣ ಪತ್ರ

ಎಂ. ದೇವರಾಜು ಅವರು ನನ್ನ ಮಾರ್ಗದರ್ಶನದಲ್ಲಿ **"ಚದುರಂಗರ ಸಮಗ್ರ ನಾಟಕಗಳ ಅಧ್ಯಯನ"** ಎಂಬ ವಿಷಯವನ್ನು ಕುರಿತ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್ ಪದವಿಗಾಗಿ ಸಿದ್ಧಪಡಿಸಿದ್ದು, ಅವರು ಈ ನಿಬಂಧವನ್ನು ಬೇರೆ ಯಾವುದೇ ವಿಶ್ವವಿದ್ಯಾಲಯದ ಪದವಿ ಪರೀಕ್ಷೆಗಾಗಲಿ ಅಥವಾ ವೈಯಕ್ತಿಕ ವಿಷಯಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಡಾ|| ಕೆ.ವಿ. ಚಂದ್ರಣ್ಣಗೌಡ.
ಎಂ.ಎ.ಎಲ್ ಎಲ್.ಬಿ, ಪಿ.ಹೆಚ್.ಡಿ

ಡಾ||ಕೆ.ವಿ. ಚಂದ್ರಣ್ಣಗೌಡ
ಎಂ.ಎ., ಎಲ್.ಎಲ್.ಬಿ., ಪಿಎಚ್.ಡಿ.
ಮುಖ್ಯಸ್ಥರು, ಕನ್ನಡ ವಿಭಾಗ
ವಿ.ವಿ. ಪುರ ಕಲೆ ಮತ್ತು ವಾಣಿಜ್ಯ ಸಂಜೆ ಕಾಲೇಜು
ಕೆ.ಆರ್. ರಸ್ತೆ, ಬೆಂಗಳೂರು-560 004

ಸ್ಥಳ: ಬೆಂಗಳೂರು
ದಿನಾಂಕ: 08-09-2010

ಹಂಪಿ ಕನ್ನಡ ವಿಶ್ವವಿದ್ಯಾಲಯದ
**"ಕಾವ್ಯಮಂಡಲ"**
13/85, ರಾಷ್ಟ್ರೀಯ ವಿದ್ಯಾಲಯ ರಸ್ತೆ,
ಬಸವನಗುಡಿ, ಬೆಂಗಳೂರು -560004

818A

# ವಿದ್ಯಾರ್ಥಿ ಪ್ರಮಾಣ ಪತ್ರ

"ಚದುರಂಗರ ಸಮಗ್ರ ನಾಟಕಗಳ ಅಧ್ಯಯನ" ಎಂಬ ವಿಷಯವನ್ನು ಕುರಿತು ಹಂಪಿ ವಿಶ್ವವಿದ್ಯಾಲ 'ಕಾವ್ಯಮಂಡಲ'ದ ಕನ್ನಡ ಎಂ.ಫಿಲ್ ಪದವಿ ಪರೀಕ್ಷೆಗೆ **ಡಾ|| ಕೆ.ವಿ. ಚಂದ್ರಣ್ಣಗೌಡ.** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ನಿಬಂಧವನ್ನು ನಾನು ಹಿಂದೆ ಯಾವುದೇ ವಿಶ್ವವಿದ್ಯಾಲಯದ ಪದವಿ ಪರೀಕ್ಷೆಗಾಗಲೀ ಅಥವಾ ನನ್ನ ವೈಯಕ್ತಿಕ ಉದ್ದೇಶಗಳಿಗಾಗಲೀ ಎಲ್ಲಿಯೂ ಬಳಸಿಕೊಂಡಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ಎಂ. ದೇವರಾಜು
ಎಂ.ಫಿಲ್ ವಿದ್ಯಾರ್ಥಿ

ಸ್ಥಳ: ಬೆಂಗಳೂರು

ದಿನಾಂಕ:08-09-2010

ಹಂಪಿ ಕನ್ನಡ ವಿಶ್ವವಿದ್ಯಾಲಯದ
**"ಕಾವ್ಯಮಂಡಲ"**
13/85, ರಾಷ್ಟ್ರೀಯ ವಿದ್ಯಾಲಯ ರಸ್ತೆ,
ಬಸವನಗುಡಿ, ಬೆಂಗಳೂರು -560004

# ಕೃತಜ್ಞತೆಗಳು

ಪ್ರಸ್ತುತ ನಿಬಂಧವನ್ನು ಸಿದ್ಧಪಡಿಸುವಲ್ಲಿ ಮಾರ್ಗದರ್ಶನ ನೀಡಿಲು ಸಂತೋಷದಿಂದ ಒಪ್ಪಿಕೊಂಡು ಸೂಕ್ತಮಾರ್ಗದರ್ಶನ ಹಾಗೂ ಪ್ರೋತ್ಸಾಹ ನೀಡಿದ ಪೂಜ್ಯ ಗುರುಗಳಾದ **ಡಾ.ಕೆ.ವಿ. ಚಂದ್ರಣ್ಣಗೌಡ**. ಅವರಿಗೆ ಕೃತಜ್ಞತೆಗಳು.

ಎಂ.ಫಿಲ್ ಪದವಿ ವ್ಯಾಸಂಗಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕಾವ್ಯಮಂಡಲದಲ್ಲಿ ಅವಕಾಶ ನೀಡಿ ಸಹಕರಿಸಿದ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದ ದಿವಂಗತ ಪ್ರೊ. ಕೀ.ರಂ. ನಾಗರಾಜು ಅವರಿಗೆ ನನ್ನ ಕೃತಜ್ಞತೆಗಳು.

ಈ ಪ್ರಬಂಧದ ವಿಷಯದ ಬಗ್ಗೆ ಮಾಹಿತಿಯನ್ನು ನೀಡಿದ ಬಸವರಾಜ್ ಕಲ್ಗುಡಿ, ನಟರಾಜ್‌ಹುಳಿಯಾರ್, ಆಶಾಮೇಡಂ, ಶಿವಾರೆಡ್ಡಿ, ರಂಗನಾಥ್ ಹಾಗೂ ವೆಂಕಟೇಶ್‌ಮೂರ್ತಿ ಸರ್ ರವರಿಗೂ ನನ್ನ ಕೃತಜ್ಞತೆಗಳು.

ಅಧ್ಯಯನದ ಅವಧಿಯಲ್ಲಿ ಮನೋಸ್ಥೈರ್ಯ ನೀಡಿದ ನನ್ನ ಸೇಹಿತನಾದ ಎಂ.ಚಿಕ್ಕಣ್ಣ, ನಂತರ ನನ್ನ ಅಣ್ಣನಾದಂತಹ ಎಂ. ನಾರಾಯಣಸ್ವಾಮಿ, ನನ್ನ ತಾಯಿಯಾದ ಮರಿಯಮ್ಮ ಸ್ನೇಹಿತರಾದ ಮಹೇಶ್, ಬೈಲಾಂಜಿನಪ್ಪ ರವರಿಗೂ ಪ್ರಬಂಧವನ್ನು ಅಂದವಾಗಿ ಮುದ್ರಿಸಿದ ಎಸ್.ವಿ.ಎ ಇಂಟರ್‌ಪ್ರೈಸಸ್ ನ ಸಿಬ್ಬಂದಿ ವರ್ಗದವರಿಗೂ ನನ್ನ ಕೃತಜ್ಞತೆಗಳು.

ಎಂ. ದೇವರಾಜು

# ಪರಿವಿಡಿ

# ಅಧ್ಯಾಯ – 1

## ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

## ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :

ಚದುರಂಗರು ನಮ್ಮ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆದಿದ್ದಾರೆ. ಇವರು ಲೇಖಕರಾಗಿ, ಚಲನಚಿತ್ರ ನಿರ್ದೇಶಕರಾಗಿಯೂ ಕಾಣಿಸಿಕೊಂಡಿದ್ದಾರೆ. ಇವರು ತಮ್ಮ ಸಾಹಿತ್ಯದ ರಚನೆಯಲ್ಲಿ ಐವತ್ತು ವರ್ಷಗಳನ್ನು ಕಳೆದಿದ್ದಾರೆ. ಆದರೆ ಇವರು ಸದಭಿರುಚಿ, ಒಳ್ಳೆಯ ಆಶಯಗಳನ್ನು ತಮ್ಮ ಜೀವನದಲ್ಲಿ ರೂಪಿಸಿಕೊಂಡಿದ್ದರು. ಯಾವುದೇ ಒಂದು ಸಾಹಿತ್ಯದಲ್ಲಿ ಅವರು ಪುಟಕ್ಕಿಟ್ಟ ಚಿನ್ನದಂತೆ ಹೊಸ ರೂಪದಲ್ಲಿ ಕಾಣಿಸಿಕೊಂಡಿದ್ದಾರೆ. ಇವರು ತಮ್ಮ ಇಳಿವಯಸ್ಸಿನಲ್ಲಿ ಹೆಜ್ಜಾಲದಂಥ ಕಾದಂಬರಿಯನ್ನು, ಕ್ವಾಟೆ ಎಂಬ ಕಥಾಸಂಕಲನವನ್ನು, ಬಿಂಬ ಎಂಬ ನಾಟಕವನ್ನು ಬರೆಯುವ ಮೂಲಕ ಸಮಕಾಲೀನ ಯುವ ಬರಹಗಾರರಿಗಿಂತಲೂ ಕ್ರಿಯಾಶೀಲರಾಗಿದ್ದವರು ಎಂಬುದಾಗಿ ಸ್ಪಷ್ಟವಾಗಿ ತಿಳಿಯುತ್ತದೆ. ಕೆಲವರು ಯೌವನದಲ್ಲಿರುವ ಸಮಯದಲ್ಲಿ ಹೆಚ್ಚು ಬರೆಯುತ್ತಾರೆ, ತಮಗೆ ವಯಸ್ಸು ಆದಂತೆ ಬರೆಯುವುದನ್ನು ನಿಲ್ಲಿಸಿಬಿಡುತ್ತಾರೆ. ಆದರೆ ಚದುರಂಗರು ಇದಕ್ಕೆ ವಿರುದ್ಧವಾಗಿ ತಮ್ಮ ಯೌವನಕ್ಕಿಂತ ಇಳಿವಯಸ್ಸಿನಲ್ಲಿಯೇ ಹೆಚ್ಚು ಬರೆದಿದ್ದಾರೆ. ಚದುರಂಗರು ಮೂಲತಃ ಯಾವಾಗಲೂ ಸ್ವೀಕರಿಸುವ ಮನಸ್ಸಿನವರೇ ಹೊರತು ನಿರಾಕರಿಸುವ ಮನಸ್ಸಿನವರಲ್ಲ. ಆದುದರಿಂದಲೇ ಇವರ ಮನಸ್ಸು ಯಾವಾಗಲೂ ಹೊಸ ಚಿಂತನೆಗಳಿಗೆ ಸದಾ ತೆರೆದುಕೊಳ್ಳುತ್ತಿತ್ತು. ಆ ಹೊಸ ಚಿಂತನೆಗಳಡಿಯಲ್ಲಿ ತಮ್ಮ ಪ್ರತಿಭೆಯನ್ನು ಒರೆಗೆ ಹಚ್ಚಲು ಪ್ರಯತ್ನಿಸುತ್ತಾರೆ. ಈ ಕಾರಣ ಅವರನ್ನು ಅತ್ಯಂತ ಗೌರವ ಮತ್ತು ಅಭಿಮಾನದಿಂದ ನೋಡಲು ಸಾಧ್ಯವಾಗಿದೆ. ಇವರು ಸೃಷ್ಟಿಯಾಗುತ್ತಿದ್ದ ಹೊಸ ಮಾರ್ಗದಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದರು.

ಚದುರಂಗರು ಸದಾ ಪ್ರಭಾವಗಳನ್ನು ಒಳಗೊಳ್ಳುತ್ತಿದ್ದರು. ಅವರು ತೆರೆದುಕೊಳ್ಳುತ್ತಿದ್ದದ್ದು ವ್ಯಕ್ತಿಗಳಿಗಲ್ಲ, ಟ್ರೆಂಡ್‌ಗಳ ಪ್ರಭಾವಗಳಿಗೆ ಮಾತ್ರ, ಚದುರಂಗರ ಪ್ರತಿಭೆಯಿಂದ ಸಾಹಿತ್ಯ ಕೃಷಿಯೂ ಅಭಿವೃದ್ಧಿಯಾಗಿದೆ. ಚದುರಂಗರ ಪ್ರಥಮ ನಾಟಕವಾದ "ಸತ್ಯದ ಝೋಕು" ಟಿ.ಪಿ ಕೈಲಾಸಂರವರ ಪ್ರಹಸನದ ಟ್ರೆಂಡಿನ ಪ್ರಭಾವಕ್ಕೆ ಒಳಗಾಗಿದೆ. ಕೈಲಾಸಂರವರನ್ನು ಕನ್ನಡದ ಪ್ರಹಸನಗಳ ಪಿತಾಮಹ ಎಂದು ಕರೆಯುತ್ತಾರೆ. ಇವರ ಪ್ರಭಾವದಿಂದ ಅನೇಕ ಪ್ರಹಸನಗಳನ್ನು ಬರೆಯಲು ಪ್ರಾರಂಭಿಸಿದರು. ಆದರೆ ಯಾರೊಬ್ಬರೂ ಕೈಲಾಸಂ ರೀತಿಯಲ್ಲಿ ಹೆಸರು ಮಾಡಲು ಸಾಧ್ಯವಾಗಿಲ್ಲ. ಆ ಸಾಲಿನಲ್ಲಿ ರಚನೆಯಾಗಿರುವುದೇ 'ಸತ್ಯದ ಝೋಕು'.

ಚದುರಂಗರು ಕಥೆ, ಕಾದಂಬರಿಗಳನ್ನು ರಚಿಸಿದ್ದಾರೆ. ಇವರು ಮುಖ್ಯವಾಗಿ ನಾಲ್ಕು ನಾಟಕಗಳನ್ನು ಬರೆದಿದ್ದಾರೆ. ಮೊದಲಿಗೆ ಸತ್ಯದ ಝೋಕು, ಕುಮಾರರಾಮ, ಇಲಿಬೋನು ಮತ್ತು ಬಿಂಬ ನಾಟಕಗಳು ಪ್ರಮುಖವಾದವುಗಳು. ಇವರ ಒಂದೊಂದು ನಾಟಕಗಳು ಒಂದೊಂದು ಪಂಥವನ್ನು ಪ್ರತಿನಿಧಿಸುತ್ತದೆ. ಪ್ರತಿಯೊಂದು ನಾಟಕಗಳು ಹೊಸ ಹೊಸ ದೃಷ್ಟಿಕೋನಗಳನ್ನು ಒಳಗೊಂಡಿದೆ. ಕುಮಾರರಾಮ ನಾಟಕವು ಐತಿಹಾಸಿಕ ವಸ್ತುಗಳನ್ನು ಬಳಸಿ 'ಘಟನಾನಿಷ್ಠ' ವಾಗಿ ನೋಡುವ ಕ್ರಮವನ್ನು ರೂಪಿಸಿಕೊಟ್ಟರು. ಈ ನಾಟಕದಲ್ಲಿ ಕುಮಾರರಾಮನು ಪ್ರತಿನಿಧಿಸುವ ಮೌಲ್ಯವೇ ನಾಟಕದ ಸೃಷ್ಟಿಗೆ ಪ್ರೇರಣೆ ಆಗಿದೆ. ಇನ್ನು 'ಇಲಿಬೋನು' ನಾಟಕವೂ ಒಂದು ಅಸಂಗತ ನಾಟಕವಾಗಿ ಮೂಡಿಬಂದಿದೆ. ಇದನ್ನು ಬರೆಯುವ ಸಂದರ್ಭದಲ್ಲಿ ನವ್ಯ ಸಾಹಿತ್ಯವೂ ಹೆಚ್ಚು ಪ್ರಭಾವಶಾಲಿ ಆಗಿತ್ತು. ಎಂಥ ಲೇಖಕರೂ ಸಹ ಅದರ ಪ್ರಭಾವದಿಂದ ಮುಕ್ತರಾಗಿರಲು ಸಾಧ್ಯವಿರಲಿಲ್ಲ. ಎಲ್ಲಾ ನವ್ಯರನ್ನು ಕಾಡುತ್ತಿದ್ದ ಅಸ್ತಿತ್ವವಾದ ಇವರನ್ನು ಕಾಡಿ ಅದರ ಪ್ರತಿಫಲವಾಗಿ 'ಇಲಿಬೋನು' ರಚನೆಯಾಯಿತು. ಇಲ್ಲಿ ದಲಿತ, ಬಂಡಾಯದ ಪ್ರಭಾವದಿಂದ ಮೂಡಿಬಂದುದಾಗಿದೆ. ಅದಕ್ಕಾಗಿಯೇ ಮೂಲದಲ್ಲಿ ತಿರಸ್ಕಾರಕ್ಕೆ ಒಳಗಾದ ಪಾತ್ರಗಳು ಸಹ ಅನುಕಂಪವನ್ನು ಪಡೆದುಕೊಳ್ಳುತ್ತವೆ. ನವ್ಯ ಮಾರ್ಗ ಸಂಪ್ರದಾಯದಲ್ಲಿ ಅತಿಯಾದ ಪ್ರಶಂಸೆಗೆ ಒಳಗಾದ ಪಾತ್ರಗಳು ಇಲ್ಲಿ ಸಂದೇಹಕ್ಕೆ ಟೀಕೆಗೆ ಒಳಪಡುತ್ತವೆ.'ಬಿಂಬ' ನಾಟಕವೂ ರಾಮಾಯಣದ ಕಥೆಯನ್ನು ಹೊಂದಿದೆ. ಇಲ್ಲಿ ಅವರು ಮಾಡಿರುವ ಮೌಲ್ಯಗಳನ್ನು ನೇರವಾಗಿ ಒಪ್ಪಿಕೊಳ್ಳದೇ ಇನ್ನೊಂದು ಮಗ್ಗುಲಲ್ಲಿಇರಬಹುದಾದ ಮಾನವೀಯ ಮೌಲ್ಯಗಳ ಶೋಧನೆಯಲ್ಲಿ ತೊಡಗುತ್ತಾರೆ. ಇಲ್ಲಿ ಹೆಳವನಕಟ್ಟೆ ಗಿರಿಯಮ್ಮನವರ 'ಲವ-ಕುಶರ ಕಾಳಗ' ದಲ್ಲಿ ಬರುವ ಒಂದು ಪ್ರಸಂಗವನ್ನು ತಮ್ಮ ನಾಟಕದ ವಸ್ತುವಾಗಿ ಸ್ವೀಕರಿಸಿದ್ದಾರೆ. ಇದು ನವ್ಯೋತ್ತರ ಸಂದರ್ಭದಲ್ಲಿ ಬಂದ ಕಾರಣ, ಇದು ದಲಿತ, ಬಂಡಾಯ ಸಾಹಿತ್ಯದ ಪ್ರಭಾವವನ್ನು ಒಳಗೊಂಡಿದೆ.

ಇವರ ನಾಲ್ಕು ನಾಟಕಗಳು ಸಹ ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿದೆ. ಚದುರಂಗರು ಸಹ ಅವರ ಸಂವೇದನಾಶೀಲತೆಯನ್ನು ಸದಾ ಜಾಗೃತವಾಗಿರಿಸುವಂತೆ ಈ ನಾಲ್ಕು ನಾಟಕಗಳು ಮೂಡಿಬಂದಿವೆ. ಆದ್ದರಿಂದಲೇ ಇವರ ಒಂದೊಂದು ನಾಟಕಗಳನ್ನು ಒಂದೊಂದು ದೃಷ್ಟಿಕೋನದಿಂದ ನೋಡಬಹುದಾಗಿದೆ. ಅವರ 'ಸತ್ಯದ ಝೋಕು'ವಿನಲ್ಲಿ ಸತ್ಯಕ್ಕಿಂತ ಸುಳ್ಳು ಎಂಬುದು ಈ ಜಗತ್ತಿನಲ್ಲಿ ಮುಖ್ಯ ಎಂಬುದನ್ನು ತಿಳಿಸುವುದಾಗಿದೆ. ಇಲ್ಲಿ ಎರಡು-ಮೂರು ಪಾತ್ರಗಳ

ಮೂಲಕ ಇದನ್ನು ತಿಳಿಸುತ್ತಾರೆ. ಇಲ್ಲಿ ಪ್ರೇಕ್ಷಕರು ಈ ಜಗತ್ತಿನಲ್ಲಿ ಜೀವನ ಮಾಡುವಾಗ ಸತ್ಯಕ್ಕಿಂತ ಸುಳ್ಳಿಗೆ ಹೆಚ್ಚು ಪ್ರಾಧಾನ್ಯತೆಯು ಈ ಆಧುನಿಕ ಜೀವನದಲ್ಲಿ ಸಿಗುತ್ತಿದೆ ಎಂಬುದನ್ನು ನೋಡಬಹುದಾಗಿದೆ.

'ಕುಮಾರರಾಮ' ನಾಟಕವು ಐತಿಹಾಸಿಕ ವಸ್ತುವನ್ನು ಒಳಗೊಂಡಿದೆ. ಇದನ್ನು ಬರೆಯುವ ಸಂದರ್ಭದಲ್ಲಿ ರಂಗಭೂಮಿಯ ಬಗ್ಗೆ ಸಾಕಷ್ಟು ವಿವರಗಳು ಪ್ರಕಟವಾಗಿದ್ದವು. ಚದುರಂಗರು ಈ ನಾಟಕವನ್ನು ಬರೆದು ಚಲನಚಿತ್ರವನ್ನು ನಿರ್ದೇಶನ ಸಹ ಮಾಡಿದ್ದರು. ಈ ನಾಟಕದಲ್ಲಿ ಅದರ ಪ್ರಭಾವವನ್ನು ಕಾಣಬಹುದಾಗಿದೆ. ನಾಟಕೀಕರಣಗೊಳಿಸುವುದರ ಜೊತೆಗೆ ದೃಶ್ಯಗಳನ್ನು ಸಿನಿಮೀಯ ದೃಶ್ಯಗಳಿಗೂ ಹೊಂದಾಣಿಕೆ ಆಗುವಂತೆ ಇಲ್ಲಿ ನಿರೂಪಿಸಿದ್ದಾರೆ. ಆದ್ದರಿಂದಲೇ ಅವರ ನಾಟಕವನ್ನು ನಾಟಕೀಕರಣದ ಜೊತೆಗೆ ರಂಗಭೂಮಿಯ ಬಗ್ಗೆಯೂ ಇಲ್ಲಿ ನೋಡಬಹುದಾಗಿದೆ.

'ಇಲಿಬೋನು' ನಾಟಕವೂ ಅಸಂಗತ ನಾಟಕವಾಗಿದೆ. ಅಸಂಗತ ನಾಟಕಗಳಲ್ಲಿ ಒಂದು ಸುಸಂಗತ ಕ್ರಿಯೆ ಎಂಬುದು ಅಂತರ್ಮುಖಿಯಾಗಿರುತ್ತದೆ. ಸಂಕೇತಗಳ ಮೂಲಕ ಬೇರೆ ಅರ್ಥಗಳನ್ನು ನೀಡುವ ಅಸಂಗತ ನಾಟಕಗಳು ಬಾಳಿನ ನಿರರ್ಥಕತೆಯನ್ನು ತೋರಿಸುತ್ತದೆ. ಕೊನೆಗೆ ಎಲ್ಲೋ ಒಂದು ಕಡೆ ಆ ಶೂನ್ಯತೆಯನ್ನು ನಿರಾಕರಿಸಿ ಬಾಳಿನ ಸಾರ್ಥಕತೆಯನ್ನು ತಿಳಿಯಪಡಿಸುತ್ತದೆ. ಈ ರೀತಿಯ ಪ್ರಯತ್ನವೇ 'ಇಲಿಬೋನು'. ಇಲ್ಲಿ ಕೇವಲ ಮೂರು ಪಾತ್ರಗಳ ಮೂಲಕ ಈ ಜೀವನವೂ ನಶ್ವರವಲ್ಲ ಸಾರ್ಥಕತೆಯಿಂದ ಕೂಡಿದೆ ಎಂಬುದನ್ನು ತಿಳಿಸುತ್ತದೆ.

'ಬಿಂಬ' ನಾಟಕವೂ ಚದುರಂಗರನ್ನು ಕನ್ನಡದ ಪ್ರಮುಖ ನಾಟಕಕಾರರ ಸಾಲಿನಲ್ಲಿ ನಿಲ್ಲಿಸಿದ ನಾಟಕವಾಗಿದೆ. ಹದಿನೆಂಟನೆಯ ಶತಮಾನದ ಜಾನಪದ ಕವಯಿತ್ರಿ ಹೆಳವನಕಟ್ಟೆ ಗಿರಿಯಮ್ಮ ರಚಿಸಿರುವ 'ಲವಕುಶರ ಕಾಳಗ' ಕಾವ್ಯದ ಒಂದು ಪ್ರಸಂಗದ . ಸ್ಫೂರ್ತಿಯಿಂದ ಇದು ರಚಿತವಾಗಿದೆ. ಇಲ್ಲಿ ಶೂರ್ಪನಖಿಗೆ ರಾಮನ ಮೇಲಿರುವ ಮೋಹ, ಸೀತೆಗೆ ರಾವಣನ ಮೇಲೆ ಇರಬಹುದಾದ ಅಭಿಮಾನ ಇವೆರಡು ಈ ನಾಟಕದಲ್ಲಿ ರೂಪಿಸಿರುವ ಮೂಲ ಸ್ರೋತ್ರಗಳು. ಈ ನಾಟಕದಲ್ಲಿ ಪಾತ್ರಗಳು ವಿಭಿನ್ನವಾಗಿ ನಿಲ್ಲುತ್ತವೆ. ಮೂಲದಲ್ಲಿ ತಿರಸ್ಕಾರಕ್ಕೆ ಒಳಗಾದ ಪಾತ್ರಗಳು ಇಲ್ಲಿ ಅನುಕಂಪ ಪಡೆಯುತ್ತವೆ. ಅಲ್ಲಿ ವೈಭವಕ್ಕೆ ಒಳಗಾದ ಪಾತ್ರಗಳು ಇಲ್ಲಿ ಸಂದೇಹಕ್ಕೆ ಒಳಪಡುತ್ತವೆ.

ನಾಟಕಕಾರರು ರಾಮಾಯಣದ ಪಾತ್ರಗಳಿಗೆ ಸಮಾನಾಂತರವಾಗಿ ಆಧುನಿಕ ರಾಮಾಯಣದ ಒಂದು ಕಥೆಯನ್ನು ಸೃಷ್ಟಿಸಿದ್ದಾರೆ. ನಾಟಕದ ಪಾತ್ರಧಾರಿ ರಾಮಯ್ಯ ಮತ್ತು ಅವನ ಹೆಂಡತಿ ಸೀತಮ್ಮನದು ವಿಷಮ ದಾಂಪತ್ಯ. ರಾಮಾಯಣದ ಕಥೆ ಆಧುನಿಕವಾಗಿಯೂ ಪ್ರಸ್ತುತವಾದದ್ದು ಎಂದು ಸೂಚಿಸಲು ಈ ತಂತ್ರವನ್ನು ಬಳಸಿಕೊಳ್ಳಲಾಗಿದೆ. ಇದೊಂದು ರೀತಿಯಲ್ಲಿ ಹಿಂದಿನ ಪುರಾಣಗಳನ್ನು ಸಮಕಾಲೀನವಾಗಿ ಅರ್ಥೈಸುವ ಪ್ರಯತ್ನವಾಗಿದೆ.

ಚದುರಂಗರು ಸದಾಶಯ, ಸದಭಿರುಚಿ ಮತ್ತು ಉತ್ತಮ ಮೌಲ್ಯಗಳನ್ನು ತಮ್ಮ ಬಾಳಿನ ಧೋರಣೆಗಳನ್ನಾಗಿರಿಸಿಕೊಂಡ ನಾಟಕಕಾರ. ಸುಮಾರು ಐವತ್ತು ವರ್ಷದ ಸಾಹಿತ್ಯಿಕ ಕೃಷಿಯಲ್ಲಿ ಯಾವುದೇ ಸಾಹಿತ್ಯ ಧೋರಣೆಗೆ ಕಟ್ಟು ಬೀಳದೆ ಸದಾ ಕ್ರಿಯಾಶೀಲರಾಗಿದ್ದರು. ಯಾವುದೇ ಪಂಥವನ್ನು ಹುಟ್ಟು ಹಾಕಿದವರಲ್ಲ. ಯಾವಾಗಲೂ ಹೊಸ ಚಿಂತನೆಯಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದರು. ತಮ್ಮ ಇರುವಿಕೆಯನ್ನು ಸದಾ ಅನನ್ಯವಾಗಿಸುವ ಕಲಾಕಾರರಾಗಿದ್ದರು. ಸದಾ ಏನನ್ನಾದರೂ ಕಲಿಯುವ, ಬೆಳೆಯುವ, ಚೈತನ್ಯವೇ ಚದುರಂಗ. ಇವರು ಪ್ರಗತಿಶೀಲ, ನವ್ಯ, ದಲಿತ ಮತ್ತು ಬಂಡಾಯದ ಸಾಹಿತ್ಯ ಪ್ರಕಾರಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಇವರು ಇಳಿವಯಸ್ಸಿನಲ್ಲೂ ಸಮಕಾಲೀನ ಯುವ ಬರಹಗಾರರಂತೆ ಸಾಹಿತ್ಯವನ್ನು ರಚಿಸಿದ್ದಾರೆ. ಇದರಿಂದಾಗಿ ಸ್ಪಷ್ಟವಾಗುವುದು ಏನೆಂದರೆ ಇವರು ಸಮಕಾಲೀನ ಯುವ ಬರಹಗಾರರಿಗಿಂತಲೂ ಹೆಚ್ಚು ಸಂಶೋಧನಾಶೀಲರಾಗಿದ್ದುದು. ಚದುರಂಗರು ಮೂಲತಃ ಸ್ವೀಕರಿಸುವ ಮನಸ್ಸಿನವರೇ ಹೊರತು ನಿರಾಕರಿಸುವ ಮನಸ್ಸಿನವರಲ್ಲ. ಆದ್ದರಿಂದ ಇವರ ಮನಸ್ಸು ಯಾವಾಗಲೂ ಹೊಸ ಚಿಂತನೆಗಳಿಗೆ ಸದಾ ತೆರೆದುಕೊಳ್ಳುತ್ತಿತ್ತು. ತಮ್ಮ ಪ್ರತಿಭೆಯನ್ನು ಆ ಹೊಸ ಚಿಂತನೆಗಳಡಿಯಲ್ಲಿ ಒರೆ ಹಚ್ಚಲು ಪ್ರಯತ್ನಿಸುತ್ತದೆ. ಆದುದರಿಂದಲೇ ಚದುರಂಗರನ್ನು ಅತ್ಯಂತ ಗೌರವ ಮತ್ತು ಅಭಿಮಾನದಿಂದ ನೋಡಲು ಸಾಧ್ಯವಾಗಿದೆ.

ಚದುರಂಗರ ಪ್ರತಿಭೆಯಿಂದ ಸಾಹಿತ್ಯ ಕೃಷಿ ಅಭಿವೃದ್ಧಿಯಾಗಿದೆ. ಇವರು ಕಥೆ, ಕಾದಂಬರಿ, ನಾಟಕಗಳನ್ನು ರಚಿಸಿದ್ದಾರೆ. ಇವರ ನಾಟಕಗಳಾದ ಸತ್ಯದ ಝೋಕು, ಕುಮಾರರಾಮ, ಇಲಿಬೋನು ಮತ್ತು ಬಿಂಬ ಪ್ರಮುಖವಾದವು. ಇವರ ಒಂದೊಂದು ನಾಟಕಗಳು ಒಂದೊಂದು ಪಂಥವನ್ನು ಪ್ರತಿನಿಧಿಸುತ್ತವೆ. ಪ್ರತಿಯೊಂದು ನಾಟಕಗಳು ಹೊಸಹೊಸ ದೃಷ್ಟಿಕೋನ ಒಳಗೊಂಡಿವೆ. ಚದುರಂಗರ

ಸಮಗ್ರ ನಾಟಕಗಳನ್ನು ವಿಶ್ಲೇಷಿಸುವುದು ನಮ್ಮ ಉದ್ದೇಶವಾಗಿದೆ. ಚದುರಂಗರ ಸತ್ಯದ ಝೋಕು ಕೈಲಾಸಂ ರವರ ಪ್ರಹಸನಗಳ ಪ್ರಕಾರಕ್ಕೆ ಸೇರಿದೆ. ಕುಮಾರರಾಮ ನಾಟಕವು ಐತಿಹಾಸಿಕ ವಸ್ತುವನ್ನು ಒಳಗೊಂಡಿದೆ. ಇಲಿಬೋನು ನಾಟಕವು ಅಸಂಗತ ನಾಟಕವಾಗಿ ನವ್ಯದ ಪ್ರಭಾವಕ್ಕೆ ಒಳಪಟ್ಟಿದೆ. ಇನ್ನು ಬಿಂಬ ನಾಟಕವು ನವ್ಯೋತ್ತರದ ದಲಿತ ಬಂಡಾಯದ ಪ್ರಭಾವದಿಂದ ಮೂಡಿಬಂದಿದೆ.

ಚದುರಂಗರು ತಮ್ಮ ನಾಟಕಗಳಲ್ಲಿ ಹೆಣ್ಣನ್ನು ವಿಭಿನ್ನ ದೃಷ್ಟಿಕೋನದಿಂದ ಕಂಡಿದ್ದಾರೆ. ಇವರ 'ಇಲಿಬೋನು' ನಾಟಕದಲ್ಲಿ ಹೆಣ್ಣು ಒಂದು ಪ್ರೇರಕ ಶಕ್ತಿಯಾಗಿ ಕಂಡುಬರುತ್ತಾಳೆ. ಇಬ್ಬರು ಗಂಡಸರು ಪ್ರಯೋಜನವಿಲ್ಲದ ಕಾರ್ಯಗಳಲ್ಲಿ ತೊಡಗಿರುವಾಗ ಅವರನ್ನು ವಾಸ್ತವದ ನೆಲಗಟ್ಟಿಗೆ ತರಲು ಕಾರಣಳಾಗುತ್ತಾಳೆ. ಕುಮಾರರಾಮ ನಾಟಕದಲ್ಲಿ ರತ್ನಾಜಿ ಪಾತ್ರದ ಮುಖಾಂತರ ನಾಟಕ ದುರಂತವಾಗಿಸುತ್ತದೆ. ಕಂಪಿಲರಾಯನ ಪತ್ನಿ ಹರಿಯಾಲದೇವಿ, ರತ್ನಾಜಿಯ ಸೇವಕಿ ಸಂಗಾಯಿ, ಹೀಗೆ ಹಲವು ಹೆಣ್ಣು ಪಾತ್ರಗಳು ನಾಟಕದಲ್ಲಿ ಪ್ರಾಮುಖ್ಯತೆಯನ್ನು ವಹಿಸಿವೆ. ಚದುರಂಗರ ಕೊನೆಯ ನಾಟಕವಾದ 'ಬಿಂಬ' ನಾಟಕದಲ್ಲಿಯೂ ಹೆಣ್ಣು ಮುಖ್ಯ ಪ್ರೇರಕ ಶಕ್ತಿಯಾಗಿ ಕಾಣುತ್ತಾಳೆ. ಸೀತೆಯ ಕಾರಣದಿಂದ ರಾವಣನು ರಾಮ ಮತ್ತು ಸೀತೆಯನ್ನು ಬೇರ್ಪಡಿಸುತ್ತಾನೆ. ನಂತರ ಶೂರ್ಪನಖಿಯ ಪಾತ್ರವು ಸಹಾ ಬಿಂಬ ನಾಟಕದಲ್ಲಿ ಕಂಡುಬರುತ್ತದೆ. ಒಟ್ಟಾರೆಯಾಗಿ ಚದುರಂಗರ ನಾಟಕಗಳಲ್ಲಿ ಹೆಣ್ಣು ಕ್ರಿಯಾಶೀಲವಾಗಿಸುವ ಪ್ರೇರಕ ಶಕ್ತಿಯಾಗಿದ್ದಾಳೆ.

ಚದುರಂಗರು ನಾಟಕವನ್ನು ಬರೆಯುವ ಸಮಯಕ್ಕೆ ರಂಗಭೂಮಿಯ ಬಗ್ಗೆ ಹಲವಾರು ಅಂಶಗಳು ಹೊರಬಂದಿದ್ದವು. ಅವರ ಸತ್ಯದ ಝೋಕು ಗಂಭೀರವಾಗಿಲ್ಲದೆ ಕೇವಲ ಪ್ರಹಸನವಾಗಿ ಮಾತ್ರ ಉಳಿಯುತ್ತದೆ. ಮುಂದೆ ತಮ್ಮ ನಾಟಕವಾದ ಕುಮಾರರಾಮ ಬರೆಯುವಾಗ ನಾಟಕೀಯ ಸನ್ನಿವೇಶ ನಿರ್ಮಾಣದ ಜೊತೆಗೆ ಸಿನಿಮೀಯ ಸನ್ನಿವೇಶಗಳಿಗೂ ನಾಂದಿ ಹಾಡಿದ್ದಾರೆ. ಇವರು ನಾಟಕೀಯ ಸನ್ನಿವೇಶದ ಜೊತೆಗೆ ಸಿನಿಮೀಯ ಸನ್ನಿವೇಶವನ್ನು ನಿರ್ಮಿಸಿದ್ದಾರೆ. ಚದುರಂಗರ 'ಕುಮಾರರಾಮ' ನಾಟಕವು ಎರಡು ರೀತಿಯ ಸನ್ನಿವೇಶಗಳಿಗೂ ಹೊಂದುವಂತದ್ದಾಗಿದೆ. ಈ ನಾಟಕದಲ್ಲಿ ಸಿನಿಮೀಯ ದೃಶ್ಯಗಳಿಗೆ ಒತ್ತು ಕೊಟ್ಟಂತಹ ಅನೇಕ ಘಟನೆಗಳಿವೆ. ಚದುರಂಗರು ಈ ನಾಟಕವನ್ನು ಬರೆಯುವ ಸಮಯದಲ್ಲಿ ಚಲನ ಚಿತ್ರದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದರು. ಆ ನಂತರ ಅವರು ಚಲನಚಿತ್ರವನ್ನು ನಿರ್ದೇಶಿಸಿನ ಸಹ ಮಾಡಿದ್ದಾರೆ. ತಮ್ಮ ನಾಟಕಗಳಲ್ಲಿ ನಾಟಕೀಯ

ಸನ್ನಿವೇಶದ ಜೊತೆಗೆ ಸಿನಿಮೀಯ ಸನ್ನಿವೇಶಗಳನ್ನು ಒಳಗೊಂಡಿರುವಂತೆ ಮಾಡಿದ್ದಾರೆ. ಇವರ ಬಿಂಬ, ಇಲಿಬೋನು, ನಾಟಕಗಳಲ್ಲಿ ನವ್ಯ ರಂಗಭೂಮಿಯ ಎಲ್ಲಾ ಅಂಶಗಳು ಕಾಣುತ್ತವೆ. ಇದರ ಜೊತೆಗೆ 'ಕುಮಾರರಾಮ'ದಲ್ಲಿ ನಾಟಕೀಯ ಸನ್ನಿವೇಶದ ಜೊತೆಗೆ ಸಿನಿಮೀಯ ಸನ್ನಿವೇಶ ನಿರ್ಮಾಣವಾಗಿದೆ, ಇದನ್ನು ಅಧ್ಯಯನದ ಮೂಲಕ ವಿವರವಾಗಿ ತಿಳಿಯಲು ಸಾಧ್ಯ.

ಚದುರಂಗರು ತಮ್ಮ ಸತ್ಯದ ಝೋಕು ನಾಟಕದಲ್ಲಿ ಇಂದಿನ ವಾಸ್ತವತೆಯನ್ನು ತಿಳಿಸಿದ್ದಾರೆ. ಈ ನಾಟಕದಲ್ಲಿ ಸುಳ್ಳು ಮತ್ತು ಸತ್ಯಗಳ ನಡುವೆ ಸಂಘರ್ಷ ಏರ್ಪಡುತ್ತದೆ. ಕೊನೆಗೆ ಇಂದಿನ ಪ್ರಪಂಚದಲ್ಲಿ ಸತ್ಯವನ್ನು ಹೇಳಿ ಜೀವನ ಸಾಗಿಸುವುದೇ ಪ್ರಯಾಸವಾಗಿರುವುದು ತಿಳಿಯುತ್ತದೆ. ಇಂದಿನ ಜಗತ್ತಿನಲ್ಲಿ ನಾವು ಉಳಿಯಲು ಸುಳ್ಳಿನ ದಾಸರಾಗಲೇಬೇಕು. ಸುಳ್ಳು ಹೇಳಲೇಬೇಕು ಎಂಬ ವಿಚಾರವನ್ನು ಚದುರಂಗರು ವಿಡಂಬಿಸಿದ್ದಾರೆ .

ಚದುರಂಗರು ಬರೆದ ನಾಟಕಗಳಲ್ಲಿ ಹೆಣ್ಣು ಪ್ರೇರಕ ಶಕ್ತಿಯಾಗಿ ಮೂಡಿಬಂದಿದ್ದಾಳೆ. ಹಾಗಯೇ ಅವರ ಪ್ರತಿಯೊಂದು ನಾಟಕಗಳಲ್ಲಿ ಪ್ರೀತಿ ಎಂಬುದು ಕಂಡುಬರುತ್ತದೆ. ಇವರ ಬಿಂಬ ನಾಟಕದಲ್ಲಿ, ಪ್ರೀತಿ ಎಂಬುದು ದೇಹದ ಆಕರ್ಷಣೆಯಲ್ಲ ಅದು ಹೃದಯಗಳ ಬೆಸುಗೆ ಎಂಬ ವಿಚಾರಕ್ಕೆ ಒತ್ತು ನೀಡಿದ್ದಾರೆ. ಶ್ರೀರಾಮ ಮತ್ತು ಸೀತೆಯ ನಡುವೆ ಇರುವುದು ನಿಜವಾದ ಪ್ರೀತಿ, ಇದುವೇ ನಿಜವಾದ ಹೃದಯಗಳ ಬೆಸುಗೆ ಇದನ್ನು ಬಿಂಬ ನಾಟಕದಲ್ಲಿ ಕಾಣಬಹುದಾಗಿದೆ. ಆದರೆ ರಾವಣನು ಸೀತೆಯನ್ನು ಇಷ್ಟಪಡುವುದು ಕೇವಲ ದೇಹದ ಆಕರ್ಷಣೆಯಿಂದ, ಆದಕಾರಣ ರಾವಣನು ಸೀತೆಯನ್ನು ಅಪಹರಿಸಿ ರಾಮನಿಂದ ದೂರ ಕರೆದೊಯ್ಯುತ್ತಾನೆ. ನಂತರ ಶೂರ್ಪನಖಿಯು ಸಹ ರಾಮನನ್ನು ನೋಡಿ ಆಕರ್ಷಿತಳಾಗಿ, ರಾಮ ಸೀತೆಯರು ದೂರವಾಗಲು ಕಾರಣವಾಗುತ್ತಾಳೆ. ಇನ್ನೂ ಹಲವಾರು ಸನ್ನಿವೇಶಗಳಲ್ಲಿ ಪ್ರೀತಿ ಎಂಬುದು ಕೇವಲ ದೇಹದ ಆಕರ್ಷಣೆಯಲ್ಲ,ಅದು ಹೃದಯಗಳ ಬೆಸುಗೆ ಎಂಬುದು ನಿರೂಪಿತವಾಗಿದೆ. ಇದನ್ನು ರಾಮ ಮತ್ತು ಸೀತೆಯರ ಜೀವನದಿಂದ ತಿಳಿಯಬಹುದಾಗಿದೆ. ಅಂತಿಮವಾಗಿ ರಾಮ ಸೀತೆಯನ್ನು ಸ್ವೀಕರಿಸುತ್ತಾನೆ.

ಚದುರಂಗರು ರಾಮಾಯಣದ ವಸ್ತುವನ್ನು ತೆಗೆದುಕೊಂಡಿದ್ದಾರೆ. ಇವರ ಬಿಂಬ ನಾಟಕಕ್ಕೆ 18ನೇ ಶತಮಾನದಲ್ಲಿದ್ದ ಹೆಳವನಕಟ್ಟೆ ಗಿರಿಯಮ್ಮನ ಲವ-ಕುಶರ ಕಾಳಗ ಕಾವ್ಯವು ನನ್ನ ನಾಟಕಕ್ಕೆ

ಸ್ಫೂರ್ತಿಯಾಗಿದೆ ಎಂದು ಹೇಳಿಕೊಂಡಿದ್ದಾರೆ. ಇಲ್ಲಿ ಶೂರ್ಪನಖಿಗೆ ರಾಮನ ಮೇಲಿರುವ ಮೋಹವನ್ನು ನಿರೂಪಿಸಲಾಗಿದೆ. ಮೂಲ ರಾಮಾಯಣದಲ್ಲಿ ರಾಮನು ಅಗಸನ ಮಾತನ್ನು ಕೇಳಿ ಸೀತೆಯನ್ನು ಕಾಡಿಗೆ ಕಳುಹಿಸುತ್ತಾನೆ. ಚದುರಂಗರು ಬಿಂಬ ನಾಟಕದಲ್ಲಿ ರಾಮ, ಸೀತೆ ಅಗಸನ ವಿಚಾರವಾಗಿ ಬದಲಾವಣೆ ತಂದಿದ್ದಾರೆ, ಇಲ್ಲಿ ಶೂರ್ಪನಖಿಯು ಸೀತೆಯ ಕೈಯಿಂದ ರಾವಣನ ಚಿತ್ರಪಟವನ್ನು ಬರೆಯಿಸುತ್ತಾಳೆ. ನಂತರ ಅದು ಅವಳ ಎದೆಗೆ ಅಂಟಿಕೊಳ್ಳುವಂತೆ ಶಾಪವನ್ನು ನೀಡುತ್ತಾಳೆ. ಸೀತೆಯು ತಾನಾಗಿಯೇ ಕಾಡಿಗೆ ಹೋಗುತ್ತಾಳೆ. ಇದೆಲ್ಲವನ್ನು ಶೂರ್ಪನಖಿಯು ಮಾಡುವುದು ರಾಮನ ಮೇಲಿನ ಮೋಹದಿಂದ, ಹಾಗೆಯೇ ರಾಮನು ಶೂರ್ಪನಖಿಯನ್ನು ನಿರಾಕರಿಸಿದಾಗ ಶೂರ್ಪನಖಿಯು ರಾಮನ ಮೇಲಿನ ಮೋಹದಿಂದ ತನಗೆ ಸಿಗದಿದ್ದ ಪ್ರೀತಿ ಸೀತೆಗೂ ಸಿಗಬಾರದೆನ್ನುವ ಸೇಡಿನಿಂದ ಸೀತೆಯನ್ನು ಕಾಡಿನಲ್ಲಿ ಅಲೆಯುವಂತೆ ಮಾಡುತ್ತಾಳೆ. ಒಟ್ಟಾರೆಯಾಗಿ ಬಿಂಬ ನಾಟಕವು ಶೂರ್ಪನಖಿಯು ತನ್ನ ಸೇಡನ್ನು ತೀರಿಸಿಕೊಳ್ಳುವ ಕತೆಯಾಗಿ ಮೂಡಿಬಂದಿದೆ.

ಚದುರಂಗರ ನಾಟಕಗಳನ್ನು ಸಮಗ್ರವಾಗಿ ಅಧ್ಯಯನ ಮಾಡುವಾಗ ವಿವಿಧ ರೀತಿಯ ಮಜಲುಗಳು ಕಾಣುತ್ತವೆ. ಪ್ರತಿಯೊಂದು ನಾಟಕಗಳು ವಿವಿಧ ಟ್ರೆಂಡ್‌ಗಳನ್ನು ಪ್ರತಿನಿಧಿಸುತ್ತವೆ. ಈ ಮೇಲಿನ ವಿಚಾರವಾಗಿ ಎಲ್ಲಾ ದೃಷ್ಟಿಕೋನಗಳಿಂದ ಸೂಕ್ತ ಎನಿಸುತ್ತದೆ. ಹೀಗೆ ಅಧ್ಯಯನ ಮಾಡುವಾಗ ನಾಟಕಗಳಲ್ಲಿ ಅನೇಕ ಒಳನೋಟಗಳು ಕಂಡುಬರುತ್ತವೆ. ನಾವು ಅವರ ನಾಟಕಗಳನ್ನು ವಿವಿಧ ರೀತಿಯ ದೃಷ್ಟಿಕೋನಗಳಿಂದ ಅಧ್ಯಯನ ಮಾಡುವುದು ಸೂಕ್ತವೆನಿಸಿಕೊಳ್ಳುತ್ತದೆ.

ಚದುರಂಗರು ಸದಾಶಯ, ಸದಭಿರುಚಿ ಮತ್ತು ಉತ್ತಮ ಮೌಲ್ಯಗಳನ್ನು ತಮ್ಮ ಬಾಳಿನ ಧೋರಣೆಗಳನ್ನಾಗಿರಿಸಿಕೊಂಡ ನಾಟಕಕಾರ. ಸುಮಾರು ಐವತ್ತು ವರ್ಷದ ಸಾಹಿತ್ಯಿಕ ಕೃಷಿಯಲ್ಲಿ ಯಾವುದೇ ಸಾಹಿತ್ಯಿಕ ಧೋರಣೆಗೆ ಕಟ್ಟು ಬೀಳದೆ ಸದಾ ಕ್ರಿಯಾಶೀಲರಾಗಿದ್ದರು. ಯಾವುದೇ ಪಂಥವನ್ನು ಹುಟ್ಟು ಹಾಕಿದವರಲ್ಲ. ಯಾವಾಗಲೂ ಹೊಸ ಚಿಂತನೆಯಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದರು. ತಮ್ಮ ಇರುವಿಕೆಯನ್ನು ಸದಾ ಅನನ್ಯವಾಗಿಸುವ ಕಲಾಕಾರರಾಗಿದ್ದರು. ಸದಾ ಏನನ್ನಾದರೂ ಕಲಿಯುವ, ಬೆಳೆಯುವ, ಚೈತನ್ಯವೇ ಚದುರಂಗ. ಇವರ ಪ್ರಗತಿಶೀಲ, ನವ್ಯ, ದಲಿತ ಮತ್ತು ಬಂಡಾಯದ ಸಾಹಿತ್ಯ ಪ್ರಕಾರಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಇವರು

ಇಳಿವಯಸ್ಸಿನಲ್ಲೂ ಸಮಕಾಲೀನ ಯುವ ಬರಹಗಾರರಂತೆ ಸಾಹಿತ್ಯವನ್ನು ರಚಿಸಿದ್ದಾರೆ. ಇದರಿಂದಾಗಿ ಸ್ಪಷ್ಟವಾಗುವುದು ಏನೆಂದರೆ ಇವರು ಸಮಕಾಲೀನ ಯುವ ಬರಹಗಾರರಿಗಿಂತಲೂ ಹೆಚ್ಚು ಸಂಶೋಧನಾಶೀಲರಾಗಿದ್ದುದು. ಚದುರಂಗರು ಮೂಲತಃ ಸ್ವೀಕರಿಸುವ ಮನಸ್ಸಿನವರೇ ಹೊರತು ನಿರಾಕರಿಸುವ ಮನಸ್ಸಿನವರಲ್ಲ. ಆದ್ದರಿಂದ ಇವರ ಮನಸ್ಸು ಯಾವಾಗಲೂ ಹೊಸ ಚಿಂತನೆಗಳಿಗೆ ಸದಾ ತೆರೆದುಕೊಳ್ಳುತ್ತಿತ್ತು. ತಮ್ಮ ಪ್ರತಿಭೆಯನ್ನು ಆ ಹೊಸ ಚಿಂತನೆಗಳಡಿಯಲ್ಲಿ ಒರೆ ಹಚ್ಚಲು ಪ್ರಯತ್ನಿಸುತ್ತದೆ. ಆದುದರಿಂದಲೇ ಚದುರಂಗರನ್ನು ಅತ್ಯಂತ ಗೌರವ ಮತ್ತು ಅಭಿಮಾನದಿಂದ ನೋಡಲು ಸಾಧ್ಯವಾಗಿದೆ.

ಚದುರಂಗರ ಪ್ರತಿಭೆಯಿಂದ ಸಾಹಿತ್ಯ ಕೃಷಿ ಅಭಿವೃದ್ಧಿಯಾಗಿದೆ. ಇವರು ಕಥೆ, ಕಾದಂಬರಿ, ನಾಟಕಗಳನ್ನು ರಚಿಸಿದ್ದಾರೆ. ಇವರ ನಾಟಕಗಳಾದ ಸತ್ಯದ ಝೋಕು, ಕುಮಾರರಾಮ, ಇಲಿಬೋನು ಮತ್ತು ಬಿಂಬ ಪ್ರಮುಖವಾದವು. ಇವರ ಒಂದೊಂದು ನಾಟಕಗಳು ಒಂದೊಂದು ಪಂಥವನ್ನು ಪ್ರತಿನಿಧಿಸುತ್ತವೆ. ಪ್ರತಿಯೊಂದು ನಾಟಕಗಳು ಹೊಸಹೊಸ ದೃಷ್ಟಿಕೋನ ಒಳಗೊಂಡಿವೆ. ಚದುರಂಗರ ಸಮಗ್ರ ನಾಟಕಗಳನ್ನು ವಿಶ್ಲೇಷಿಸುವುದು ನಮ್ಮ ಉದ್ದೇಶವಾಗಿದೆ. ಚದುರಂಗರ ಸತ್ಯದ ಝೋಕು ಕೈಲಾಸಂ ರವರ ಪ್ರಹಸನಗಳ ಪ್ರಕಾರಕ್ಕೆ ಸೇರಿದೆ. ಕುಮಾರರಾಮ ನಾಟಕವು ಐತಿಹಾಸಿಕ ವಸ್ತುವನ್ನು ಒಳಗೊಂಡಿದೆ. ಇಲಿಬೋನು ನಾಟಕವು ಅಸಂಗತ ನಾಟಕವಾಗಿ ನವ್ಯದ ಪ್ರಭಾವಕ್ಕೆ ಒಳಪಟ್ಟಿದೆ. ಇನ್ನು ಬಿಂಬ ನಾಟಕವು ನವ್ಯೋತ್ತರದ ದಲಿತ ಬಂಡಾಯದ ಪ್ರಭಾವದಿಂದ ಮೂಡಿಬಂದಿದೆ.

ಚದುರಂಗರು ತಮ್ಮ ನಾಟಕಗಳಲ್ಲಿ ಹೆಣ್ಣನ್ನು ವಿಭಿನ್ನ ದೃಷ್ಟಿಕೋನದಿಂದ ಕಂಡಿದ್ದಾರೆ. ಇವರ 'ಇಲಿಬೋನು' ನಾಟಕದಲ್ಲಿ ಹೆಣ್ಣು ಒಂದು ಪ್ರೇರಕ ಶಕ್ತಿಯಾಗಿ ಕಂಡುಬರುತ್ತಾಳೆ. ಇಬ್ಬರು ಗಂಡಸರು ಪ್ರಯೋಜನವಿಲ್ಲದ ಕಾರ್ಯಗಳಲ್ಲಿ ತೊಡಗಿರುವಾಗ ಅವರನ್ನು ವಾಸ್ತವದ ನೆಲಗಟ್ಟಿಗೆ ತರಲು ಕಾರಣಳಾಗುತ್ತಾಳೆ. ಕುಮಾರರಾಮ ನಾಟಕದಲ್ಲಿ ರತ್ನಾಜಿ ಪಾತ್ರದ ಮುಖಾಂತರ ನಾಟಕ ದುರಂತವಾಗಿಸುತ್ತದೆ. ಕಂಪಿಲರಾಯನ ಪತ್ನಿ ಹರಿಯಾಲದೇವಿ, ರತ್ನಾಜಿಯ ಸೇವಕಿ ಸಂಗಾಯಿ, ಹೀಗೆ ಹಲವು ಹೆಣ್ಣು ಪಾತ್ರಗಳು ನಾಟಕದಲ್ಲಿ ಪ್ರಾಮುಖ್ಯತೆಯನ್ನು ವಹಿಸಿವೆ. ಚದುರಂಗರ ಕೊನೆಯ ನಾಟಕವಾದ ಬಿಂಬ ನಾಟಕದಲ್ಲಿಯೂ ಹೆಣ್ಣು ಮುಖ್ಯ ಪ್ರೇರಕ ಶಕ್ತಿಯಾಗಿ ಕಾಣುತ್ತಾಳೆ. ಸೀತೆಯ ಕಾರಣದಿಂದ ರಾವಣನು ರಾಮ ಮತ್ತು ಸೀತೆಯನ್ನು ಬೇರ್ಪಡಿಸುತ್ತಾನೆ ನಂತರ ಶೂರ್ಪನಖಿಯ

ಪಾತ್ರವು ಸಹಾ ಬಿಂಬ ನಾಟಕದಲ್ಲಿ ಕಂಡುಬರುತ್ತದೆ. ಒಟ್ಟಾರೆಯಾಗಿ ಚದುರಂಗರ ನಾಟಕಗಳಲ್ಲಿ ಹೆಣ್ಣು ಕ್ರಿಯಾಶೀಲವಾಗಿಸುವ ಪ್ರೇರಕ ಶಕ್ತಿಯಾಗಿದ್ದಾಳೆ.

ಚದುರಂಗರು ನಾಟಕವನ್ನು ಬರೆಯುವ ಸಮಯಕ್ಕೆ ರಂಗಭೂಮಿಯ ಬಗ್ಗೆ ಹಲವಾರು ಅಂಶಗಳು ಹೊರಬಂದಿದ್ದವು. ಅವರ ಸತ್ಯದ ಝೋಕು ಗಂಭೀರವಾಗಿಲ್ಲದೆ ಕೇವಲ ಪ್ರಹಸನವಾಗಿ ಮಾತ್ರ ಉಳಿಯುತ್ತದೆ. ಮುಂದೆ ತಮ್ಮ ನಾಟಕವಾದ ಕುಮಾರರಾಮ ಬರೆಯುವಾಗ ನಾಟಕೀಯ ಸನ್ನಿವೇಶ ನಿರ್ಮಾಣದ ಜೊತೆಗೆ ಸಿನಿಮೀಯ ಸನ್ನಿವೇಶಗಳಿಗೂ ನಾಂದಿ ಹಾಡಿದ್ದಾರೆ. ಇವರು ನಾಟಕೀಯ ಸನ್ನಿವೇಶದ ಜೊತೆಗೆ ಸಿನಿಮೀಯ ಸನ್ನಿವೇಶವನ್ನು ನಿರ್ಮಿಸಿದ್ದಾರೆ. ಚದುರಂಗರ ಕುಮಾರರಾಮ ನಾಟಕವು ಎರಡು ರೀತಿಯ ಸನ್ನಿವೇಶಗಳಿಗೂ ಹೊಂದುವಂತದ್ದಾಗಿದೆ. ಈ ನಾಟಕದಲ್ಲಿ ಸಿನಿಮೀಯ ದೃಶ್ಯಗಳಿಗೆ ಒತ್ತು ಕೊಟ್ಟಂತಹ ಅನೇಕ ಘಟನೆಗಳಿವೆ. ಚದುರಂಗರು ಈ ನಾಟಕವನ್ನು ಬರೆಯುವ ಸಮಯದಲ್ಲಿ ಚಲನ ಚಿತ್ರದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದರು. ಆ ನಂತರ ಅವರು ಚಲನಚಿತ್ರವನ್ನು ನಿರ್ದೇಶನ ಸಹ ಮಾಡಿದ್ದಾರೆ. ತಮ್ಮ ನಾಟಕಗಳಲ್ಲಿ ನಾಟಕೀಯ ಸನ್ನಿವೇಶದ ಜೊತೆಗೆ ಸಿನಿಮೀಯ ಸನ್ನಿವೇಶಗಳನ್ನು ಒಳಗೊಂಡಿರುವಂತೆ ಮಾಡಿದ್ದಾರೆ. ಇವರ ಬಿಂಬ, ಇಲಿಬೋನು, ನಾಟಕಗಳಲ್ಲಿ ನಾಟಕೀಯ ರಂಗಭೂಮಿಯ ಎಲ್ಲಾ ಅಂಶಗಳು ಕಾಣುತ್ತವೆ. ಇದರ ಜೊತೆಗೆ ಕುಮಾರರಾಮ ನಾಟಕೀಯ ಸನ್ನಿವೇಶದ ಜೊತೆಗೆ ಸಿನಿಮೀಯ ಸನ್ನಿವೇಶ ನಿರ್ಮಾಣವಾಗಿದೆ, ಇದನ್ನು ಅಧ್ಯಯನದ ಮೂಲಕ ವಿವರವಾಗಿ ತಿಳಿಯಲು ಸಾಧ್ಯ.

ಚದುರಂಗರು ತಮ್ಮ ಸತ್ಯದ ಝೋಕು ನಾಟಕದಲ್ಲಿ ಇಂದಿನ ವಾಸ್ತವತೆಯನ್ನು ತಿಳಿಸಿದ್ದಾರೆ. ಈ ನಾಟಕದಲ್ಲಿ ಸುಳ್ಳು ಮತ್ತು ಸತ್ಯಗಳ ನಡುವೆ ಸಂಘರ್ಷ ಏರ್ಪಡುತ್ತದೆ. ಕೊನೆಗೆ ಇಂದಿನ ಪ್ರಪಂಚದಲ್ಲಿ ಸತ್ಯವನ್ನು ಹೇಳಿ ಜೀವನ ಸಾಗಿಸುವುದೇ ಪ್ರಯಾಸವಾಗಿರುವುದು ತಿಳಿಯುತ್ತದೆ. ಇಂದಿನ ಜಗತ್ತಿನಲ್ಲಿ ನಾವು ಉಳಿಯಲು ಸುಳ್ಳಿನ ದಾಸರಾಗಲೇಬೇಕು, ಸುಳ್ಳು ಹೇಳಲೇಬೇಕು ಎಂಬ ವಿಚಾರವನ್ನು ಚದುರಂಗರು ಬಿಂಬಿಸಿದ್ದಾರೆ.

ಚದುರಂಗರು ಬರೆದ ನಾಟಕಗಳಲ್ಲಿ ಹೆಣ್ಣು ಪ್ರೇರಕ ಶಕ್ತಿಯಾಗಿ ಮೂಡಿಬಂದಿದ್ದಾಳೆ. ಹಾಗೆಯೇ ಅವರ ಪ್ರತಿಯೊಂದು ನಾಟಕಗಳಲ್ಲಿ ಪ್ರೀತಿ ಎಂಬುದು ಕಂಡುಬರುತ್ತದೆ. ಇವರ ಬಿಂಬ

ನಾಟಕದಲ್ಲಿ ಪ್ರೀತಿ ಎಂಬುದು ದೇಹದ ಆಕರ್ಷಣೆಯಲ್ಲ ಅದು ಹೃದಯಗಳ ಬೆಸುಗೆ ಎಂಬ ವಿಚಾರಕ್ಕೆ ಒತ್ತು ನೀಡಿದ್ದಾರೆ. ಶ್ರೀರಾಮ ಮತ್ತು ಸೀತೆಯ ನಡುವೆ ಇರುವುದು ನಿಜವಾದ ಪ್ರೀತಿ, ಇದುವೇ ನಿಜವಾದ ಹೃದಯಗಳ ಬೆಸುಗೆ ಇದನ್ನು ಬಿಂಬ ನಾಟಕದಲ್ಲಿ ಕಾಣಬಹುದಾಗಿದೆ. ಆದರೆ ರಾವಣನು ಸೀತೆಯನ್ನು ಇಷ್ಟಪಡುವುದು ಕೇವಲ ದೇಹದ ಆಕರ್ಷಣೆಯಿಂದ, ಆದಕಾರಣ ರಾವಣನು ಸೀತೆಯನ್ನು ಅಪಹರಿಸಿ ರಾಮನಿಂದ ದೂರ ಕರೆದೊಯ್ಯುತ್ತಾನೆ. ನಂತರ ಶೂರ್ಪನಖಿಯು ಸಹ ರಾಮನನ್ನು ನೋಡಿ ಆಕರ್ಷಿತಳಾಗಿ, ರಾಮ ಸೀತೆಯರು ದೂರವಾಗಲು ಕಾರಣವಾಗುತ್ತಾಳೆ. ಇನ್ನೂ ಹಲವಾರು ಸನ್ನಿವೇಶಗಳಲ್ಲಿ ಪ್ರೀತಿ ಎಂಬುದು ಕೇವಲ ದೇಹದ ಆಕರ್ಷಣೆಯಲ್ಲ ಅದು ಹೃದಯಗಳ ಬೆಸುಗೆ ಎಂಬುದು ನಿರೂಪಿತವಾಗಿದೆ. ಇದನ್ನು ರಾಮ ಮತ್ತು ಸೀತೆಯರ ಜೀವನದಿಂದ ತಿಳಿಯಬಹುದಾಗಿದೆ. ಅಂತಿಮವಾಗಿ ರಾಮ ಸೀತೆಯನ್ನು ಸ್ವೀಕರಿಸುತ್ತಾನೆ.

ಚದುರಂಗರು ರಾಮಾಯಣದ ವಸ್ತುವನ್ನು ತೆಗೆದುಕೊಂಡಿದ್ದಾರೆ. ಇವರ ಬಿಂಬ ನಾಟಕಕ್ಕೆ 18ನೇ ಶತಮಾನದಲ್ಲಿದ್ದ ಹೆಳವನಕಟ್ಟೆ ಗಿರಿಯಮ್ಮನ ಲವ-ಕುಶರ ಕಾಳಗ ಕಾವ್ಯವು ನನ್ನ ನಾಟಕಕ್ಕೆ ಸ್ಫೂರ್ತಿಯಾಗಿದೆ ಎಂದು ಹೇಳಿಕೊಂಡಿದ್ದಾರೆ. ಇಲ್ಲಿ ಶೂರ್ಪನಖಿಗೆ ರಾಮನ ಮೇಲಿರುವ ಮೋಹವನ್ನು ನಿರೂಪಿಸಲಾಗಿದೆ. ಮೂಲ ರಾಮಾಯಣದಲ್ಲಿ ರಾಮನು ಅಗಸನ ಮಾತನ್ನು ಕೇಳಿ ಸೀತೆಯನ್ನು ಕಾಡಿಗೆ ಕಳುಹಿಸುತ್ತಾನೆ. ಚದುರಂಗರು ಬಿಂಬ ನಾಟಕದಲ್ಲಿ ರಾಮ, ಸೀತೆ ಅಗಸನ ವಿಚಾರವಾಗಿ ಬದಲಾವಣೆ ತಂದಿದ್ದಾರೆ, ಇಲ್ಲಿ ಶೂರ್ಪನಖಿಯು ಸೀತೆಯ ಕೈಯಿಂದ ರಾವಣನ ಚಿತ್ರಪಟವನ್ನು ಬರೆಯಿಸುತ್ತಾಳೆ. ನಂತರ ಅದು ಅವಳ ಎದೆಗೆ ಅಂಟಿಕೊಳ್ಳುವಂತೆ ಶಾಪವನ್ನು ನೀಡುತ್ತಾಳೆ. ಸೀತೆಯು ತಾನಾಗಿಯೇ ಕಾಡಿಗೆ ಹೋಗುತ್ತಾಳೆ. ಇದೆಲ್ಲವನ್ನು ಶೂರ್ಪನಖಿಯು ಮಾಡುವುದು ರಾಮನ ಮೇಲಿನ ಮೋಹದಿಂದ, ಹಾಗೆಯೇ ರಾಮನು ಶೂರ್ಪನಖಿಯನ್ನು ನಿರಾಕರಿಸಿದಾಗ ಶೂರ್ಪನಖಿಯು ರಾಮನ ಮೇಲಿನ ಮೋಹದಿಂದ ತನಗೆ ಸಿಗದಿದ್ದ ಪ್ರೀತಿ ಸೀತೆಗೂ ಸಿಗಬಾರದೆನ್ನುವ ಸೇಡಿನಿಂದ ಸೀತೆಯನ್ನು ಕಾಡಿನಲ್ಲಿ ಅಲೆಯುವಂತೆ ಮಾಡುತ್ತಾಳೆ. ಒಟ್ಟಾರೆಯಾಗಿ ಬಿಂಬ ನಾಟಕವು ಶೂರ್ಪನಖಿಯು ತನ್ನ ಸೇಡನ್ನು ತೀರಿಸಿಕೊಳ್ಳುವ ಕತೆಯಾಗಿ ಮೂಡಿಬಂದಿದೆ.

ಚದುರಂಗರ ನಾಟಕಗಳನ್ನು ಸಮಗ್ರವಾಗಿ ಅಧ್ಯಯನ ಮಾಡುವಾಗ ವಿವಿಧ ರೀತಿಯ ಮಜಲುಗಳು ಕಾಣುತ್ತವೆ. ಪ್ರತಿಯೊಂದು ನಾಟಕಗಳು ವಿವಿಧ ಟ್ರೆಂಡ್‌ಗಳನ್ನು ಪ್ರತಿನಿಧಿಸುತ್ತವೆ. ಈ

ಮೇಲಿನ ವಿಚಾರವಾಗಿ ಎಲ್ಲಾ ದೃಷ್ಟಿಕೋನಗಳಿಂದ ಸೂಕ್ತ ಎನಿಸುತ್ತದೆ. ಹೀಗೆ ಅಧ್ಯಯನ ಮಾಡುವಾಗ ನಾಟಕಗಳಲ್ಲಿ ಅನೇಕ ಒಳನೋಟಗಳು ಕಂಡುಬರುತ್ತವೆ. ನಾವು ಅವರ ನಾಟಕಗಳನ್ನು ವಿವಿಧ ರೀತಿಯ ದೃಷ್ಟಿಕೋನಗಳಿಂದ ಅಧ್ಯಯನ ಮಾಡುವುದು ಸೂಕ್ತವೆನಿಸಿಕೊಳ್ಳುತ್ತದೆ.

ಇಲ್ಲಿ. ಚದುರಂಗರ 4 ನಾಟಕಗಳನ್ನು ವಿಭಿನ್ನ ದೃಷ್ಟಿಕೋನಗಳಿಂದ ನೋಡುವ ಪ್ರಯತ್ನ. ಇವರ ಒಂದೊಂದು ನಾಟಕವೂ ವಿಭಿನ್ನ ನೋಟಗಳ ರೀತಿಯಲ್ಲಿ ಮೂಡಿ ಬಂದಿದೆ.

# ಅಧ್ಯಾಯ – 2

## ಇಲಿಬೋನು, ಬಿಂಬ ನಾಟಕದಲ್ಲಿ ಬರುವ ಹೆಣ್ಣಿನ ಪಾತ್ರ

ತೊಡಗಿರುವ ಮುರುಕು ಮಂಟಪದ ಬಳಿ ಗಂಡಸರ ಕಾರ್ಯಕ್ಕೆ ಅಡ್ಡಿಯಾಗಿ ಮಂಟಪದ ಬಳಿ ಇಲಿಗಳು ಬರುತ್ತವೆ. ಆಗ ಇಲಿಬೋನು ತರಬೇಕೆಂದು ನಿರ್ಧಾರ ಮಾಡುತ್ತಾರೆ. ಆದರೆ ಹೆಣ್ಣಿನ ಪ್ರವೇಶದ ನಂತರ ಆ ಇಬ್ಬರು ಗಂಡಸರು ಸಹ ಇಲಿಯಂತೆ ಬೋನಿನಲ್ಲಿ ಸಿಕ್ಕಿಹಾಕಿಕೊಂಡಂತಹ ಅನುಭವವಾಗುತ್ತದೆ. ನಂತರ ವಾಸ್ತವದ ವರ್ತಮಾನ ಕಾಲಕ್ಕೆ ಬರುವುದಕ್ಕೆ ಸಾಧ್ಯವಾಗುತ್ತದೆ.

ನಾಟಕದಲ್ಲಿ ಹೆಂಗಸು ಎರಡನೇ ದೃಶ್ಯದಲ್ಲಿ ಪ್ರವೇಶಿಸುತ್ತಾಳೆ. ಅವಳು ತನ್ನ ಗಂಡನನ್ನು ಹುಡುಕಿಕೊಂಡು ಬರುತ್ತಾಳೆ. ಅಲ್ಲಿ ಈ ಇಬ್ಬರು ಗಂಡಸರನ್ನು ಭೇಟಿ ಮಾಡುತ್ತಾಳೆ. ಮೊದಲಿಗೆ ಮುರಿದ ಏಣಿಯಲ್ಲಿ ಮೇಲಕ್ಕೆ ಏರುವವನನ್ನು ಭೇಟಿಯಾಗುತ್ತಾಳೆ. ಅವನನ್ನು ನೋಡಿದ ಹೆಂಗಸು ತನ್ನ ಗಂಡನ ತರಹವೇ ಇದ್ದಾನೆ ಎಂದು ಅವನನ್ನು ಮಾತನಾಡಿಸುತ್ತಾಳೆ. ಆದರೆ ಏರುವವನುಅವಳನ್ನು ತನ್ನ ಹೆಂಡತಿ ಎಂದು ಸ್ವೀಕರಿಸುವುದಿಲ್ಲ. ಆದರೂ ಹೆಂಗಸು ಅವನನ್ನು ಬಿಡುವುದಿಲ್ಲ. ಗಂಡ ಎಂದು ಒಪ್ಪುವವರೆಗೂ ತಾನು ಇಲ್ಲಿಂದ ಹೋಗುವುದಿಲ್ಲ ಎಂದು ನಿರ್ಧಾರ ಮಾಡುತ್ತಾಳೆ. ಏರುವವನಿಗೆ ಏನು ಮಾಡಬೇಕು ಎಂದು ತಿಳಿಯುವುದಿಲ್ಲ. ಅಷ್ಟರ ಒಳಗೆ ಅಗೆಯುವವನು ಅಲ್ಲಿಗೆ ಬರುತ್ತಾನೆ. ಇವನು ಸಹ ಹೆಂಗಸನ್ನು ಮಾತನಾಡಿಸುತ್ತಾನೆ. ಆಗ ಹೆಂಗಸು ಇವನೇ ನನ್ನ ಗಂಡನಿರಬೇಕು ಎಂದು ಇವನನ್ನು ಕೇಳಿಕೊಳ್ಳುತ್ತಾಳೆ. ಆದರೆ ಅಗೆಯುವವನು ಸಹ ಅವಳನ್ನು ತಿರಸ್ಕಾರ ಮಾಡುತ್ತಾನೆ. ಇವರು ಅನುಮಾನದ ಮಾತುಗಳನ್ನು ಆಡಿದ್ದರಿಂದ ಹೆಂಗಸು ನನ್ನ ಜೊತೆ ನನ್ನ ಗಂಡ ಬರಲೇಬೇಕು ಎಂದು ಹೇಳಿ ಇರಲು ನಿರ್ಧರಿಸುತ್ತಾಳೆ. ಹೆಂಗಸು ಹೇಳುವ ಮಾತಿಗೆ ಮೊದ ಮೊದಲು ಗಂಡಸರು ಜೀಳುವುದಿಲ್ಲ. ಅಂದರೆ ಆಕರ್ಷಣೆಯ ಅವಳ ಮಾತಿಗೆ ಬಲಿಯಾಗುವುದಿಲ್ಲ.

ಉದಾ:-

1. "<u>ಹೆಂಗಸು</u> : (ಶರಟಿನ ಗುಂಡಿ ತಿರುಗಿಸುತ್ತಾ ಮುಸಲಾಯಿಸುವ ಸ್ವರದಲ್ಲಿ) ನಿಮ್ಮ ಕೆಲಸ ಕಾರ್ಯಗಳಿಗೆ ನಾಯಾಕ್ ಅಡ್ಡಿ ಬರ್ಲಿ? ಆದಷ್ಟು ಸಹಾಯಕಳಾಗಿರ್‍ತೀನಿ. ಹಸಿವಾದಾಗ ರುಚಿ-ರುಚಿಯಾದ ಊಟ ಹಾಕ್ತೀನಿ. ತೊಟ್ಟುಕೊಳ್ಳೋಕೆ ಬಟ್ಟೆಗಳನ್ನೆಲ್ಲಾ ಮಡಿಮಡಿಯಾಗಿ ಒಗೆದು ಕೊಡ್ತೀನಿ.

<u>ಅಗೆಯುವವನು</u>: (ಗುಂಡಿಯ ಕಡೆ ನೋಡುತ್ತಾ) ಅದ್ಯಾವುದರ ಬಗ್ಗೆಯೂ ನಂಗೆ ಆಸಕ್ತಿ ಇಲ್ಲ. ನಾನು ಅಗೀಬೇಕು, ಮೂಲಗಳ್ನ ಶೋಧಿಸಬೇಕು.

ಏರುವವನು: (ತನ್ನಷ್ಟಕ್ಕೆ) ನಾನು ಮೇಲೆ ಮೇಲೆ ಎತ್ತರ ಎತ್ತರ ಏರಬೇಕು. ದೂರ ದೂರದ ವಿಸ್ತಾರಗಳ ಅಪಾರಕ್ಕೆ ಹಾರಬೇಕು."

ಈ ಮೇಲಿನ ಭಾಗವನ್ನು ಗಮನಿಸುವುದಾದರೆ ಇಲ್ಲಿ 3 ಪಾತ್ರಗಳು ಕಾಣುತ್ತವೆ. ಅವುಗಳ ಸ್ಪಷ್ಟವಾದ ಲಕ್ಷಣಗಳು ಕಾಣುತ್ತವೆ. ಇಲ್ಲಿನ ಹೆಂಗಸಿನ ಪಾತ್ರವೂ ವರ್ತಮಾನ ಕಾಲದ ಸಂಕೇತವಾಗಿದೆ . ವಾಸ್ತವದ ನೆಲೆಯಲ್ಲಿ ಇವಳು ಕಂಡು ಬರುತ್ತಾಳೆ. ನಂತರ 2 ಪಾತ್ರಗಳು ಅಗೆಯುವವನು, ಏರುವವನು ಭ್ರಮೆಯಲ್ಲಿರುವಂತಹವುಗಳಾಗಿವೆ. ಇವರು ವಾಸ್ತವದ ನೆಲೆಗಿಂತ ಭ್ರಮೆಯಲ್ಲಿರುವುದೇ ಹೆಚ್ಚು. ಒಬ್ಬ ಭವಿಷ್ಯತ್ ಕಾಲಕ್ಕೆ ಸಾಗಲು ಮೇಲು ಮುಖಮಾಡಿದ್ದಾನೆ. ಇನ್ನೊಬ್ಬನು ಭೂತಕಾಲವನ್ನು ತಿಳಿಯುವ ಸಂಕೇತವಾಗಿ ಕೆಳಮುಖವಾಗಿ ಅಗೆಯುತ್ತಾನೆ. ಇವರು ಯಾವುದೇ ಪ್ರಯೋಜನವಿಲ್ಲದ ಕಾರ್ಯದಲ್ಲಿ ತೊಡಗಿರುತ್ತಾರೆ. ಇವರನ್ನು ಹೆಂಗಸು ಪ್ರವೇಶಿಸಿದ ನಂತರ ವಾಸ್ತವದ ನೆಲೆಗಟ್ಟಿಗೆ ತರಲು ಪ್ರಯತ್ನಿಸುತ್ತಾಳೆ. ಅಂದರೆ ಆ ಇಬ್ಬರೂ ಗಂಡಸರಿಗೂ ತಾಯಿಯಾಗಿ, ದೇವರಾಗಿ ಕಡೆಗೆ ಕಾಣುತ್ತಾಳೆ. ನಂತರ ಅವರನ್ನು ನಿಜವಾಗಿಯೂ ಕ್ರಿಯಾಶೀಲವಾಗಿಸುವ ಪ್ರೇರಕ ಶಕ್ತಿಯಾಗಿ ಬರುತ್ತಾಳೆ.

ಏರುವವನು ಮುರಿದ ಏಣಿಯ ಮೇಲೆ ಏರುತ್ತಾನೆ. ಆದರೆ ಕಾಲು ಜಾರಿ ಬಿದ್ದು ಹೋಗುತ್ತಾನೆ. ಆಗ ಹೆಂಗಸು ಅವನಿಗೆ ಸಹಾಯ ಮಾಡುತ್ತಾಳೆ. ಅವನನ್ನು ಪ್ರೀತಿಯಿಂದ ಮೇಲೆ ಎತ್ತುತ್ತಾಳೆ. ಇದರಿಂದ ಏರುವವನು ಅವಳ ಮೇಲೆ ಕನಿಕರ ಉಂಟಾಗುತ್ತದೆ. ನನ್ನ ತಂಟೆಗೆ ಬರದೇ ಇಲ್ಲೇ ಒಂದು ಮೂಲೆಯಲ್ಲಿ ಇರಲಿ ಬಿಡು ಎಂಬ ಸಮಾಧಾನದ ಮಾತು ಅವನಿಂದಲೇ ಬರುವಂತಾಗುತ್ತದೆ. ಅಂದರೆ ಇಲ್ಲಿ ಏರುವವನು ಹೆಂಗಸಿನ ಬಲೆಗೆ ಬಿದ್ದಂತಾಗಿದೆ. ಅಗೆಯುವವನು ತನ್ನ ಕೆಲಸದಲ್ಲಿ ತೊಡಗಿರುತ್ತಾನೆ. ಆದರೆ ಅವನಿಗೆ ಊಟವಿಲ್ಲದೇ ಸುಸ್ತಾಗುತ್ತಾನೆ. ಆಗ ಅದನ್ನು ಕಂಡು ಹೆಂಗಸು ತಿನ್ನಲು ಕೋಡುಬಳೆಯನ್ನು ಕೊಡುತ್ತಾಳೆ. ಅದನ್ನು ತಿಂದ ನಂತರ ಅಗೆಯುವವನಿಗೂ ಹೆಂಗಸಿನ ಮೇಲೆ ಕನಿಕರ ಉಂಟಾಗುತ್ತದೆ. ಹೀಗೆ ಇಬ್ಬರಿಗೂ ಹೆಂಗಸಿನ ಮೇಲೆ ಕನಿಕರ ಉಂಟಾಗುತ್ತದೆ. ಹೀಗೆ ಇಬ್ಬರಿಗೂ ಹೆಂಗಸಿನ ಮೇಲೆ ಕನಿಕರ ಉಂಟಾದ ಮೇಲೆ ಅವಳನ್ನು ತಿರಸ್ಕಾರ ಮಾಡುವುದಿಲ್ಲ. ನಂತರ ಅವರ ಕೆಲಸಗಳಲ್ಲಿ ತೊಡಗುತ್ತಾರೆ. ಆದರೆ ಅದೆಲ್ಲ ವ್ಯರ್ಥವಾದ ಕೆಲಸ. ಹೆಂಗಸು ಸೌದೆಗಳನ್ನು ಹುಡುಕಿಕೊಂಡು ಬಂದು ಅಡುಗೆ ಮಾಡಲು ಪ್ರಯತ್ನಿಸುತ್ತಾಳೆ. ಆದರೆ ಹಸಿ

ಸೌದೆಯಾಗಿದ್ದರಿಂದ ಅಡುಗೆ ಮಾಡಲು ಸಾಧ್ಯವಾಗುವುದಿಲ್ಲ. ಅವಳಿಗೆ ಕೋಪ ಬಂದು ನಿಮಗೆ ಸಹಾಯ ಮಾಡುತ್ತಿದ್ದೇನೆ ನೀವು ನಿಮ್ಮ ವ್ಯರ್ಥವಾದ ಕಾರ್ಯದಲ್ಲಿ ತೊಡಗಿದ್ದೀರ ಎಂದು ಪ್ರಶ್ನಿಸುತ್ತಾಳೆ. ಆಗ ಅವಳ ಪ್ರಶ್ನೆಗೆ ಅವರು ಯಾವುದೇ ಉತ್ತರ ನೀಡಲು ಸಾಧ್ಯವಾಗದೇ ಅಸಮರ್ಥರಾಗುತ್ತಾರೆ. ಏಕೆಂದರೆ ತಾವು ಮಾಡುವ ಕೆಲಸದಿಂದ ಏನು ಪ್ರಯೋಜನ ಎಂಬುದೇ ಅವರಿಗೆ ತಿಳಿಯುವುದಿಲ್ಲ. ಕೇವಲ ಯಾವುದೋ ಸಾಧನೆ ಮಾಡುತ್ತಿದ್ದೇವೆ ಎಂಬ ಭ್ರಮೆಯಲ್ಲಿದ್ದೇವೆ, ನಾವು ಮಾಡುತ್ತಿರುವ ಕಾರ್ಯದಿಂದ ಯಾವುದೇ ಪ್ರಯೋಜನವಿಲ್ಲ, ಇದೊಂದು ವ್ಯರ್ಥವಾದ ಕೆಲಸ, ಇದೊಂದು ಭ್ರಮೆಯಲ್ಲಿರುವ ಮನಸ್ಥಿತಿ ಎಂದು ಅವರಿಗೆ ತಿಳಿಯುತ್ತದೆ. ಹೆಂಗಸು ಆ ಇಬ್ಬರಿಗೂ ನಿಮಗೆ ಅಡುಗೆ ಮಾಡುತ್ತೇನೆ. ಅದಕ್ಕಾಗಿ ನಿಮ್ಮ ವ್ಯರ್ಥವಾದ ಕೆಲಸ ಬಿಟ್ಟು ಒಣಸೌದೆಯನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾಳೆ. ಅವಳ ಮಾತುಗಳಿಂದ ಆ ಇಬ್ಬರೂ ಭ್ರಮೆಯ ಮನಸ್ಥಿತಿಯಿಂದ ವಾಸ್ತವದ ಸ್ಥಿತಿಗೆ ಬರುತ್ತಾರೆ. ಅವರಲ್ಲಿಯೇ ತಾವು ಮಾಡುತ್ತಿದ್ದ ಕಾರ್ಯದಿಂದ ಸಾಧಿಸಿದ್ದಾದರೂ ಏನು ಎಂಬ ಪ್ರಶ್ನೆಗಳು ಮೂಡುತ್ತದೆ.

ಹೀಗೆ ವಾಸ್ತವತೆಗೆ, ವರ್ತಮಾನಕಾಲಕ್ಕೆ ಆ ಇಬ್ಬರು ಗಂಡಸರು ಬರುವಂತೆ ಹೆಂಗಸು ಮಾಡುತ್ತಾಳೆ. ಋಷಿಗಳು ಭ್ರಮೆಯೇ ಜೀವನವಲ್ಲ ಎಂಬುದನ್ನು ತಿಳಿಯುತ್ತಾರೆ. ಇಲ್ಲಿ ಅವರ ಭ್ರಮೆಯನ್ನು ನಾಶಮಾಡಿ ವಾಸ್ತವ ಜಗತ್ತಿನಲ್ಲಿ ಬದುಕಬಹುದಾದ ಅನಿವಾರ್ಯತೆಯನ್ನು ತಿಳಿಸಿ ಹೇಳುತ್ತಾಳೆ. ಮುಖ್ಯವಾಗಿ ಇಲ್ಲಿ ಅವರು ಕ್ರಿಯಾಶೀಲರಾಗಲು ಮುಖ್ಯ ಪ್ರೇರಕ ಶಕ್ತಿಯಾಗಿ ಕಂಡು ಬರುತ್ತಾಳೆ.

'ಬಿಂಬ' ನಾಟಕದಲ್ಲಿ ನಾಟಕಕಾರರು ಹೆಣ್ಣಿನ ಪಾತ್ರಗಳನ್ನು ನಿರೂಪಿಸಿದ್ದಾರೆ. ಅವರ ಹೆಣ್ಣಿನ ಪಾತ್ರಗಳು ಒಂದೊಂದು ರೀತಿಯಲ್ಲಿ ವಿಶಿಷ್ಟ ಪಾತ್ರವನ್ನು ವಹಿಸುತ್ತವೆ. ಮುಖ್ಯವಾಗಿ 'ಬಿಂಬ' ನಾಟಕದಲ್ಲಿ ಮೊದಲಿಗೆ ಸೀತೆಯ ಸೇವಕಿಯಾದ ಚೇಟಿ ಸುಜಾತೆ ಕಂಡುಬರುತ್ತಾಳೆ. ಇಲ್ಲಿ ಸೀತೆಗೆ ಸೇವೆಯನ್ನು ಮಾಡುತ್ತಿರುವ ಸುಜಾತೆಯೂ ರಾಣಿಯ ಅಂತಃಪುರದಲ್ಲಿ ಇರುತ್ತಾಳೆ. ಅಲ್ಲಿಗೆ ಸೀತೆಗೆ ಕಷ್ಟವನ್ನು ಕೊಡಬೇಕು ಎಂಬ ದ್ವೇಷದಿಂದ ಶೂರ್ಪನಖಿಯೂ ಕೊರವಂಜಿಯ ಮಾರುವೇಷದಲ್ಲಿ ಸೀತೆಯನ್ನು ಕಾಣಲು ಅಂತಃಪುರಕ್ಕೆ ಹೋಗುತ್ತಾಳೆ. ಆಗ ಸೀತೆಯನ್ನು ಕಾಯುವ ಸುಜಾತೆಯೂ

ತನ್ನ ರಾಣಿಯಾದ ಸೀತೆಯನ್ನು ಶೂರ್ಪನಖಿಯಿಂದ ದೂರವಿರಿಸಲು ಪ್ರಯತ್ನಿಸುತ್ತಾಳೆ. ಶೂರ್ಪನಖಿಯೂ ಸೀತೆಯ ಅಂತಃಪುರಕ್ಕೆ ಬಂದಾಗ ಸುಜಾತೆಯೂ ತಡೆದು ಪ್ರಶ್ನಿಸುತ್ತಾಳೆ.

2. "<u>ಚೇಟಿ:</u>– (ಪ್ರವೇಶಿಸಿ) ಹೇಗೆ ಬಂದೆಯೆ ನೀನು
ರಾಣಿಯಂತಃಪುರಕ್ಕೆ
ಒಳಗೆ ಬಿಟ್ಟರು ಹೇಗೆ
ಕಾವಲಿನ ಭಟರು?

ಇದಕ್ಕೆ ಪ್ರತಿಯಾಗಿ ಮಾರುವೇಷದಲ್ಲಿರುವ ಶೂರ್ಪನಖಿಯೂ ಈ ರೀತಿ ಹೇಳುತ್ತಾಳೆ.

ಕೊರವಂಜಿ : " ಈ ಊರಿನವಳಲ್ಲ
ಈ ಕೇರಿಯವಳಂತು
ಅಲ್ಲವೇ ಅಲ್ಲ
ಲೋಕ ಲೋಕವ ಸುತ್ತಿ
ಬಂದಿಹೆನು ನಾನು
ಅತಳ ವಿತಳ ಸುತಳ
ತಳಾತಳ ರಸಾತಳ
ಪಾತಾಳಗಳನ್ನೆಲ್ಲ
ನೋಡಿ ಬಂದಿಹೆನು.
ನನ್ನ ತಡೆಯುವರಾರು
ಹುಟ್ಟಿಲ್ಲ ಧರೆಯೊಳಗೆ
ನಿನಗೇಕೆ ಈ ಚಿಂತೆ
ಕೊರವಿ ಬಂದಿಹಳೆಂದು
ಒಡತಿಯಲ್ಲಿಗೆ ತೆರಳಿ ತಿಳಿಸು ಜಾಣೆ"

ಈ ರೀತಿಯಾಗಿ ಕೊರವಿ ಮತ್ತು ಚೇಟಿಯ ಮಧ್ಯೆ ಸಂಭಾಷಣೆ ನಡೆಯುತ್ತದೆ. ಅಂದರೆ ಚೇಟಿಯೂ ಶೂರ್ಪನಖಿಯೂ ಮಾರುವೇಷದಲ್ಲಿ ಬಂದಿದ್ದಾಳೆ ಎಂಬುದನ್ನು ತಿಳಿಯಲು

ಸಾಧ್ಯವಾಗುವುದಿಲ್ಲ. ಅಷ್ಟರಲ್ಲಿ ಸೀತೆಯೂ ಬಂದಾಗ ಚೇಟಿ ನಿರ್ಗಮಿಸುತ್ತಾಳೆ. ಮುಂದೆ ಕೊರವಿಯ ಮೋಸದಿಂದ ಸೀತೆಯೂ ಕಷ್ಟದಲ್ಲಿ ಸಿಲುಕುತ್ತಾಳೆ. ಇದನ್ನು ಚೇಟಿಯೂ ತಡೆಯಲು ಸಾಧ್ಯವಾಗುವುದಿಲ್ಲ.ಸೀತೆಯೂ ಕೊರವಂಜಿಯ ಮೋಸದಿಂದ ರಾವಣನ ಚಿತ್ರಪಟವನ್ನು ಬರೆದು ಪ್ರಾಣಸಂಕಟಕ್ಕೆ ಸಿಲುಕುತ್ತಾಳೆ. ಸೀತೆಗೆ ಆಪ್ತ ಸೇವಕಿಯಾದ ಸುಜಾತೆ ತನ್ನ ಕಷ್ಟವನ್ನು ಚೇಟಿಯಲ್ಲಿ ಸೀತೆ ಹೇಳುತ್ತಾಳೆ. ಆಗ ತನ್ನ ರಾಣಿಯ ಕಷ್ಟವನ್ನು ತಿಳಿದು ಸಹಾಯ ಮಾಡಲು ಪ್ರಯತ್ನಿಸುತ್ತಾಳೆ. ಹೇಗೆಂದರೆ ರಾವಣನ ಚಿತ್ರಪಟವೂ ಸೀತೆಯನ್ನು ಅಂಟಿಕೊಂಡಿರುತ್ತದೆ. ಅದನ್ನು ಚೇಟಿಯು ಕಿತ್ತು ಹಾಕುತ್ತಾಳೆ, ಸುಡುತ್ತಾಳೆ. ನೀರಿನಲ್ಲಿ ಬೇಯಿಸುತ್ತಾಳೆ. ಆದರೂ ಅದು ನಾಶವಾಗುವುದಿಲ್ಲ. ಆಗ ಚೇಟಿಯು ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾಳೆ.

ಸೀತೆಯು ಚಿತ್ರಪಟದ ಹಿಂಸೆಯಿಂದ ಅಯೋಧ್ಯೆಯಿಂದಲೇ ದೂರವಾಗಲು ನಿರ್ಧರಿಸುತ್ತಾಳೆ. ಇದನ್ನು ತನ್ನ ಸೇವಕಿ ಚೇಟಿಗೆ ಹೇಳುತ್ತಾಳೆ., ಅಂದರೆ ಷಷ್ಠಿ ಪ್ರಯುಕ್ತ ಊರ ಹೊರಗಿರುವ ಹುತ್ತಕ್ಕೆ ತನಿ ಎರೆಯಲು ಹೋಗಿ ಅಲ್ಲಿಂದಲೇ ಕಾಡಿಗೆ ಹೋಗುತ್ತೇನೆ ಎಂದು ಎನ್ನುತ್ತಾಳೆ. ಆಗ ತನ್ನ ರಾಣಿಯೇ ಅರಮನೆಯನ್ನು ಬಿಟ್ಟುಹೋದ ಮೇಲೆ ತಾನೇನು ಮಾಡುವುದು, ಅವರಿಲ್ಲದ ಮೇಲೆ ತನಗೂ ಅಲ್ಲಿರಲು ಇಷ್ಟವಿಲ್ಲ, ಆದ್ದರಿಂದ ಚೇಟಿಯೂ ಸೀತೆಗೆ ನಿನ್ನ ಜೊತೆ ನಾನು ಈ ದೇಶವನ್ನು ಬಿಟ್ಟು ಹೋಗುತ್ತೇನೆ ಎಂದು ತನ್ನ ನಿರ್ಧಾರ ಹೇಳುತ್ತಾಳೆ. ಹಾಗೆಯೇ ಸೀತೆಯೂ ಅರಮನೆ ಬಿಟ್ಟನಂತರ ಚೇಟಿಯೂ ಬಿಟ್ಟು ಬಿಡುತ್ತಾಳೆ. ಹೀಗೆ ತನ್ನ ರಾಣಿಯ ಕಷ್ಟಕ್ಕೆ ಸ್ಪಂದಿಸುವ ಸ್ವಭಾವವನ್ನು ಇಲ್ಲಿ ಚೇಟಿಯೂ ವ್ಯಕ್ತಪಡಿಸುತ್ತಾಳೆ.ಈ ಬಿಂಬ ನಾಟಕದ ಮುಖ್ಯ ಪಾತ್ರ ಸೀತೆಯದು. ಇವಳು ಗಂಡ ಕಂಡ ಕನಸಿಗೆ ಬೆಚ್ಚಿ ನೋವನ್ನು ಅನುಭವಿಸುತ್ತಾಳೆ. ಇಲ್ಲಿಂದ ಅವಳು ತನ್ನ ಮಕ್ಕಳನ್ನು ಶೂರ್ಪನಖಿಯೂ ಎಲ್ಲಿ ಅಪಹರಿಸಿ ಬಿಡುತ್ತಾಳೋ ಎಂಬ ಆತಂಕವನ್ನು ನಾಟಕದ ಕೊನೆವರೆಗೂ ಅನುಭವಿಸುತ್ತಾಳೆ. ಈ ನಾಟಕದ ಪ್ರಾರಂಭದಲ್ಲಿ ಸೀತೆಯನ್ನು ಕೊರವಿಯು ಭೇಟಿಯಾಗುತ್ತಾಳೆ. ಅವಳು ಸೀತೆಗೆ ಭವಿಷ್ಯವನ್ನು ಹೇಳುತ್ತೇನೆ ಎಂದು ಹಿಂದೆ ನಡೆದದ್ದನ್ನು ಹೇಳುತ್ತಾಳೆ. ಆಗ ಸೀತೆಯನ್ನು ಬಲವಂತವಾಗಿ ತನ್ನ ಮಾತನ್ನು ಕೇಳುವಂತೆ ಮಾಡುತ್ತಾಳೆ. ಕೊನೆಗೆ ಕೊರವಂಜಿಯು ಹೇಳಿದಂತೆ ಸೀತ ನೊಂದುಕೊಂಡಂತೆ ಮಾಡುತ್ತಾಳೆ. ಅದು ಏನೆಂದರೆ ಸೀತೆಯು ರಾವಣನ ಚಿತ್ರವನ್ನು ಬರೆಯುವುದು. ಆದರೆ ಕೊನೆಗೆ ಸೀತೆಯು ಆತಂಕದಿಂದಲೇ ಬೇಸರದಿಂದಲೇ ಚಿತ್ರಪಟವನ್ನು ಬರೆಯುತ್ತಾಳೆ. ನಂತರ ಶೂರ್ಪನಖಿ ಆ ಚಿತ್ರಪಟಕ್ಕೆ ಜೀವ ತುಂಬುತ್ತಾಳೆ. ಅದು ಸೀತೆ ಎಲ್ಲಿಗೆ

ಹೋದರೂ ಬಿಡದೇ ಅವಳನ್ನು ಹಿಂಬಾಲಿಸುತ್ತದೆ. ಅದನ್ನು ಕಂಡು ಸೀತೆಯು ಅನಿಷ್ಟ, ಪ್ರಾರಬ್ಧ, ಹಾಳಾದದ್ದು ಎಂದೆಲ್ಲ ಬಯ್ದುಕೊಳ್ಳುತ್ತಾಳೆ.

3. "ಸೀತೆ: (ಕುಪಿತಳಾಗಿ)ಎಲ್ಲಿಂದ ಬಂದಿತೀ ಪ್ರಾರಬ್ಧ?

ತೊಲಗು ತೊಲಗೆಲೆ ಪಾಪಿ
ನಿನ್ನ ಚಿತ್ರಪಟ ಸಹಿತ

ಕೊರವಿ: ನಾವು ಮಾಡಿದ ಕರ್ಮ
ನಾವೇ ಭೋಗಿಸಬೇಕು
ನಿನ್ನದೇ ಚಿತ್ರಪಟ
ಸ್ವೀಕರಿಸಲೇನಡ್ಡಿ?
ಅಗೋ ನೋಡು
ಹಾರಾಡಿ ಓಲಾಡಿ
ಕುಣಿಯೂತ ನಲಿಯುತ
ಬರುತಿಹುದು
ಬಿಡುಗಡೆ ನಿನಗಿಲ್ಲ
ಅದರಿಂದ
ಬೇಗ ಹಿಡಿ ಬೇಗ ಹಿಡಿ
ಬಡಿವಾರ ಬೇಡ

ಸೀತೆ: ಛೀ ಪಾಪಿ
ದೂರವಿರು ದೂರವಿರು
ನಿನೆನ್ನ ಕಾಡಿ
ಬೇಡಿ ಬರೆಸಿದ
ಚಿತ್ರಪಟ ನಿನ್ನ
ಅಟವಟದ ಮೋಡಿ

ಅಯ್ಯೋ, ಅಯ್ಯೋ"

ಆದರೆ ಸೀತೆಯು ನಾಟಕದ ಪ್ರಾರಂಭದಿಂದಲೂ ಒಂದಲ್ಲ ಒಂದು ಆತಂಕವನ್ನು ಅನುಭವಿಸುತ್ತಾಳೆ. ಚಿತ್ರಪಟವೂ ತನಗೆ ಅಂಟಿಕೊಂಡಿದೆ ಎಂದು ರಾಮನಿಗೆ ತಿಳಿದರೆ ಎಂಬ ಆತಂಕ ಪಡುತ್ತಾಳೆ. ತನ್ನ ರಾಮನು ಹೇಳುವ ಕನಸಿಗೆ ಮುಂದೆ ಏನಾಗುವುದೋ ಎಂಬ ಆತಂಕ, ತನ್ನನ್ನು ಚಿತ್ರಪಟ ಅಂಟಿಕೊಂಡಿದ್ದಕ್ಕೆ ಆತಂಕ, ಅಗಸನ ಮಾತಿಗೆ ಓರಗಿತ್ತಿಯರು ಆಡುವ ಅಣಕದ ಮಾತಿಗೆ ಆತಂಕಪಡುತ್ತಾಳೆ. ಹುಟ್ಟಿದ ಮಕ್ಕಳು ತನ್ನಲ್ಲಿ ಹಾಲು ಕುಡಿಯದಿದ್ದಕ್ಕೆ ಆತಂಕ, ನಂತರ ಶೂರ್ಪನಖಿಯು ಬಂದಾಗ ತನ್ನ ಮಕ್ಕಳನ್ನು ಅಪಹರಿಸುತ್ತಾಳೋ ಎಂಬ ಆತಂಕ– ಹೀಗೆ ನಾಟಕದ ಪ್ರಾರಂಭದಿಂದಲೂ ಕೊನೆಯವರೆಗೂ ಆತಂಕಗಳನ್ನು ಅನುಭವಿಸುತ್ತಾಳೆ. ಈ ನಾಟಕದಲ್ಲಿ ಬರುವ ಪ್ರತಿಯೊಂದು ಸನ್ನಿವೇಶಗಳು ಸೀತೆಯ ಆತಂಕವನ್ನು ಹೆಚ್ಚಿಸಲೆಂದೇ ನಡೆಯುವಂತೆ ಕಾಣುತ್ತದೆ.

ಸೀತೆಯು 'ಬಿಂಬ' ನಾಟಕದಲ್ಲಿ ಮುಖ್ಯವಾದ ಪಾತ್ರವೇ, ಹಾಗೇ ನಾಟಕದ ತುಂಬ ಇವಳ ಆತಂಕ ಭಯ ನೋವು ದುಃಖಗಳೇ ತುಂಬಿಕೊಂಡಿವೆ. ಇದನ್ನು ಪ್ರಸಿದ್ಧ ಲೇಖಕರಾದ ಎ. ಆರ್ ಕೃಷ್ಣಶಾಸ್ತ್ರಿ ಅವರು ಬೇರೊಂದು ರೀತಿಯಲ್ಲಿ ಹೇಳಿದ್ದಾರೆ "ಕಡೆಗೂ ಸೀತೆಯ ಪಾಲಿಗೆ ಬಂದದ್ದೇನು? – ಕಾಡು, ದೂರು, ದುಃಖ" ಎಂಬುದಾಗಿದೆ. ಇವರ ಈ ಮಾತು ಯಾವುದೋ ಬೇರೆ ಸಂದರ್ಭದಲ್ಲಿ ಹೇಳಿದ್ದು, ಆದರೆ ಇದು ಬಿಂಬ ನಾಟಕದ ಸೀತೆಗೆ ಅನ್ವಯವಾಗುತ್ತದೆ.

ಈ ನಾಟಕದಲ್ಲಿ ಬರುವ ಭಾಗವತರು ಹಾಗೂ ಹೆಣ್ಣುಮೇಳದವರು ಅಡವಿಗೆ ಹೋದ ಸೀತೆಯನ್ನು ಕಂಡು ಈ ರೀತಿ ಹೇಳುತ್ತಾರೆ.

"ಏಕೆ ಬರುವುದೋ ಒಳ್ಳೆಯ ತನಕೆ ದುಗುಡ ನೂರು ನೂರು" ಎಂಬುದು ಈ ನಾಟಕಕ್ಕೆ ತುಂಬ ಜೀವಂತಿಕೆಯನ್ನು ನೀಡುತ್ತದೆ.

ಹೀಗೆ ಬಿಂಬ ನಾಟಕದಲ್ಲಿ ಸೀತೆಯು ಅನೇಕ ಕಷ್ಟವನ್ನು ಅನುಭವಿಸುತ್ತಾ ಮುಖ್ಯ ಪಾತ್ರವಾಗಿ ಕಂಡುಬಂದಿದ್ದಾಳೆ.

ಕುಮಾರರಾಮ ನಾಟಕದಲ್ಲಿ ಹಲವು ಹೆಣ್ಣು ಪಾತ್ರಗಳು ಕಂಡುಬರುತ್ತವೆ. ಇದರಲ್ಲಿ ಮುಖ್ಯವಾಗಿ ರತ್ನಾಜಿ ಪಾತ್ರವು ಒಂದಾಗಿದೆ. ಈ ನಾಟಕದಲ್ಲಿ ರತ್ನಾಜಿಯ ಪಾತ್ರ ದುರಂತ ಪಾತ್ರವಾಗಿದೆ. ಆದರೆ ನಾಟಕದಲ್ಲಿ ಪ್ರಬಲವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪಾತ್ರವೇ

ರತ್ನಾಜಿಯದು. ಇವಳು ನಾಟಕದಲ್ಲಿ ದುರಂತ ಪಾತ್ರವಾಗುವುದಕ್ಕೆ ಕಾರಣ ಅವಳ ಇಂದ್ರಿಯ ಬಯಕೆಯಾಗಿದೆ.

ಕುಮಾರರಾಮ ನಾಟಕದಲ್ಲಿ ಬರುವ ಕಂಪಿಲರಾಯನು ವಯಸ್ಸಾದ ರಾಜನಾಗಿದ್ದಾನೆ. ಇವನ ಮಗ ಸುಂದರವಂತ, ಶೂರ ಪರಾಕ್ರಮಿ ಕುಮಾರರಾಮ. ಇಲ್ಲಿ ಬರುವ ಹೆಣ್ಣಿನ ಪಾತ್ರ ರತ್ನಾಜಿ. ಇವಳು ಇನ್ನು ತರುಣಿ ಆದರೆ ವಯಸ್ಸಾದ ಕಂಪಿಲರಾಯನು ವಿವಾಹವಾಗುತ್ತಾನೆ. ಇಲ್ಲಿ ಅವನಿಂದ ಯಾವುದೇ ಸುಖವನ್ನು ಪಡೆಯಲಾಗದ ಸ್ಥಿತಿಯಲ್ಲಿ ರತ್ನಾಜಿಯು ಸಿಲುಕುತ್ತಾಳೆ. ಆದರೆ ಅವಳ ಮನಸ್ಸಿಗೆ ಯುವರಾಜನಾದ ಕುಮಾರರಾಮನು ಇಷ್ಟವಾಗುತ್ತಾನೆ. ಅವಳು ತನ್ನ ವಯಸ್ಸಿನಲ್ಲಿಯೇ ಆ ಇಂದ್ರಿಯ ಸುಖವನ್ನು ಪಡೆಯಲು ಹಾತೊರೆಯುತ್ತಾಳೆ. ಆಗ ಅವಳಿಗೆ ಆಸೆಯನ್ನು ಈಡೇರಿಸಿಕೊಳ್ಳುವುದಕ್ಕೆ ಅವಕಾಶವೇ ಸಿಗುವುದಿಲ್ಲ. ಅದಕ್ಕೆ ಪೂರಕವಾಗಿ ಕುಮಾರರಾಮನ ತಾಯಿ ಹರಿಯಾಲದೇವಿಯು ಕುಮಾರರಾಮನು ರತ್ನಾಜಿಯ ಅಂತಃಪುರದ ಕಡೆ ಹೋಗದಂತೆ ನೋಡಿಕೊಳ್ಳುತ್ತಾಳೆ. ಇದರಿಂದ ರತ್ನಾಜಿಯು ತನ್ನ ಬಯಕೆಯನ್ನು ರಾಜನ ಬಳಿ ಹೇಳಲಾಗದೇ, ಕುಮಾರರಾಮನೂ ಸಿಗದೇ ಹಿಂಸೆಯನ್ನು ಅನುಭವಿಸುತ್ತಾಳೆ. ಇಲ್ಲಿ ಕುಮಾರರಾಮನಿಗೆ ತಾನು ಚಿಕ್ಕಮ್ಮ ಆಗಬೇಕು ಎಂಬುದನ್ನು ಮರೆತು ಕೇವಲ ತನ್ನ ಲೈಂಗಿಕ ಬಯಕೆಯನ್ನು ಈಡೇರಿಸಿಕೊಳ್ಳುವುದಕ್ಕೆ ನಾನಾ ರೀತಿಯಲ್ಲಿ ಪ್ರಯತ್ನಿಸುತ್ತಾಳೆ. ಇಲ್ಲಿ ಕುಮಾರರಾಮನು ದೆಹಲಿ ಸುಲ್ತಾನರ ಮೇಲೆ ಯುದ್ಧ ಮಾಡುವುದಕ್ಕೆ ಹೋಗಿರುತ್ತಾನೆ. ಇಲ್ಲಿ ಅರಮನೆಯಲ್ಲಿ ಆರೋಗ್ಯ ಸರಿಯಿಲ್ಲ ಎಂದು ರತ್ನಾಜಿಯು ಮಲಗಿರುತ್ತಾಳೆ. ಅಲ್ಲಿಗೆ ಕಂಪಿಲರಾಯನು ಹೋಗಿ ಅವಳೊಡನೆ ಮಾತನಾಡುತ್ತಾನೆ. ಆದರೆ ರತ್ನಾಜಿಗೆ ಕುಮಾರರಾಮನ ಮೇಲಿನ ಪ್ರೀತಿಯಿಂದ ಅವರ ಮಾತುಕತೆ ಅರ್ಥಹೀನವಾಗುತ್ತದೆ. ಆದರೆ ಕೊನೆಗೆ ಕಂಪಿಲರಾಯನಿಗೆ ಅನುಮಾನ ಬರುವಂತೆ ರತ್ನಾಜಿ ನಡೆದುಕೊಳ್ಳುತ್ತಾಳೆ.

4. <u>ಉದಾ</u>:- <u>ಕಂಪಿಲರಾಯ</u>: " ಓಹೋ- ಧಾರಾಳವಾಗಿ! (ಎಂದು ಹೇಳುತ್ತಾ ತನ್ನಲ್ಲೆ) ಆದರೂ ಪ್ರಾಪ್ತವಯಸ್ಕನಾದ ಕುಮಾರರಾಮನನ್ನು ನೋಡಲು ಇವಳಿಗೇಕಿಷ್ಟು ಕಾತರ?"

ಯುದ್ಧ ಗೆದ್ದ ನಂತರ ಶೂಲದ ಹಬ್ಬವನ್ನು ಆಚರಿಸೋಣ ಎಂದು ಕಂಪಿಲರಾಯನು ಹೇಳುತ್ತಾನೆ. ಆಗ ರತ್ನಾಜಿಗೆ ತುಂಬಾ ಸಂತೋಷವಾಗುತ್ತದೆ. ಏಕೆಂದರೆ ಅವಳ ಅಂತಃಪುರದ ಮುಂದೆಯೇ ಈ ಹಬ್ಬ ನಡೆಯುತ್ತದೆ. ಆಗ ಅವನನ್ನು ಹತ್ತಿರದಿಂದ ನೋಡಿದ ಮೇಲೆ ಅವಳಿಗೆ

ಇನ್ನಷ್ಟು ಆಸೆ ಹೆಚ್ಚಾಗುತ್ತದೆ. ಈ ಆಸೆಯನ್ನು ಸಹಜವಾಗಿ ತನ್ನ ಸೇವಕಿಯಾದ ಸಂಗಾಯಿ ಹತ್ತಿರ ಹೇಳುತ್ತಾಳೆ.

5. "ರತ್ನಾಜಿ : ಸಂಗಿ ನಿನ್ನೊಡನೆ ಮುಚ್ಚುಮರೆಯೇನು? ಕೇಳು ಶೂಲದ ಹಬ್ಬದ ದಿನ ಧರೆಗಿಳಿದ ಮಾರನಂತೆ ಹರಿದಾಡಿದ ಆ ಮನಮೋಹಕ ಚೆಲುವನ್ನು ಸಂದರ್ಶಿಸಿದ ಗಳಿಗೆಯಿಂದ ಆ ರೂಪಶ್ರೀಗೆ ಸೋತು ಸೆರೆಯಾದೆ.

ರತ್ನಾಜಿ : (ಭಾವಾವೇಶದಲ್ಲಿ) ಸಂಗೀ! ಸಂಗೀ! ನನ್ನ ತಾಯಿ! ಏನೆಂದು ಹೇಳಲಿ? ನನಗಾದ ಅನುಭವವನ್ನು ಹೇಗೆ ವರ್ಣಿಸಲೀ ತಾಯಿ?... ಅವನ ರೂಪು ನನ್ನ ನಯನಗಳಲ್ಲಿ ತುಂಬಿ, ಪ್ರೇಮರಸವಾಗಿ ಕರಗಿಹೋಗಿ ಅಲ್ಲಿಂದ ಚಿತ್ತವನ್ನೆಲ್ಲ ಆಕ್ರಮಿಸಿ, ಅಮೃತದ ಬಿಂದುಗಳಂತೆ ಹನಿಹನಿಯಾಗಿ ಜಿನುಗಿ ಹೃದಯದಲ್ಲಿ ಮುಡುಗಟ್ಟಿ ನಿಂತಿದೆ".

ಹೀಗೆ ತನ್ನ ಇಂದ್ರಿಯ ಬಯಕೆಗಳನ್ನು ಲೈಂಗಿಕ ಆಸಕ್ತಿಯನ್ನು ಹೊರಗೆ ಹಾಕಿದ ಆಕರ್ಷಣೆಯಾದದ್ದನ್ನು ಮುಚ್ಚುಮರೆಯಿಲ್ಲದೇ ತನ್ನ ಸೇವಕಿಯಾದ ಸಂಗಾಯಿ ಹತ್ತಿರ ಹೇಳಿಕೊಳ್ಳುತ್ತಾಳೆ. ಇಲ್ಲಿ ತಾನು ಕುಮಾರರಾಮನ ಚಿಕ್ಕಮ್ಮ ಅವನ ತಂದೆಯ ಕಿರಿಯ ಹೆಂಡತಿ ಎನ್ನುವುದನ್ನು ಇಲ್ಲಿ ಅವಳು ಮರೆಯುತ್ತಾಳೆ. ಸಹಜವಾಗಿ ಯೌವನ ಇರುವ ಹೆಣ್ಣಿಗೆ ಸಹಜವಾಗಿ ಇರುವಂತೆ ಬಯಕೆಗಳು ಇವಳಲ್ಲಿವೆ, ಅದಕ್ಕಾಗಿ ಅವಳು ಸುಂದರನಾದ ಕುಮಾರರಾಮನನ್ನು ಮೋಹಿಸುವುದು. ಏನೇ ಆಗಲಿ ತನ್ನ ಆಸೆಯನ್ನು ಈಡೇರಿಸಿಕೊಳ್ಳಲೇಬೇಕು ಎಂದು ತನ್ನ ಸೇವಕಿಯ ಹತ್ತಿರ ಹೇಳುತ್ತಾಳೆ. ಇಲ್ಲಿ ತಿಳಿಯುವುದು ಸಾಮಾನ್ಯ ಹೆಣ್ಣಿನಲ್ಲಿರಬಹುದಾದ ಆಸೆ ಕಾಮನೆಗಳನ್ನು ಇಲ್ಲಿ ರತ್ನಾಜಿಯ ಮೂಲಕ ವ್ಯಕ್ತವಾಗುತ್ತವೆ. ರತ್ನಾಜಿಯ ಬಯಕೆಗೆ ಸೇವಕಿಯು ಸಹಾಯಕಳಾಗಿ ಕಾರ್ಯನಿರ್ವಹಿಸುತ್ತಾಳೆ.

6. "ಉದಾ :-

ಸಂಗಾಯಿ : ಪಾಪ –ನಿಮ್ಮಂಥ ಎಳೆಹರೆಯದ ಹೆಣ್ಣನ್ನು ವೃದ್ಧಾಪ್ಯ ಬಯಸಬಾರದು, ಬಯಸಬಾರದು... ಹಾರಾಡುವ ಅರಗಿಳಿಯನ್ನು ಪಂಜರದೊಳಗೆ ಸೆರೆ ಹಿಡಿದಾಗ, ಆ ನಿರ್ಬಂಧದಿಂದ ಪಾರಾಗಲು ಸದಾ ಕಾಲವೂ ಅದು ಹಾರೈಸುವುದು ಸ್ವಾಭಾವಿಕ ತಾನೆ?

ರತ್ನಾಜಿ : (ಕಂಪಿಸಿ, ಅವಳನ್ನು ತಬ್ಬಿಕೊಳ್ಳುತ್ತ) ಕುಪಿತಳಾಗಬೇಡವೇ ತಾಯಿ, ನೀನಲ್ಲದೆ ನನಗ್ಯಾರಿದ್ದಾರೆ... ಪಂಪಾಂಬಿಕೆಯ ಆಣೆಯಿಟ್ಟು ಹೇಳುವೆನು ಕೇಳು. ರಾಮನ ಸಹವಾಸ ದೊರೆಯದಿದ್ದಲ್ಲಿ ಈ ಕಾಯದ ಹಂಗು ನನಗಿಲ್ಲ (ಕಠಾರಿಯನ್ನೆಳೆದು ಅವಳ ಕೈಗೀಯುತ್ತ) ಇಗೋ ಇಷ್ಟು ಸಹಾಯ ಮಾಡಲು ನಿನಗೆ ಮನಸ್ಸಿಲ್ಲದಿದ್ದರೆ, ಈ ಕಠಾರಿಯಿಂದ ತಾಳಲಾರದ, ಬಾಳಲಾರದ ಈ ಬದುಕಿಗೆ ಮುಕ್ತಿಯನ್ನಾದರೂ ಕರುಣಿಸಿಬಿಡು..."

ಹೀಗೆ ರತ್ನಾಜಿ ಮತ್ತು ಸಂಗಾಯಿ ನಡುವೆ ಸಂಭಾಷಣೆ ನಡೆಯುತ್ತದೆ. ಒಟ್ಟಾರೆಯಾಗಿ ರತ್ನಾಜಿಯ ಲೈಂಗಿಕತೆಯ ಆಸೆಯನ್ನು ಈಡೇರಿಸಲು ಸಂಗಾಯಿ ಸಹಾಯ ಮಾಡುತ್ತಾಳೆ. ಅದು ಹೇಗೆಂದರೆ ಯುವರಾಜರೆಲ್ಲ ಸೇರಿ ಚೆಂಡಿನಾಟ ಆಡಲು ಅಂತಃಪುರದ ಎದುರಿಗೆ ಸೇರುತ್ತಾರೆ. ಆಗ ಉಪಾಯವಾಗಿ ಕುಮಾರರಾಮನ ಹೂವಿನ ಚೆಂಡನ್ನು ರತ್ನಾಜಿಯ ಅಂತಃಪುರಕ್ಕೆ ಎಸೆಯುವುದು. ನಂತರ ಕುಮಾರರಾಮನು ಚೆಂಡನ್ನು ತೆಗೆದುಕೊಳ್ಳಲು ಬಂದಾಗ ರತ್ನಾಜಿ ತನ್ನ ಬಯಕೆಯನ್ನು ಈಡೇರಿಸಿಕೊಳ್ಳಬಹುದು. ಹೀಗೆ ಸಂಗಾಯಿ ಉಪಾಯ ಮಾಡಿರುತ್ತಾಳೆ. ಅದು ಹೇಗೆ ಎಂದರೆ ರತ್ನಾಜಿಯ ದಾದಿ ರಮೆಯನ್ನು ತೆಲುಗರ ವೀರಮನ್ನೆ ಓಬನಾಯಕ ಇಷ್ಟಪಟ್ಟಿರುತ್ತಾನೆ. ಅವನಿಗೆ ಅವಳನ್ನು ಸೇರುವಂತೆ ನೋಡಿಕೊಳ್ಳುತ್ತೇನೆ ಎಂದು ಅವನಿಗೆ ಸಂಗಾಯಿ ಹೇಳುತ್ತಾಳೆ. ಓಬನಾಯಕನು ಚೆಂಡನ್ನು ರತ್ನಾಜಿಯ ಅಂತಃಪುರಕ್ಕೆ ಎಸೆಯುತ್ತಾನೆ. ಅದನ್ನೆ ಕಾಯುತ್ತಿದ್ದ ರತ್ನಾಜಿಯು ಅವನು ಬಂದೊಡನೆ ಉಪಚರಿಸುತ್ತಾಳೆ. ನಂತರ ಅವನನ್ನು ತನ್ನ ಪ್ರೇಮದ ಮಾತುಗಳಿಂದ ಪ್ರಚೋದನೆಗೊಳಿಸಲು ಪ್ರಯತ್ನಿಸುತ್ತಾಳೆ. ಆದರೆ ಕುಮಾರರಾಮನು ತಿರಸ್ಕರಿಸುತ್ತಾನೆ. ಆಗ ರತ್ನಾಜಿ ಈ ರೀತಿ ಹೇಳುತ್ತಾಳೆ.

7. "ರತ್ನಾಜಿ : (ಅಣಕದಿಂದ) ಧರ್ಮ! ಕೇವಲ ಒಂದು ಹೆಣ್ಣಿನ ಮನೋಧರ್ಮವನ್ನೇ ಅರಿಯಲಸಮರ್ಥನಾದವನು, ಅವಳ ಅಂತರಾಳದಲ್ಲಿ ಆಸೆಯ ನಿರೀಕ್ಷೆಯ, ಬಯಕೆಯ ಹುಚ್ಚು ಅಲೆಗಳು ಎದ್ದೆದ್ದು ಕುಣಿದು ಅವಳನ್ನು ಮಣಿಸಿ, ದಣಿಸಿ ಘಾಸಿಗೊಳಿಸುತ್ತಿದ್ದರೂ ಅದಕ್ಕೆ ಕುರುಡಾದವನು, ಅವಳ ನುಡಿಗಳಲ್ಲಿ ಅತಿ ದೀನವಾಗಿ ಬೇಡಿ ಬೇಡಿ ಕಂಗಾಲಾಗಿ ಬಾಯ್ ಬಾಯ್ ಬಿಟ್ಟು ಕರೆಯುವ ಕೊರಗನ್ನು ಆಲಿಸಿಯೂ ಕಿವುಡಾಗಿ ಉಳಿದವನು, ನಿನ್ನಲ್ಲಿ ಧರ್ಮ, ದಯೆ, ಅನುಕಂಪ – ಇವು ಇರುವುದೇ?"

ಹೆಣ್ಣು ಸಹಜವಾಗಿ ತನ್ನಲ್ಲಿರುವ ಬಯಕೆಯನ್ನು ಈಡೇರಿಸುವಂತೆ ಬೇಡುತ್ತಾಳೆ. ಆದರೆ ಕುಮಾರರಾಮನು ನೀನು ನನ್ನ ಚಿಕ್ಕಮ್ಮ ಎಂದು ಹೇಳಿ ಅವಳನ್ನು ತಿರಸ್ಕರಿಸುತ್ತಾನೆ. ಇದಾದ ನಂತರ ಕುಮಾರರಾಮನ ಮೇಲಿದ್ದ ಪ್ರೀತಿ ಅವನ ತಿರಸ್ಕಾರದಿಂದ ದ್ವೇಷವಾಗಿ ಬದಲಾಗುತ್ತದೆ. ಹೆಣ್ಣಿಗೆ ತಾನು ಬಯಸಿದ್ದು ಸಿಗದೇ ಇದ್ದಾಗ ಸಿಡಿದೇಳುವುದು ಸಾಮಾನ್ಯ ಹಾಗೆಯೇ ರತ್ನಾಜಿಯೂ ತನ್ನನ್ನು ತಿರಸ್ಕರಿಸಿದ ಕುಮಾರರಾಮನನ್ನು ದ್ವೇಷಿಸುತ್ತಾಳೆ. ರತ್ನಾಜಿಯು ತನ್ನ ಸೇವಕಿಗೆ ಈ ರೀತಿಯಾಗಿ ಹೇಳುತ್ತಾಳೆ.

8 "ರತ್ನಾಜಿ : ಸಂಗೀ- ಆ ಧೂರ್ತನನ್ನು ಈಗಲೂ ಸುಮ್ಮನೇ ಬಿಡುವೆನೆಂದು ತಿಳಿಯಬೇಡ. ನನಗೆ ಮಾಡಿರುವ ಅಪಮಾನಕ್ಕೆ ಅವನ ಜೀವ ತೆಗೆದುಕೊಳ್ಳದಿದ್ದರೆ – ನಾನು ರತ್ನಾಜಿಯಲ್ಲ (ಸಂಗಾಯಿಯು ಸಂತಸಗೊಂಡು ಲಟಿಗೆ ಮುರಿಯುವುದು) ಈಗ ನೀನು ಆ ಚೆಂಡನ್ನು ಕೊಂಡು ಹೋಗಿ ನಮ್ಮ ಉದ್ಯಾನದಲ್ಲೊಗೆದು ಬಾ.

ಸಂಗಾಯಿ: – ಏಕೆ?

ರತ್ನಾಜಿ : ಮುಂದೆ ನಾನು ನಡೆಸಬೇಕೆಂದಿರುವ ರುದ್ರನಾಟಕಕ್ಕೆ ಅದು ನಾಂದಿ, ಅದಕ್ಕೆ."

ಹೀಗೆ ರತ್ನಾಜಿಯು ಎಲ್ಲಾ ಹೆಣ್ಣುಗಳಂತೆ ಇಂದ್ರಿಯ ಬಯಕೆಗೆ ಸೋತು ಅದು ಸಿಗದಿದ್ದಾಗ ಸಿಡಿದೇಳುತ್ತಾಳೆ. ತನಗೆ ಸಿಗದಿದ್ದು ಇನ್ನು ಭೂಮಿಯ ಮೇಲೆಯೇ ಸಿಗಬಾರದು ಎನ್ನುವ ಮನೋಭಾವವನ್ನು ತಳೆಯುತ್ತಾಳೆ. ರತ್ನಾಜಿಯೂ ಕುಮಾರರಾಮನನ್ನು ನಾಶಗೊಳಿಸಲು ಸಂಚು ಹೂಡುತ್ತಾಳೆ. ಇವಳ ಜೊತೆಯಲ್ಲಿ ಸೇವಕಿಯಾದ ಸಂಗಾಯಿ ಸೇರುತ್ತಾಳೆ. ರತ್ನಾಜಿಯು ಕಂಪಿಲರಾಯನು ಬಂದಾಗ ಅವನಿಗೆ ಸುಳ್ಳು ಹೇಳುತ್ತಾಳೆ. ನನ್ನನ್ನು ನಿನ್ನ ಮಗನಾದ ಕುಮಾರರಾಮನು ಅತ್ಯಾಚಾರ ಮಾಡಿದ್ದಾನೆ ಎಂದು ದೂರು ಹೇಳುತ್ತಾಳೆ. ಹಾಗೆಯೇ ಕಂಪಿಲರಾಯನನ್ನು ಸೆರೆಮನೆಯಲ್ಲಿ ಇಡುತ್ತೇನೆ ಎಂದು ಹೇಳಿದನು ಎಂದು ಹೇಳುತ್ತಾಳೆ. ಆಗ ರಾಜನಾದ ಕಂಪಿಲರಾಯನು ಅಧರ್ಮವನ್ನು ಮಾಡಿದವನಿಗೆ ಶಿಕ್ಷೆ ಆಗಲೇಬೇಕು, ಇಲ್ಲಿ ನನ್ನ ಮಗ ಎನ್ನುವುದಕ್ಕಿಂತ ಮಾಡಿರುವ ಅಪರಾಧ ದೊಡ್ಡದು.

9. "ಕಂಪಿಲರಾಯ :- ಛೇ ಛೇ- ಹಾಗೆಂದಿಗೂ ನೀನು ಜೀವ ಕಳೆದುಕೊಳ್ಳಬಾರದು. ಇಂಥ ಘೋರ ಅಕೃತ್ಯವೆಸಗಿದವನು ನನ್ನ ಮಗನೇ ಆದರೂ ಅವನು ವಧಾರ್ಹ. ಚಿಂತಿಸದಿರು, ಪಾಪ

ಮಾಡಿದವನಿಗೆ ಪ್ರಾಯಶ್ಚಿತ್ತವು ಬೇರೆ ಲೋಕದಲ್ಲಿಲ್ಲ- ಇಲ್ಲೇ ಇಹ ಲೋಕದಲ್ಲೇ ಜೀವಿತ ಕಾಲದಲ್ಲೇ ಅದನ್ನವನು ಅನುಭವಿಸಬೇಕು."

ನಂತರ ಕಂಪಿಲರಾಯನು ತನ್ನ ಮಂತ್ರಿಯಾದ ಬೈಚಪ್ಪನನ್ನು ಕರೆಯಿಸಿ ಕುಮಾರರಾಮನು ತಲೆದಂಡ ಕೊಡಲೇಬೇಕು, ಅವನ ತಲೆಯನ್ನು ಕಡಿದು ತರಬೇಕು ಎಂದು ಆದೇಶಿಸುತ್ತಾನೆ. ಕುಮಾರರಾಮನ ತಲೆಯನ್ನು ಕಡಿಯುವಂತೆ ಆದೇಶ ನೀಡಿದಾಗ ಹರಿಯಾಲದೇವಿಯು ಅದನ್ನು ತಪ್ಪಿಸುವಂತೆ ಕೇಳಲು ರತ್ನಾಜಿಯ ಬಳಿ ಹೋಗುತ್ತಾಳೆ. ಆದರೆ ರತ್ನಾಜಿಯು ಅವಳ ಮಾತನ್ನು ಕೇಳುವುದೇ ಇಲ್ಲ. ಹರಿಯಾಲದೇವಿಯು ನನ್ನ ಮಗನಾದ ಕುಮಾರರಾಮನು ನಿನಗೂ ಮಗನಲ್ಲವೇ? ಅವನು ಈ ರಾಜ್ಯವನ್ನು ರಕ್ಷಿಸುತ್ತಾನೆ. ಹಾಗಿರಬೇಕಾದರೆ ನಿನ್ನಿಂದ ಅವನು ಸಾಯಬಾರದು, ನನ್ನ ಮಗನನ್ನು ನೀನು ರಕ್ಷಿಸಬೇಕು ಎಂದು ಬೇಡಿಕೊಳ್ಳುತ್ತಾಳೆ. ನಂತರ ಇದೆಲ್ಲ ಕೇಳಿದ ಮೇಲೆ ರತ್ನಾಜಿಗೆ ಅಪರಾಧಿ ಪ್ರಜ್ಞೆ ಮೂಡುತ್ತದೆ. ತಾನು ಮಾಡಿರುವ ತಪ್ಪಿಗಾಗಿ ರಾಜ್ಯವನ್ನು ರಕ್ಷಣೆ ಮಾಡುವ ಯುವರಾಜನ ಮರಣ ಆಗುವುದು ಸರಿಯಿಲ್ಲ ಎಂದು ತನ್ನ ಮನಸ್ಸಿನಲ್ಲಿಯೇ ಯೋಚಿಸುತ್ತಾಳೆ.

10. "<u>ರತ್ನಾಜಿ</u> : (ಹರಿಯಾಲದೇವಿಯ ನಿಷ್ಕ್ರಮಣಮನ್ನೇ ಹನಿಗಣ್ಣಾಗಿ ನಿಟ್ಟಿಸುತ್ತಿದ್ದು, ಹಾಗೆಯೇ ಮುರಿದು ಬೀಳುವ ಬಾಳೆಯಂತೆ ಪೀಠದಲ್ಲಿ ಕುಸಿದು ದೀರ್ಘಾಲೋಚನೆಯಲ್ಲಿ ಮುಳುಗಿರುವಳು. ಆನಂತರ ಮೆಲ್ಲನೆದ್ದು ದುಃಖತಪ್ತಳಾಗಿ) ಅಹುದಲ್ಲವೇ? - ಹರಿಯಾಲಿಯ ಮಾತು ಸತ್ಯವೇ ಅಲ್ಲವೇ? ಅವನ ರೂಪಿಗೆ ಸೋತು ಮರುಳಾದವಳು ನಾನು ನಾನೇ!... ಇದರಲ್ಲಿ ಪಾಪ ಆ ಕುಮಾರನ ತಪ್ಪೇನಿದೆ?... ಇಲ್ಲ. ಇಲ್ಲವೇ ಇಲ್ಲ (ಮೆಲ್ಲನೆ ಸಾಗಿ ಗವಾಕ್ಷದ ಬಳಿ ಕ್ಷಣಕಾಲ ಚಿಂತಿಸುತ್ತ ನಿಲ್ಲುವಳು. ತರುವಾಯ ಹಿಂದಿರುಗಿ ಬರುತ್ತ) ಹುಚ್ಚಿ – ಅವನನ್ನು ನೀನೇ ಕೆಣಕಿ, ಗೋಳಾಡಿ ಕಾಡಿ- ಕೊನೆಗೆ ಅವನ ಮೇಲೆಯೇ ತಪ್ಪು ಹೊರಿಸಿ ಕೊಲೆ ಮಾಡಿಸುತ್ತಿರುವೆಯಲ್ಲಾ?..... (ಮತ್ತೆ ಕುಳಿತು ತುಸುಕಾಲ ಚಿಂತಿಸುತ್ತಿದ್ದು, ಬಳಿಕ) ಅಲ್ಲದೇ ಅವನನ್ನು ಕೊಲ್ಲಿಸಿ ನಿನಗೆ ಸಿಗುವ ಮಹಾಭಾಗ್ಯವಾದರೂ ಏನು? ಅವನು ನಿನ್ನ ಕಣ್ಣಿನ ಬೆಳಕು! ಆ ಬೆಳಕನ್ನು ನಂದಿಸಿದರೆ, ನಿನ್ನ ಬದುಕು ಕತ್ತಲಾಗುವುದು! ಎಚ್ಚರ ಅವಿವೇಕಿ ಹೆಣ್ಣೆ! (ಎದ್ದು ಶತಪಥ ತಿರುಗುತ್ತ ನಿಂತು) ಅಹುದು ಹರಿಯಾಲಿಯ ಮಾತು ಸುಳ್ಳಲ್ಲ, ಕುಮಾರನು ಸತ್ತ ನಂತರ ವಿಧರ್ಮೀಯರ ದಂಡು

ನಿಸ್ಸಂದೇಹವಾಗಿಯೂ ನಮ್ಮ ರಾಜ್ಯವನ್ನು ಮುತ್ತುವುದು. ಆಗ ಅಯ್ಯೋ ಆಗ- ನಮ್ಮಂತಹ ಅನಾಥೆಯರ ಗತಿ?".

ಹೀಗೆ ಯೋಚನೆ ಮಾಡಿ ತನ್ನ ತಪ್ಪಿಗೆ ಪ್ರಾಯಶ್ಚಿತ್ತ ಪಡಲು ಕಂಪಿಲರಾಯನಿಗೆ ಹೇಳುತ್ತಾಳೆ. ಆಗ ಅಷ್ಟರ ಒಳಗೆ ಮಂತ್ರಿ ಬೈಚಪ್ಪನು ರಾಜನಆದೇಶದಂತೆ ಕುಮಾರರಾಮನ ತಲೆ ತಂದಿರುತ್ತಾನೆ. ಆದರೆ ಅದು ಕಳ್ಳನ ತಲೆಯಾಗಿರುತ್ತದೆ. ಈ ಸತ್ಯವನ್ನು ರಾಜನಿಗೆ ಹೇಳುವುದಿಲ್ಲ. ಆ ತಲೆಯನ್ನು ನೋಡಿ ದುಃಖಿಸುತ್ತಾನೆ. ನಂತರ ದೆಹಲಿ ಸುಲ್ತಾನರು ದಾಳಿ ಮಾಡುತ್ತಾರೆ. ಆಗ ಬೈಚಪ್ಪನು ನಿಜವನ್ನು ಹೇಳಿ ಕುಮಾರರಾಮ ಬದುಕಿದ್ದಾನೆ ಎಂದು ಹೇಳಿ ಯುದ್ದರಂಗಕ್ಕೆ ಕುಮಾರರಾಮನನ್ನು ಮತ್ತೆ ಕರೆಯಿಸುತ್ತಾರೆ. ಆದರೆ ಕುಮಾರರಾಮನ ಸಾವಿನ ಸುದ್ದಿಯನ್ನು ಕೇಳಿದ ರತ್ನಾಜಿಯು ಹುಚ್ಚಿಯಾಗುತ್ತಾಳೆ. ತನ್ನ ಮೋಸಗಾರಿಕೆಯಿಂದ ಕುಮಾರರಾಮನು ಸತ್ತಿದ್ದಾನೆ ಎಂದು ತಿಳಿದು ಭ್ರಮನಿರಸನವಾಗುತ್ತದೆ. ಸಂಗಾಯಿಯು ತನ್ನ ರಾಣಿಯು ಹುಚ್ಚಿಯಾಗಿರುವುದನ್ನು ಕಂಡು ದುಃಖಿಸುತ್ತಾಳೆ. ಆದರೆ ಕುಮಾರರಾಮನು ಬದುಕಿರುವುದು ತಿಳಿದಾಗ ಕುಮಾರರಾಮನ ಮೇಲೆ ಸೇಡು ತೀರಿಸಿಕೊಳ್ಳುತ್ತಾಳೆ. ಹೇಗೆಂದರೆ ಕುಮಾರರಾಮನು ಯುದ್ಧರಂಗಕ್ಕೆ ಹೋಗಿ ಬಂದು ಬಿಡಾರದಲ್ಲಿದ್ದಾಗ ಯಾರಿಗೂ ತಿಳಿಯದಂತೆ ತಲೆಯನ್ನು ಕತ್ತರಿಸಿ ತರುತ್ತಾಳೆ. ಅಷ್ಟರಲ್ಲಿ ಶತ್ರುಗಳ ಸೈನ್ಯವು ದಾಳಿ ಮಾಡಿರುತ್ತದೆ. ಹೀಗೆ ಈ ನಾಟಕದಲ್ಲಿ ಕುಮಾರರಾಮನು ದುರಂತ ಪಾತ್ರವಾದಂತೆ ರತ್ನಾಜಿಯು ದುರಂತ ಪಾತ್ರವಾಗಿ ಮೂಡಿಬಂದಿದೆ.

ಹೀಗೆ ಈ ಮೇಲ್ಕಂಡಂತೆ ಕೆಲವು ಹೆಣ್ಣು ಪಾತ್ರಗಳನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಪ್ರಾರಂಭದ ನಾಟಕದಲ್ಲಿ, ಅಂದರೆ ಇಲಿಬೋನು ನಾಟಕದಲ್ಲಿ ಬರುವ ಹೆಂಗಸು ಪಾತ್ರ ಮುಖ್ಯವಾದದ್ದು. ನಾಟಕದಲ್ಲಿ ಒಂದು ಹೊಸ ತಿರುವು ಪಡೆದುಕೊಳ್ಳುವಲ್ಲಿ ಇದು ಪ್ರೇರಕವಾಗಿ, ಇಬ್ಬರು ಅವಾಸ್ತವಿಕ ನೆಲೆಗಟ್ಟಿನಲ್ಲಿ ವ್ಯರ್ಥ ಕಾಲ ಕಳೆಯುವುದನ್ನು ನಿಲ್ಲಿಸಿ ವರ್ತಮಾನದ ಸ್ಥಿತಿಗೆ ತರಲು ಮುಖ್ಯ ಪಾತ್ರವಾಗಿದೆ. ಆದುದರಿಂದ 'ಇಲಿಬೋನು' ನಾಟಕವೂ ಒಂದು ಅಸಂಗತ ನಾಟಕ ಎನಿಸಿಕೊಳ್ಳುವಲ್ಲಿ ಪ್ರಮುಖವಾದದ್ದಾಗಿದೆ.

ಬಿಂಬ ನಾಟಕದಲ್ಲಿಯೂ ನಾಟಕಕಾರರು ಕೆಲವೊಂದು ಹೆಣ್ಣು ಪಾತ್ರಗಳನ್ನು ವಿಶೇಷವಾಗಿ ಬಳಸಿದ್ದಾರೆ. ಸೀತೆ ಇವಳ ಸೇವಕಿಯಾದ ಸುಜಾತೆ, ವನದೇವತೆ ಹೀಗೆ ಹೆಣ್ಣಿನ ಪಾತ್ರಗಳು ತಮ್ಮದೇ

ಆದ ರೀತಿಯಲ್ಲಿ ಪಾತ್ರವಹಿಸಿವೆ. ಮುಖ್ಯ ಪಾತ್ರವಾದ ಸೀತೆಯು ನಾಟಕದಲ್ಲಿ ವಿಭಿನ್ನವಾಗಿ ಕಾಣುತ್ತಾಳೆ. ಇಲ್ಲಿ ರಾಮನಿಂದ ಸೀತೆ ದೂರವಾಗಲು ಮೂಲ ರಾಮಾಯಣದಲ್ಲಿ ಒಬ್ಬ ಅಗಸನ ಮಾತು ಮುಖ್ಯವಾಗುತ್ತದೆ. ಇಲ್ಲಿ ಅಗಸನ ಮಾತಿಗಿಂತ ರಾವಣನ ಚಿತ್ರಪಟ ಕಾರಣವಾಗುತ್ತದೆ. ಈ ಚಿತ್ರಪಟವನ್ನು ನೋಡಿದ ರಾಮನ ತಿರಸ್ಕಾರ, ಒಂದು ರೀತಿಯ ನಾಟಕದ ಪ್ರೀತಿ ತೋರುವಿಕೆ ಇವುಗಳಿಂದ ಬೇಸತ್ತು ಸೀತೆ ಕಾಡುಪಾಲಾಗುತ್ತಾಳೆ. ಲಕ್ಷ್ಮಣ ಕಾಡಿಗೆ ಬಿಟ್ಟುಬರುವುದು ಮೂಲ ರಾಮಾಯಣದಲ್ಲಿ, ಆದರೆ ಇಲ್ಲಿ ಸೀತೆಯೇಸ್ವಇಚ್ಛೆಯಿಂದ ಕಾಡಿನಲ್ಲಿ ಹುತ್ತಕ್ಕೆ ತನಿ ಎರೆಯಲು ಹೋಗಿ ಅಲ್ಲಿಂದಲೇ ಕಾಡುಪಾಲಾಗುತ್ತಾಳೆ. ನಂತರ ಗರ್ಭಿಣಿಯಾದ ಸೀತೆಯು ವನದೇವತೆಗಳ ಆಶ್ರಯದಲ್ಲಿ 2 ಗಂಡುಮಕ್ಕಳಿಗೆ ಜನ್ಮ ನೀಡುತ್ತಾಳೆ. ನಂತರ ವಾಲ್ಮೀಕಿ ಆಶ್ರಮಕ್ಕೆ ಸೇರುತ್ತಾಳೆ. ಆದರೆ ಈ ರೀತಿಯ ಸನ್ನಿವೇಶ ಮೂಲ ರಾಮಾಯಣದಲ್ಲಿಲ್ಲ. ಅಲ್ಲಿ ವಾಲ್ಮೀಕಿ ಆಶ್ರಮದಲ್ಲಿ ಹೆರಿಗೆಯಾಗುತ್ತದೆ. ಹೀಗೆ ಬಿಂಬ ನಾಟಕದಲ್ಲಿ ಅತ್ತೆಯರ ಮಾತು, ರಾಮನ ತಿರಸ್ಕಾರ ಸೀತೆಗೆ ಬೇಸರ ಉಂಟುಮಾಡುತ್ತದೆ. ಇದಕ್ಕೆಲ್ಲ ಕಾರಣ ಇಲ್ಲಿ ರಾವಣನ ಚಿತ್ರಪಟ ಕಾರಣವಾಗುತ್ತದೆ.

ಕುಮಾರರಾಮ ನಾಟಕದಲ್ಲಿ ಕುಮಾರರಾಮನ ಪಾತ್ರದಷ್ಟೇ ಮುಖ್ಯವಾದುದ್ದು ರತ್ನಾಜಿ ಪಾತ್ರ ಕುಮಾರರಾಮನು ದುರಂತವಾಗುವುದಕ್ಕೆ ಕಾರಣ ರತ್ನಾಜಿ. ಇಲ್ಲಿ ಕುಮಾರರಾಮ ಪಾತ್ರ ದುರಂತ ನಾಯಕನಾಗುತ್ತಾನೆ, ಹಾಗೆಯೇ ರತ್ನಾಜಿಯ ಪಾತ್ರವೂ ದುರಂತವಾಗುತ್ತದೆ. ಇದಕ್ಕೆ ಸಹಾಯಕವಾಗಿ ರತ್ನಾಜಿ ಸೇವಕಿಯಾದ ಸಂಗಾಯಿ ಪಾತ್ರ ಮುಖ್ಯವಾಗಿದೆ. ತನ್ನ ಲೈಂಗಿಕ ಬಯಕೆಗಾಗಿ ಆಸೆಪಟ್ಟು ತಿರಸ್ಕಾರದಿಂದ ಪ್ರೀತಿ ದ್ವೇಷವಾಗಿ ಪರಿವರ್ತನೆಯಾಗುತ್ತದೆ. ಮುಂದೆ ಕುಮಾರರಾಮನ ಸಾವಿಗೆ ಕಾರಣವಾಗುತ್ತದೆ. ಈ ಕಾರ್ಯವನ್ನು ಸಂಗಾಯಿ ಮಾಡುತ್ತಾಳೆ. ಹೀಗೆ ಕುಮಾರರಾಮ ನಾಟಕದಲ್ಲಿ ರತ್ನಾಜಿ ಮತ್ತು ಸಂಗಾಯಿ ಪಾತ್ರಗಳು ಮುಖ್ಯವಾದವುಗಳಾಗಿವೆ.

# ಅಡಿ ಟಿಪ್ಪಣಿಗಳು

| | | |
|---|---|---|
| 1. ಇಲಿಬೋನು | ಚದುರಂಗ | ಪುಟ: 118 |
| 2. ಬಿಂಬ | -- | ಪುಟ: 149 |
| 3. ಬಿಂಬ | -- | ಪುಟ: 157 |
| 4. ಕುಮಾರರಾಮ | -- | ಪುಟ: 45 |
| 5. ಕುಮಾರರಾಮ | -- | ಪುಟ: 52 |
| 6. ಕುಮಾರರಾಮ | -- | ಪುಟ: 53 |
| 7. ಕುಮಾರರಾಮ | -- | ಪುಟ: 59 |
| 8. ಕುಮಾರರಾಮ | -- | ಪುಟ: 62 |
| 9. ಕುಮಾರರಾಮ | -- | ಪುಟ: 66 |
| 10. ಕುಮಾರರಾಮ | -- | ಪುಟ: 74 |

# ಅಧ್ಯಾಯ – 3

## ನಾಟಕೀಯ ಸನ್ನಿವೇಶ ಮತ್ತು ಸಿನಿಮೀಯ ಸನ್ನಿವೇಶದ ಒಂದು ಸಂಕ್ಷಿಪ್ತ ನೋಟ

# ನಾಟಕೀಯ ಸನ್ನಿವೇಶ ಮತ್ತು ಸಿನಿಮೀಯ ಸನ್ನಿವೇಶದ ಒಂದು ಸಂಕ್ಷಿಪ್ತ ನೋಟ:

ಚದುರಂಗರು ನಾಟಕವನ್ನು ಬರೆಯುವ ಸಮಯಕ್ಕೆ ರಂಗಭೂಮಿಯ ಬಗ್ಗೆ ಹಲವಾರು ಚಿಂತನೆಗಳು ಪ್ರಕಟವಾಗಿದ್ದವು. ಅಂತಹ ಸಂದರ್ಭದಲ್ಲಿ ಚದುರಂಗರವರ ನಾಟಕವಾದ 'ಸತ್ಯದ ಝೋಕು' ಗಂಭೀರವಾಗಿರದೇ ಕೇವಲ ಪ್ರಹಸನವಾಗಿ ಕಂಡುಬರುತ್ತದೆ. ನಂತರ ತಮ್ಮ ಎರಡನೇ ನಾಟಕವಾದ 'ಕುಮಾರರಾಮ' ಬರೆಯುವಾಗ ಅವರು ಗಂಭೀರತೆಯನ್ನು ಬಳಸಿದ್ದಾರೆ. ಅವರು ಈ ನಾಟಕದಲ್ಲಿ ನಾಟಕದ ಅಂಶಗಳು, ಸನ್ನಿವೇಶಗಳ ಜೊತೆಗೆ ಸಿನಿಮೀಯ ಸನ್ನಿವೇಶವನ್ನು ನಿರ್ಮಿಸಿದ್ದಾರೆ. ಈ ನಾಟಕದಲ್ಲಿ ಎರಡು ರೀತಿಯ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತೆ ನೋಡಿಕೊಂಡಿದ್ದಾರೆ. ಈ ನಾಟಕದಲ್ಲಿ ಸಿನಿಮೀಯ ದೃಶ್ಯಗಳಿಗೆ ಒತ್ತು ಕೊಟ್ಟಂತಹ ಅನೇಕ ಘಟನೆಗಳಿವೆ. ಏಕೆಂದರೆ ಚದುರಂಗರು ಈ ನಾಟಕವನ್ನು ಬರೆಯುವ ಸಂದರ್ಭದಲ್ಲಿ ಚಲನಚಿತ್ರದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದರು. ಆದ್ದರಿಂದ ಇವರು ನಾಟಕಗಳನ್ನು ಬರೆಯುವುದರ ಜೊತೆಗೆ ಚಲನಚಿತ್ರಗಳನ್ನು ನಿರ್ದೇಶನ ಸಹ ಮಾಡಿದ್ದಾರೆ. ಈ ರೀತಿಯ ಕುಶಲತೆಯನ್ನು ಹೊಂದಿರುವ ಚದುರಂಗರು ತಮ್ಮ ನಾಟಕಗಳಲ್ಲಿ ನಾಟಕೀಯ ಸನ್ನಿವೇಶದ ಜೊತೆಗೆ ಸಿನಿಮೀಯ ಸನ್ನಿವೇಶಗಳನ್ನು ಒಳಗೊಂಡಿರುವಂತೆ ಮಾಡಿದ್ದಾರೆ. ಕುಮಾರರಾಮ ನಾಟಕವು ದುರಂತ ನಾಟಕವಾಗಿದೆ. ಇಲ್ಲಿ ಘಟನೆಗಳ ಸರಪಣಿಯೇ ಹೊಂದಿದೆ. ಇಂತಹ ಸಂದರ್ಭದಲ್ಲಿ ನಾಟಕಕಾರರು ಕೆಲವು ಘಟನೆಗಳನ್ನು ನಾಟಕೀಯವಾಗಿ ಮಂಡಿಸುವಲ್ಲಿ ಯಶಸ್ವಿಯೂ ಆಗಿದ್ದಾರೆ. ಆದ್ದರಿಂದಲೇ ಘಟನೆಗಳ ಪ್ರಧಾನವಾದ ಈ ಕಥೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇವರು ನಾಟಕವನ್ನು ಬರೆಯುವ ಸಮಯದಲ್ಲಿ ಅವರಿಗೆ ಚಲನಚಿತ್ರದ ಬಗ್ಗೆ ಆಸಕ್ತಿಯಿತ್ತು. ಅದರ ಪ್ರತಿಫಲವಾಗಿ ಕೆಲವು ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಬಹುಶಃ ಇದರ ಪ್ರಭಾವದಿಂದಾಗಿಯೇ ತಮ್ಮ ನಾಟಕಗಳ ರಚನೆಗಳ ಮೇಲೆ ಪ್ರಭಾವ ಬೀರಿದೆ. ಒಟ್ಟಾರೆಯಾಗಿ ಇವರ . ಕುಮಾರರಾಮ ನಾಟಕವು ಎರಡು ರೀತಿಯ ಸನ್ನಿವೇಶಗಳಿಗೆ ಹೊಂದಿಕೊಳ್ಳುತ್ತದೆ. ಇದನ್ನು ನಾಟಕದ ಕೆಲವು ದೃಶ್ಯಗಳ ಮೂಲಕ ತಿಳಿಯಬಹುದಾಗಿದೆ.

ಚದುರಂಗರ ಕುಮಾರರಾಮ ನಾಟಕದಲ್ಲಿ ನಾಟಕೀಯ ಸನ್ನಿವೇಶಗಳ ಜೊತೆಗೆ ಸಿನಿಮೀಯ ದೃಶ್ಯಗಳಿಗೂ ಒತ್ತುಕೊಟ್ಟಂತಹ ಕೆಲವು ಘಟನೆಗಳಿವೆ. ಕುಮಾರರಾಮ ನಾಟಕವು ಪ್ರಾರಂಭವಾಗುವುದೇ ದೆಹಲಿಯ ಸುಲ್ತಾನನು ತುಘಲಕನು ಕಂಪಿಲರಾಯನ ಮುಂದೆ ತಂದು ಒಡ್ಡುವ ರಾಜಕೀಯ ಒತ್ತಡದಿಂದ. ಇಲ್ಲಿ ದೆಹಲಿಯ ಸುಲ್ತಾನನ ವೈರಿಯಾದಂತಹ ಬಹಾವುದ್ದೀನನ್ನು ಕಂಪಿಲರಾಯನು ಆಶ್ರಯ ನೀಡಿ ತನ್ನ ರಾಜ್ಯಕ್ಕೆ ಕರೆತಂದಿರುತ್ತಾನೆ. ಇದನ್ನು ತಿಳಿದ ಸುಲ್ತಾನ ತುಘಲಕ್‌ನು ಕಂಪಿಲರಾಯನಿಗೆ ಪತ್ರವೊಂದನ್ನು ಬರೆಯುತ್ತಾನೆ. ಅಂದರೆ ತಮಗೆ ಭಯಪಡದೇ ತಮ್ಮ ಶತ್ರುವಿಗೆ ಆಶ್ರಯ ನೀಡಿರುವುದು ತಪ್ಪು. ನೀವು ನಮಗೆ ಭಯಪಡಬೇಕು ಎಂಬುದು ಪತ್ರದ ಸೂಚನೆಯಾಗಿರುತ್ತದೆ. ಆ ಪತ್ರವನ್ನು ಕಂಪಿಲರಾಯನು ಆಸ್ಥಾನದಲ್ಲಿ ಎಲ್ಲರೂ ಕುಳಿತಿರುವಾಗ ಓದಿಸಲಾಗುತ್ತದೆ. ಆ ಪತ್ರದಲ್ಲಿ ತುಘಲಕ್‌ನು ಕಂಪಿಲರಾಯನಿಗೆ ಎಚ್ಚರಿಕೆಯನ್ನು, ತಮಗೆ ಶರಣಾಗಬೇಕು ಎಂಬುದನ್ನು ತಿಳಿಸಿರುತ್ತಾನೆ. ಕ್ಷಮಾಪಣೆ ಕೋರಿ ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತವಾಗಿ ಪಲ್ಲಕ್ಕಿಯಲ್ಲಿಟ್ಟು ಕಳಿಸಿರುವ ನಮ್ಮ ಪಾದುಕೆಗಳಿಗೆ ನಮಸ್ಕಾರ ಮಾಡಿ ರಾಶಿರಾಶಿ ಚಿನ್ನದ ಕಾಣಿಕೆಯನ್ನು ಕೊಡಬೇಕು ಎಂದು ಆ ಪತ್ರದಲ್ಲಿ ತಿಳಿಸಿರುತ್ತಾರೆ. ಹಾಗೆಯೇ ಇನ್ನು ಮುಂದೆ ದೆಹಲಿಯ ಸುಲ್ತಾನರಿಗೆ ತಲೆಬಾಗಬೇಕು ಎಂದು ಹೇಳಿರುತ್ತಾರೆ. ಈ ಮಾತನ್ನು ಕೇಳಿದ ಸಭೆಯಲ್ಲಿರುವ ಎಲ್ಲಾ ನಾಯಕರುಗಳು ಕೋಪಗೊಳ್ಳುತ್ತಾರೆ. ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ಪ್ರತಿಕ್ರಿಯೆಯನ್ನು ನೀಡುತ್ತಾರೆ. ಆದರೆ ಕುಮಾರರಾಮನು ಯಾವುದೇ ರೀತಿಯ ಪ್ರತಿರೋಧವನ್ನು ವ್ಯಕ್ತಪಡಿಸುವುದಿಲ್ಲ. ಇಲ್ಲಿಯವರೆಗೂ ಈ ಸಭೆಯ ಸನ್ನಿವೇಶವು ನಾಟಕೀಯ ಸನ್ನಿವೇಶವಾಗಿರುತ್ತದೆ. ಚದುರಂಗರು ಈ ಸನ್ನಿವೇಶದಲ್ಲಿ ನಾಟಕೀಕರಣಗೊಳಿಸುವ ಸನ್ನಿವೇಶವನ್ನು ಚಿತ್ರಿಸಿದ್ದಾರೆ. ನಂತರ ಇದೇ ಸನ್ನಿವೇಶವನ್ನು ಸಿನಿಮಾದ ಶೈಲಿಗೆ ಹೊಂದುವಂತಹ ಸನ್ನಿವೇಶವನ್ನು ನಿರ್ಮಿಸಿದ್ದಾರೆ. ಸಭೆಯಲ್ಲಿನ ನಾಯಕರು ಸುಲ್ತಾನನ ಪತ್ರಕ್ಕೆ ಪ್ರತಿರೋಧವನ್ನು ವ್ಯಕ್ತಪಡಿಸುತ್ತಿದ್ದರೂ, ಕುಮಾರರಾಮನು ಮಾತ್ರ ಯಾವುದೇ ಪ್ರತಿರೋಧವನ್ನು ವ್ಯಕ್ತಪಡಿಸದೇ ಪಾದುಕೆಗಳ ಕಡೆ ಧಾವಿಸುತ್ತಾನೆ. ಇಲ್ಲಿಯತನಕ ಸುಮ್ಮನಿದ್ದ ನಾಯಕರು ಕುಮಾರರಾಮನು ಪಾದುಕೆಗಳ ಕಡೆಗೆ ಹೋಗುತ್ತಿರುವುದನ್ನು ತಡೆಯಲು ಅನೇಕರು ಪ್ರಯತ್ನಿಸುತ್ತಾರೆ. ಆದರೆ ಮಂತ್ರಿಯಾದ ಬೈಚಪ್ಪನು ತಡೆಯುತ್ತಾನೆ. ಇವರನ್ನು ಲೆಕ್ಕಿಸದೇ ಕುಮಾರರಾಮನು ಸಭೆಯಲ್ಲಿ ನಾಯಕರುಗಳ ಅಭಿಪ್ರಾಯವನ್ನು ಬುಡಮೇಲು ಮಾಡುತ್ತಾನೆ. ಇವರು ಪಾದುಕೆಗಳಿಗೆ ನಮಸ್ಕಾರ ಮಾಡುತ್ತಾನೆ ಎಂದುಕೊಂಡಿದ್ದರೆ, ಕುಮಾರರಾಮನು ಮಾಡುವುದೇ ಬೇರೆಯಾಗಿರುತ್ತದೆ.

1. "(ಯಾರ ಪರಿವೆಯೂ ಇಲ್ಲದವನಂತೆ ಮುಂದುವರೆದು, ಆ ಪಾದುಕೆಗಳ ಬಳಿನಿಂತು ಒಮ್ಮೆ ಅಲ್ಲಿರುವವರೆಲ್ಲರ ಸಿಂಹಾವಲೋಕನ ಮಾಡಿ, ಆ ಪಾದುಕೆಗಳಿಗೆ ತನ್ನ ಪಾದಗಳನ್ನು ತೊಡಿಸಿ ಮೆಟ್ಟಿ ನಿಂತು) ಸರದಾರರೇ, ಈ ಪಾದುಕೆಗಳು ನನ್ನ ಪಾದಗಳಿಗೆ ಹೇಳಿ ಮಾಡಿಸಿದಂತಿವೆ. ನೋಡುವುದಕ್ಕೂ ತುಂಬಾ ರಮಣೀಯವಾಗಿವೆ. ಇಷ್ಟು ಸೊಗಸಾದ ಬೆಡಗಿನ ಜೋಡುಗಳನ್ನು ನಿರ್ಮಿಸಬೇಕಾದರೆ ಡಿಳ್ಳಿಯ ಆ ನಿಮ್ಮ ಚಮ್ಮಾರರು ಸಾಮಾನ್ಯರಂತಿರದೆ ಮಹಾ ಕುಶಲರೇ ಇರಬೇಕು. ಆದ್ದರಿಂದ ನಿಮ್ಮ ಸುಲ್ತಾನರಿಗೆ ಅರಿಕೆ ಮಾಡಿ ನಮ್ಮ ಪೂಜ್ಯ ತಂದೆಯವರಿಗೂ ಸೊಗಸಾದ ಇಂತಹ ಇನ್ನೊಂದು ಜತೆ ಜೋಡುಗಳನ್ನು ತಯಾರಿಸಿ ಕಳುಹಿಸಿಕೊಟ್ಟಲ್ಲಿ ನಮಗೆ ಮಹದುಪಕಾರ ಮಾಡಿದಂತಾಗುವುದೆಂದು ತಿಳಿಸಿ".

ಈ ಸನ್ನಿವೇಶವು ನಾಟಕೀಯವಾಗಿ ತುಂಬಾ ಚೆನ್ನಾಗಿ ಮೂಡಿಬರುತ್ತದೆ. ಅದಕ್ಕಿಂತ ಹೆಚ್ಚಾಗಿ ಈ ಸನ್ನಿವೇಶವು ಸಿನಿಮಾಕ್ಕೆ ಹೆಚ್ಚು ಹೊಂದುತ್ತದೆ. ಅಲ್ಲಿ ಪ್ರತಿಯೊಂದು ಚಲನವಲನಗಳಿಗೂ ಸಿನಿಮಾ ಶೈಲಿಯು ಹೊಂದಿಕೆ ಆಗುವಂತೆ ಮೂಡಿಬಂದಿದೆ. ಸಭೆಯ ನಾಯಕರೆಲ್ಲರ ಅಭಿಪ್ರಾಯಕ್ಕೆ ವಿರೋಧವಾಗಿ ನಡೆದುಕೊಳ್ಳುತ್ತಾನೆ. ಕಡೆಯಲ್ಲಿ ರಾಮನು ಆ ಪಾದುಕೆಗಳನ್ನು ಮೆಟ್ಟುವ ಮುಖಾಂತರ ತನ್ನ ಪ್ರತಿಭಟನೆಯನ್ನು ಎಲ್ಲರ ನಿರೀಕ್ಷೆಗೂ ಮೀರಿ ವ್ಯಕ್ತಪಡಿಸುತ್ತಾನೆ. ಹೀಗೆ ಈ ಸನ್ನಿವೇಶವು ಸಿನಿಮಾಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿದೆ. ಹಾಗೆಯೇ ಇದನ್ನು ಸಿನಿಮಾ ಸನ್ನಿವೇಶ ಎಂದರೂ ತಪ್ಪಾಗಲಾರದು. ಏಕೆಂದರೆ ಇಲ್ಲಿ ಮೊದಲೇ ಹೇಳಿದಂತೆ ಚದುರಂಗರು ಈ ನಾಟಕ ರಚನೆಯ ಕಾಲಕ್ಕೆ ಸಿನಿಮಾ ಬಗ್ಗೆ ಆಸಕ್ತಿಯನ್ನು ಹೊಂದಿದ್ದರು. ನಂತರ ಸಿನಿಮಾವನ್ನು ನಿರ್ದೇಶಿಸಿದ್ದರೂ ಭಾಗಶಃ ಅದರ ಪ್ರಭಾವವೂ ಈ ನಾಟಕ ರಚನೆಯ ಮೇಲೂ ಆಗಿರಬಹುದಾಗಿದೆ. ಕುಮಾರರಾಮ ನಾಟಕದಲ್ಲಿ ತೊಘಲಕನ ಪತ್ರದಿಂದ ಉದ್ಭವವಾಗುವ ಯುದ್ಧ, ನಂತರ ಯುದ್ಧದಲ್ಲಿ ವ್ಯಕ್ತವಾಗುವ ಕುಮಾರರಾಮನ ಪರಾಕ್ರಮ, ರಾಮನ ಪರಾಕ್ರಮ ಮತ್ತು ಅವನ ಸೌಂದರ್ಯಕ್ಕೆ ಮೋಹಿತಳಾಗುವ ರತ್ನಾಜಿ, ರಾಮನ ಬಯಸಿ ಆಡುವ ಬುತ್ತಿಯ ಚೆಂಡಿನಾಟ, ರತ್ನಾಜಿಯ ಕಾಮನೆಗಳ ಬಯಕೆಗಳು ಮತ್ತು ರಾಮನಿಂದ ತಿರಸ್ಕಾರಗೊಂಡ ನಂತರದ ಪ್ರತೀಕಾರ ಬಾವನೆಗಳು, ರಾಜನಾದ ಕಂಪಿಲರಾಯನ ಅಂಧವ್ಯಾಮೋಹ, ಮಂತ್ರಿ ಬೈಚಪ್ಪನ ಚಾಣಾಕ್ಷತನ ಮತ್ತು ಕೊನೆಗೆ ಸಂಭವಿಸಿದ ಕುಮಾರರಾಮನ ದುರಂತ ಮರಣ– ಹೀಗೆ ಹಲವಾರು ಘಟನೆಗಳೇ ನಾಟಕವನ್ನು

ಮುನ್ನಡೆಸುತ್ತದೆ. ಇಂತಹ ಕೆಲವು ಘಟನೆಗಳನ್ನು ಚದುರಂಗರು ಕೆಲವು ಕಡೆ ಬಹುದೊಡ್ಡದಾದ ಯಶಸ್ಸನ್ನು ಪಡೆದಿದ್ದಾರೆ.

ಚದುರಂಗರು ಕೆಲವು ಘಟನೆಗಳನ್ನು ನಾಟಕೀಕರಣಗೊಳಿಸುವಲ್ಲಿ ಯಶಸ್ವಿಯಾದ ಎಂಟನೇ ದೃಶ್ಯವನ್ನು ನೋಡಬಹುದು. ಮೊದಲಿಗೆ ರತ್ನಾಜಿಯು ತನ್ನ ಅರಮನೆಯಲ್ಲಿ ಏಕಾಂಗಿಯಾಗಿ ಕುಳಿತಿರುವುದು. ತನ್ನ ಸೇವಕಿಯಾದ ಸಂಗಾಮಿಯು ಬಂದುದರ ಅರಿವು ಅವಳಿಗೆ ಇರುವುದಿಲ್ಲ. ಅಷ್ಟು ಏಕಾಂತವಾಗಿ ರತ್ನಾಜಿ ಮೈಮರೆತಿರುತ್ತಾಳೆ. ಅದನ್ನು ಗಮನಿಸಿದ ಸಂಗಾಯಿಯು ರತ್ನಾಜಿಯನ್ನು ಎಚ್ಚರಗೊಳ್ಳುವಂತೆ ಗಟ್ಟಿಯಾಗಿ ಕರೆಯುತ್ತಾಳೆ. ಆಗ ರತ್ನಾಜಿಯು ಈ ರೀತಿ ಹೇಳುತ್ತಾಳೆ.

2. "ರತ್ನಾಜಿ, ನಿದ್ದೆಯೇ? ಇಲ್ಲ ಇಲ್ಲ_ ನನ್ನ ಕಣ್ಣಗಳ ಬಾಗಿಲಿನಿಂದ ನನ್ನ ಭುವನಾಭಿರಾಮನನ್ನು ಒಳಗೆ ಬರಮಾಡಿಕೊಂಡು ಕುಳ್ಳಿರಿಸಿ, ಅವನು ಮರಳಿ ಹೋಗದಂತೆ ಎಚ್ಚರವಹಿಸಿ, ಎದೆಕದಗಳನ್ನು ಭದ್ರಗೊಳಿಸಿದೆ"

ಇಲ್ಲಿ ರತ್ನಾಜಿಯು ಮಲಗಿರುವಂತೆ ನಟಿಸುವುದು, ರತ್ನಾಜಿಯನ್ನು ಸಂಗಾಯಿ ಎಚ್ಚರಿಸಿದಾಗ ನಿದ್ದೆ ಮಾಡುತ್ತಿರಲಿಲ್ಲ, ನನ್ನ ಪ್ರೀತಿಯ ರಾಮನನ್ನು ತನ್ನ ಮನಸ್ಸಿನ ಮನೆಗೆ ಕರೆದುಕೊಂಡು ಭದ್ರವಾಗಿ ಕಾಯುತ್ತಿದ್ದೆನು ಎನ್ನುವ ಮಾತುಗಳೇ ತುಂಬಾ ನಾಟಕೀಯ ಮಾತುಗಳು, ಸನ್ನಿವೇಶವೂ ನಾಟಕೀಯವಾಗಿದೆ.

ಇಲ್ಲಿ ರತ್ನಾಜಿಯು ಕುಮಾರರಾಮನನ್ನು ಬಯಸುವುದು, ಅದನ್ನು ತನ್ನ ಸೇವಕಿಯಾದ ಸಂಗಾಯಿಗೆ ಹೇಳುವುದು ಸಹ ನಾಟಕೀಯ ಶೈಲಿಯಲ್ಲಿ ನಡೆಯುತ್ತದೆ. ನಂತರ ಕುಮಾರರಾಮನನ್ನು ರತ್ನಾಜಿಯ ಅಂತಃಪುರಕ್ಕೆ ಬರಲು ಏರ್ಪಾಡುಗಳನ್ನು ಮಾಡಿರುತ್ತಾಳೆ. ಸಂಗಾಯಿಯು ಮಾತುಕತೆಗೆ ಮೊದಲೇ ಎಲ್ಲಾ ಸಿದ್ಧತೆಗಳನ್ನು ಮಾಡಿರುತ್ತಾಳೆ.

3. "ಸಂಗಾಯಿ : ಇಲ್ಲ, ಮರದ ಮೇಲಣ ಹಣ್ಣು ಅದರಷ್ಟಕ್ಕೆ ಬಾಯಿಗೆ ಬೀಳುವುದಿಲ್ಲ

ಆದರೆ– ಅದನ್ನು ಕಿತ್ತು ತಂದು ಬಾಯಿಗಿಡುವ ಏರ್ಪಾಡಾಗಿದ್ದರೆ? ಆಗ?

ರತ್ನಾಜಿ : ಯಾರೇ ಬಾಯಿಗಿಡುವವರು? ನಿನ್ನ ಮಾತೇ ನನಗರ್ಥವಾಗುತ್ತಿಲ್ಲ. ಸಂಗೀ ಸಂಗೀ, ನನ್ನ ಬದುಕೇ ಒಂದು ದೊಡ್ಡ ಒಗಟಾಗಿರುವಾಗ, ಮಾತನ್ನು ಒಗಟು ಮಾಡಿ ಕಾಡಬೇಡ!

ಸಂಗಾಯಿ: ಇದರಲ್ಲಿ ಒಗಟೇನಿಲ್ಲ, ಕೇಳಿ ಆ ತೆಲುಗರ ವೀರಮನ್ನ ಓಬನಾಯಕ ನಿಮ್ಮ ದಾದಿ ರಮೆಯಲ್ಲಿ ಮನಸ್ಸಾಗಿದ್ದಾನೆ. ಆದರೆ ಅವಳನ್ನು ಲಗ್ನವಾಗಿ ಜೀವನ ಸಾಗಿಸುವಷ್ಟು ಅನುಕೂಲ ಅವನಿಗಿಲ್ಲ. ಆದ್ದರಿಂದ ಅವನನ್ನು ರಮಿಸಿ, ಎಲ್ಲರೂ ಕೂಡಿ ಉದ್ರೇಕದಿಂದ ಕಂದುಕ ಕ್ರೀಡೆಯಲ್ಲಿ ನಿರತರಾಗಿರುವ ಹೊತ್ತಿನಲ್ಲಿ ಚೆಂಡು ತನ್ನ ಕೈಗೆ ಬಂದೊಡನೆಯೇ ನೇರವಾಗಿ ನಮ್ಮ ಮಹಲಿನೊಳಗೆ ಬಂದು ಬೀಳುವ ಹಾಗೆ ರಭಸದಿಂದ ಅದನ್ನು ಎಸೆದು ಬಿಡಬೇಕೆಂದು ಅವನ ಮನವೊಲಿಸಿದ್ದೇನೆ. ಹಾಗೆ ನಡೆದು ಉಪಕಾರ ಮಾಡಿದರೆ ಕಿರಿರಾಣಿಯರಿಂದ ವಿವಾಹದ ವೆಚ್ಚವನ್ನಷ್ಟೇ ಅಲ್ಲದೆ, ಅವನ ಜೀವನ ನಿರ್ವಹಣಕ್ಕೂ ಹೊನ್ನು ಕೊಡಿಸುವುದಾಗಿ ಆಮಿಷ ತೋರಿದ್ದೇನೆ".

ಇಲ್ಲಿ ಈ ಸಂಭಾಷಣೆಯು ರತ್ನಾಜಿಯು ಮೋಹಿತಳಾದ ಕುಮಾರರಾಮನನ್ನು ಸುಲಭವಾಗಿ ತನ್ನೆಡೆಗೆ ಬರುವಂತೆ ಮಾಡುವ ಉಪಾಯದ ವಿವರವಾಗಿದೆ. ಇಲ್ಲಿ ಸಂಗಾಯಿಯು ತನ್ನ ಕುತಂತ್ರದಿಂದ ಕುಮಾರರಾಮನನ್ನು ರತ್ನಾಜಿಯ ಅಂತಃಪುರಕ್ಕೆ ಕರೆತರುವುದು ಎಂಬುದನ್ನು ಅತ್ಯಂತ ನಾಟಕೀಯವಾಗಿ ನಿರೂಪಿಸಿದ್ದಾರೆ. ಇಲ್ಲಿ ಈ ಸನ್ನಿವೇಶವೇ ನಾಟಕೀಯ ತಿರುವನ್ನು ಪಡೆಯುವುದ್ದಾಗಿದೆ.

ಸಂಗಾಯಿಯ ತಂತ್ರದಿಂದ ಚೆಂಡು ರತ್ನಾಜಿಯ ಅಂತಃಮರದಲ್ಲಿ ಬಂದು ಬೀಳುತ್ತದೆ. ಅದನ್ನು ತೆಗೆದುಕೊಂಡು ಹೋಗಲು ಕುಮಾರರಾಮನು ಬರುತ್ತಾನೆ. ಆದರೆ ಮೊದಲೇ ರತ್ನಾಜಿಯ ಕುಮಾರರಾಮನು ಒಳಗೆ ಬರುವನೋ, ಇಲ್ಲವೋ ಎಂಬ ಸಂಶಯದಲ್ಲಿರುತ್ತಾಳೆ. ಆದರೆ ಅವನು ಒಳಗೆ ಪ್ರವೇಶಿಸುತ್ತಾನೆ. ಅದು ಭಯ, ನಾಚಿಕೆ, ಸಂಕೋಚಗಳಿಂದ ರಾಮನು ಅಂತಃಮರವನ್ನು ಪ್ರವೇಶಿಸುತ್ತಾನೆ. ಆದರೆ ರತ್ನಾಜಿಯು ಅವನು ಬಂದೊಡನೆ ಏನು ತಿಳಿಯದವಳಂತೆ ನಟಿಸುವುದು,

ಅವನಿಗೆ ಹಾಲು, ಹಣ್ಣು ತಂದು ಕೊಟ್ಟು ತನ್ನ ಹತ್ತಿರವೇ ಅವನನ್ನು ಇರುವಂತೆ ನೋಡಿಕೊಳ್ಳುತ್ತಾಳೆ. ನಂತರ ಕುಮಾರರಾಮನಿಗೆ ತನ್ನ ಚಿಕ್ಕಮ್ಮ ಒಳ್ಳೆಯವಳು ಅನಿಸುವಂತೆ ನಟನೆ ಮಾಡುತ್ತಾಳೆ. ಅವನಿಗೆ ಒಳ್ಳೆಯವಳಂತೆ ಉಪಚಾರ ಮಾಡುತ್ತಾಳೆ. ಕುಮಾರರಾಮನು ತಾಯಿಯ ಕೈಯಲ್ಲಿ ಉಪಚರಿಸಿಕೊಂಡ ನಂತರ ಚೆಂಡನ್ನು ಕೊಡು ಎಂದು ಕೇಳುತ್ತಾನೆ. ಆದರೆ ರತ್ನಾಜಿಯು ಕುಮಾರರಾಮನನ್ನು ತನ್ನ ಶೃಂಗಾರ ಉದ್ಯಾನದಲ್ಲಿ ಬಿದ್ದಿರಬಹುದೆಂದು ಹೇಳಿ ಅಲ್ಲಿಗೆ ಕರೆದೊಯ್ಯುತ್ತಾಳೆ. ಅವಳ ಉದ್ದೇಶ ಈ ವನದಲ್ಲಿ ತನ್ನ ಸೌಂದರ್ಯಕ್ಕೆ ಕುಮಾರರಾಮನು ಮನಸೋತು ರತಿಕ್ರೀಡೆಯಲ್ಲಿ ತೊಡಗಬೇಕು ಎಂಬ ಉದ್ದೇಶದಿಂದ ಕರೆದೊಯ್ಯುತ್ತಾಳೆ. ಆದರೆ ಚೆಂಡು ಮಾತ್ರ ದೊರೆಯುವುದಿಲ್ಲ. ನಂತರ ರತ್ನಾಜಿಯು ಕುಮಾರರಾಮನಿಗೆ ಚೆಂಡು ಸಂಗಾಯಿ ಎತ್ತಿಟ್ಟಿರಬಹುದು ಎಂದು ಹೇಳಿ ಶಯನಾಗಾರದ ಒಳಗೆ ಕರೆದೊಯ್ಯುತ್ತಾಳೆ. ಅಂದರೆ ಇಷ್ಟೆಲ್ಲ ನಟನೆಯನ್ನು ಮಾಡುತ್ತಾ ಕುಮಾರರಾಮನನ್ನು ಪಡೆದುಕೊಳ್ಳಬೇಕು ಎಂಬ ಭಾವನೆ ಗಾಢವಾಗಿದೆ. ಆದ್ದರಿಂದಲೇ ಒಂದೊಂದು ರೀತಿಯಲ್ಲಿ ನಟನೆಯನ್ನು ಮಾಡುತ್ತಾ ಹೋಗುತ್ತಾಳೆ. ಇಲ್ಲಿ ಕುಮಾರರಾಮನು ಅರಮನೆಯನ್ನು ಪ್ರವೇಶ ಮಾಡುವುದರ ಮೂಲಕ ನಾಟಕೀಯ ತಿರುವುಗಳು ಪ್ರಾರಂಭವಾಗುತ್ತದೆ. ಚೆಂಡು ಅಂತಃಪುರಕ್ಕೆ ಬರುವುದು, ಕುಮಾರರಾಮ ಒಳಗೆ ಬಂದಾಗ ಅವನಿಗೆ ಉಪಚಾರ ಮಾಡುವುದು, ಅಲ್ಲಿಂದ ಶೃಂಗಾರೋದ್ಯಾನವನಕ್ಕೆ ಕರೆದೊಯ್ಯುವುದು ನಂತರ ಏಕಾಂತ ಸ್ಥಳವಾದ ಶಯನಾಗಾರಕ್ಕೆ ಕರೆದೊಯ್ಯುವ ತನಕ ಅನೇಕ ರೀತಿಯ ನಾಟಕೀಯ ತಿರುವುಗಳನ್ನು ಪಡೆಯುತ್ತದೆ.

4. "ರತ್ನಾಜಿ: ಬಾ ಸಂಗೀಯನ್ನು ಕೇಳಿ ನೋಡೋಣ, ಅವಳೇನಾದರೂ ಶಯನಾಗಾರದಲ್ಲಿ ಇಟ್ಟಿದ್ದರೆ, ಅದು ನಿನ್ನ ಪುಣ್ಯ (ಎದ್ದು ಹೊರಟರು ಇನ್ನು ರತ್ನಾಜಿ) ಅಯ್ಯೋ, ಏಕೊ ತಲೆಸುತ್ತು- ಇದ್ದಕ್ಕಿದ್ದಂತೆಯೇ ತಲೆಸುತ್ತು – ನಿಲ್ಲಲಾರೆ ನಿಲ್ಲಲಾರೆ –ಹಾಂ) ಉತ್ತಮ ನಟನೆ ರಾಮನನ್ನು ತಬ್ಬಿ ಅವನ ವಕ್ಷಸ್ಥಲದ ಮೇಲೆ ತಲೆಯನ್ನೊರಗಿಸಿಯೇ ಬಿಟ್ಟಳು. ರಾಮ ಅವಳು ತಬ್ಬಿದಂತೆಯೇ ಇತ್ತಲಾಗಿ ಅವಳನ್ನು ಮೃದುವಾಗಿ ಕರೆತರುತ್ತಿರುವನು".

ಇಲ್ಲಿ ರತ್ನಾಜಿಯು ಏನಾದರೂ ಮಾಡಿ ಕುಮಾರರಾಮನನ್ನು ಪಡೆಯಬೇಕು ಎಂಬ ಆಸೆಯಿಂದ ಶೃಂಗಾರೋದ್ಯಾನವನದಲ್ಲಿ ಅವನನ್ನು ಸೋಂಕಿಸಿ ನಡೆದಾಡುವುದು. ಯಾರು ಇಲ್ಲದ

ಏಕಾಂತ ಸ್ಥಳ, ಗಿಡಮರಗಳು, ಅದರ ಪಕ್ಕದಲ್ಲಿ ಹುಡುಕಿ ಕೊನೆಗೆ ಶಯನಾಗಾರದಲ್ಲಿ ಇಬ್ಬರು ಬರುತ್ತಾರೆ. ರತ್ನಾಜಿಯು ಮತ್ತೆ ತಲೆಸುತ್ತು ಎಂಬ ನಟನೆಯನ್ನು ಮಾಡಿ ಕುಮಾರರಾಮನ ಎದೆಗೆ ಬಿದ್ದು ತಬ್ಬಿಕೊಳ್ಳುತ್ತಾಳೆ. ಒಟ್ಟಾರೆಯಾಗಿ ಇಲ್ಲಿ ಅನೇಕ ರೀತಿಯ ನಾಟಕೀಯ ತಿರುವುಗಳು, ಸನ್ನಿವೇಶಗಳು ಜರುಗುತ್ತಿವೆ. ಆದರೆ ಕೊನೆಗೆ ರತ್ನಾಜಿಯು ಕುಮಾರರಾಮನನ್ನು ಸ್ವೀಕರಿಸುವಂತೆ ಬೇಡಿಕೊಳ್ಳುತ್ತಾಳೆ. ಆದರೆ ಕುಮಾರರಾಮನು ನಿರಾಕರಿಸುತ್ತಾನೆ. ತಾವು ತನ್ನ ತಾಯಿ ಆದ್ದರಿಂದ ತಾನು ನಿಮ್ಮ ಮಗ ಎಂದು ಬುದ್ಧಿ ಹೇಳುತ್ತಾನೆ. ಆದರೂ ರತ್ನಾಜಿಯು ಕುಮಾರರಾಮನನ್ನು ಹಿಂಸಿಸುತ್ತಾಳೆ. ಕುಮಾರರಾಮನು ದೃಢಮನಸ್ಸಿನಿಂದ ವಿಚಲಿತನಾಗದೇ ರತ್ನಾಜಿಯನ್ನು ತಿರಸ್ಕರಿಸಿ ಬಂದು ಬಿಡುತ್ತಾನೆ.

ಇಲ್ಲಿ ಪ್ರತಿಯೊಂದು ಘಟನೆಯೂ ಸಹ ನಾಟಕೀಯ ರೀತಿಯಲ್ಲಿ ನಡೆಯುತ್ತದೆ. ರತ್ನಾಜಿಯು ಕುಮಾರರಾಮನನ್ನು ಪಡೆಯಲು ಅನೇಕ ರೀತಿಯ ನಾಟಕವನ್ನು ಮಾಡಿ ಪಡೆಯುವ ಬಯಕೆ ಕೊನೆಗೆ ಇಲ್ಲವಾಗುತ್ತದೆ. ಇಲ್ಲಿ ಪ್ರತಿಯೊಂದು ಸನ್ನಿವೇಶವೂ ಸಹ ನಾಟಕೀಯ ರೀತಿಯಲ್ಲಿಯೇ ನಡೆಯುತ್ತದೆ.

ಕುಮಾರರಾಮನು ರತ್ನಾಜಿಯನ್ನು ತಿರಸ್ಕರಿಸುತ್ತಾನೆ. ಆದರೆ ರತ್ನಾಜಿಗೆ ಕುಮಾರರಾಮನ ಮೇಲಿದ್ದ ಪ್ರೀತಿ ಈಗ ಸೇಡಾಗಿ ಪರಿವರ್ತಿತವಾಗುತ್ತದೆ. ರತ್ನಾಜಿಯು ರಾಜನಾದ ಕಂಪಿಲರಾಯನಿಗೆ ಕುಮಾರರಾಮನ ಮೇಲೆ ದೂರು ಹೇಳುತ್ತಾಳೆ. ಕಂಪಿಲರಾಯನಿಗೆ ತನ್ನ ಕಿರಿಯ ರಾಣಿಯ ಮೇಲೆ ಪ್ರೀತಿ ಹೆಚ್ಚು, ಅವಳು ಹೇಳಿದ ಮಾತಿಗೆ ಸಮ್ಮತಿ ಸೂಚಿಸುತ್ತಾನೆ. ರತ್ನಾಜಿಯು ಕುಮಾರರಾಮನು ನನ್ನನ್ನು ಬಲತ್ಕಾರಿಸಲು ಬಂದಿದ್ದನು ಎಂದು ಹೇಳುತ್ತಾಳೆ. ಅದನ್ನು ಕಂಡ ರಾಜನು ಅಂಧವ್ಯಾಮೋಹನಾಗಿ ಕುಮಾರರಾಮನನ್ನು ಶಿಕ್ಷಿಸುವಂತೆ ಆದೇಶ ನೀಡುತ್ತಾನೆ. ಕುಮಾರರಾಮನಿಗೆ ಮರಣದಂಡನೆ ವಿಧಿಸಲಾಗುತ್ತದೆ. ಕುಮಾರರಾಮನ ತಾಯಿಯಾದ ಹರಿಯಾಲದೇವಿಯು ತನ್ನ ಮಗನಿಗಾಗಿ ರತ್ನಾಜಿಯಲ್ಲಿ ಬೇಡಿಕೊಳ್ಳುತ್ತಾಳೆ. ಆದರೆ ರತ್ನಾಜಿ ಯು ಹರಿಯಾಲದೇವಿಯ ಮಾತಿಗೆ ಪ್ರತ್ಯುತ್ತರ ನೀಡದೇ ಕಳುಹಿಸುತ್ತಾಳೆ.

ರಾಜನ ಆದೇಶದಂತೆ ಕುಮಾರರಾಮನ ರುಂಡವನ್ನು ಕಡಿದು ತರಲು ಬೈಚಪ್ಪನು ಸಿದ್ಧನಾಗಿರುತ್ತಾನೆ. ಅವನಿಗೆ ಕುಮಾರರಾಮನ ಪ್ರಾಣವನ್ನು ತೆಗೆಯಲು ಇಷ್ಟವಿರುವುದಿಲ್ಲ. ಆದರೂ

ರಾಜನ ಆಜ್ಞೆಯನ್ನು ಪಾಲಿಸಲೇಬೇಕಾಗಿರುತ್ತದೆ. ಅಷ್ಟರಲ್ಲಿ ಕುಮಾರರಾಮನ ಮುಖದ ಹೋಲಿಕೆಯನ್ನು ಹೊಂದುವ ಕಳ್ಳಬಂಟರಾಮನು ಸೈನಿಕರ ಕೈಗೆ ಸಿಗುತ್ತಾನೆ. ಇವನು ಕಳ್ಳನಾಗಿದ್ದರಿಂದ ಅವನ ತಲೆಯನ್ನು ಕತ್ತರಿಸಿ, ಕುಮಾರರಾಮನ ತಲೆ ಎಂಬುದಾಗಿ ಎಲ್ಲರಿಗೂ ನಂಬಿಸಲಾಗುತ್ತದೆ. ಇಲ್ಲಿ ಬೈಚಪ್ಪನ ಬುದ್ಧಿವಂತಿಕೆಯಿಂದ ಕುಮಾರರಾಮನ ಪ್ರಾಣ ಉಳಿಯುತ್ತದೆ. ಕಳ್ಳಬಂಟರಾಮ ಸಿಗದೇ ಹೋಗದೇ ಇದ್ದಲ್ಲಿ ರಾಮನ ಪ್ರಾಣ ಹೋಗುತ್ತಿತ್ತು. ಇಲ್ಲಿ ಚದುರಂಗರು ಈ ಸನ್ನಿವೇಶದಲ್ಲಿ ನಾಟಕೀಯವಾಗಿ ಚಿತ್ರಿಸುವಲ್ಲಿ ತುಂಬಾ ಯಶಸ್ವಿಯಾಗಿದ್ದಾರೆ. ಕುಮಾರರಾಮನ ತಲೆಕಡಿಯುವುದು, ಅಷ್ಟರಲ್ಲಿ ಬಂಟರಾಮ ಸಿಗುವುದು, ಅವನ ತಲೆಯನ್ನು ಕತ್ತರಿಸಿ ರಾಜನಿಗೆ ಒಪ್ಪಿಸುವುದು, ಹೀಗೆ ಇಡೀ ಸನ್ನಿವೇಶವೇ ನಾಟಕೀಯವಾಗಿ ಕಾಣುತ್ತದೆ. ಚದುರಂಗರು ಇಲ್ಲಿ ತುಂಬಾ ಯಶಸ್ವಿಯಾಗಿ ಕಂಡಿದ್ದಾರೆ.

ಕುಮಾರರಾಮನ ಮೇಲೆ ಸುಳ್ಳು ಆಪಾದನೆ ಮಾಡಿ ರತ್ನಾಜಿಯು ಅವನಿಗೆ ಮರಣದಂಡನೆ ಆಗುವಂತೆ ಮಾಡುತ್ತಾಳೆ. ಆದರೆ ಕುಮಾರರಾಮನ ತಾಯಿ ಹರಿಯಾಲದೇವಿಯು ರತ್ನಾಜಿಯ ಬಳಿ ಬಂದು ಬೇಡಿಕೊಳ್ಳುತ್ತಾಳೆ. ತನ್ನ ಮಗನದು ಏನೂ ತಪ್ಪಿಲ್ಲ ಕ್ಷಮಿಸು ಎಂದು ಕೇಳಿ ಹೊರಟು ಹೋಗುತ್ತಾಳೆ. ನಂತರ ರತ್ನಾಜಿಯ ಮನಸ್ಸಿನಲ್ಲಿ ಆಲೋಚನೆಗಳು ಬರುತ್ತವೆ. ತನ್ನ ತಪ್ಪಿನ ಅರಿವು ಅವಳಿಗೆ ಆಗುತ್ತದೆ. ಅವಳ ಮನಸ್ಸಿನಲ್ಲಿ ಕುಮಾರರಾಮನ ಮೇಲಿದ್ದ ಸೇಡು ಮಾಯವಾಗುತ್ತದೆ. ಚದುರಂಗರು ಅವಳ ಮನಸ್ಸು ಬದಲಾಗುವುದನ್ನು ನಾಟಕೀಯವಾಗಿ ಚಿತ್ರಿಸಿದ್ದಾರೆ. ಅವಳ ಆತ್ಮ ಬಂದು ಚರ್ಚೆ ಮಾಡುವ ರೀತಿಯಲ್ಲಿ ಚಿತ್ರಿಸಿದ್ದಾರೆ. ರತ್ನಾಜಿಯು ತಾನಾಗಿಯೇ ಕುಮಾರರಾಮನನ್ನು ಇಷ್ಟಪಟ್ಟಿದ್ದು, ಇದರಲ್ಲಿ ಕುಮಾರರಾಮನದು ಏನೂ ತಪ್ಪಿಲ್ಲ ಇಲ್ಲಿ ಅವಳ ಯೋಚನೆಗಳು ಒಂದರ ಮೇಲೊಂದು ಬರುವ ದೃಶ್ಯವೂ ಸಿನಿಮೀಯ ದೃಶ್ಯಕ್ಕೆ ಹೊಂದಾಣಿಕೆಯಾಗುತ್ತದೆ.

ಕಡೆಗೆ ಶತ್ರು ಸೈನ್ಯವು ಕುಮ್ಮಟದುರ್ಗದ ಮೇಲೆ ದಾಳಿ ಮಾಡಿದಾಗ ಪ್ರಧಾನಿ ಬೈಚಪ್ಪನು ತನ್ನ ಚಾಣಾಕ್ಷತನದಿಂದ ಕುಮಾರರಾಮನನ್ನು ಹೊರತರುತ್ತಾನೆ. ಇದರಲ್ಲಿ ಪ್ರಾಯಶ್ಚಿತ್ತದಿಂದ ರತ್ನಾಜಿಯು ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾಳೆ, ಇಲ್ಲಿ ಕಂಪಿಲರಾಯನಿಗೆ ದುಃಖವಾಗುತ್ತದೆ. ನಿರಾಪರಾಧಿಗೆ ಶಿಕ್ಷೆ ಆಯಿತು. ಈಗ ರಾಜ್ಯ ರಕ್ಷಣೆಗೆ ಯಾರು ಇಲ್ಲ ಎನ್ನುವಾಗ ಸಿನಿಮೀಯ ರೀತಿಯಲ್ಲಿ ಕುಮಾರರಾಮನನ್ನು ರಾಜನ ಮುಂದೆ ತಂದು ನಿಲ್ಲುವಂತೆ ಮಾಡುತ್ತಾನೆ. ಇಲ್ಲಿಯೂ ಸಹ ರತ್ನಾಜಿ

ಕ್ಷಮಾಪಣೆ ಕೋರುವುದು. ತನ್ನ ಅಂಧವ್ಯಾಮೋಹಕ್ಕಾಗಿ ಕಂಪಿಲರಾಯನು ದುಃಖಿಸುವುದನ್ನು ನಾಟಕೀಯವಾಗಿಯು, ಸಿನಿಮೀಯವಾಗಿಯೂ ಚಿತ್ರಿಸಿದ್ದಾರೆ.

ಚದುರಂಗರು ರತ್ನಾಜಿಯ ಸೇವಕಿಯಾದ ಸಂಗಾಯಿಯನ್ನು ಉತ್ತಮವಾದ ರೀತಿಯಲ್ಲಿ ಬಳಸಿಕೊಂಡಿದ್ದಾರೆ. ಅವಳು ತನ್ನ ರಾಣಿ ಹುಚ್ಚಿಯಂತೆ ನಡೆದುಕೊಳ್ಳುವುದನ್ನು ನೋಡಿ ತಾನೇ ಸೈನಿಕರ ಬಿಡಾರದ ಬಳಿಗೆ ಪ್ರವೇಶಿಸಿ ಕುಮಾರರಾಮನ ರುಂಡವನ್ನು ತರುವುದು ಅತ್ಯಂತ ರೋಚಕ ರೀತಿಯಲ್ಲಿ ಸಿನಿಮಾ ನಿರ್ದೇಶಕರಂತೆ ಚಿತ್ರಿಸಿದ್ದಾರೆ. ಒಟ್ಟಾರೆಯಾಗಿ ಚದುರಂಗ ಚಲನಚಿತ್ರದ ಬಗ್ಗೆ ಆಸಕ್ತಿ ಇದ್ದುದರಿಂದ ಏನೋ ಅವರ ಕುಮಾರರಾಮ ನಾಟಕವೂ ಸಿನಿಮಾ ರೀತಿಯಲ್ಲಿ ಮೂಡಿಬರಲು ಸಾಧ್ಯವಾಗಿದೆ.

# ಅಡಿ ಟಿಪ್ಪಣಿಗಳು

| | | |
|---|---|---|
| 1. ಕುಮಾರರಾಮ | ಚದುರಂಗ | ಪುಟ: 23 |
| 2. ಕುಮಾರರಾಮ | -- | ಪುಟ: 52 |
| 3. ಕುಮಾರರಾಮ | -- | ಪುಟ: 54 |
| 4. ಕುಮಾರರಾಮ | -- | ಪುಟ: 58 |

# ಅಧ್ಯಾಯ – 4

# ಸಮಗ್ರ ನಾಟಕಗಳಲ್ಲಿ ಬರುವ ಮಿಥ್ಯೆ

## ಸಮಗ್ರ ನಾಟಕಗಳಲ್ಲಿ ಬರುವ ಮಿಥ್ಯೆ:

'ಸತ್ಯದ ಝೋಕು' ಎಂಬ ಒಂದು ನಾಟಕವನ್ನು ಚದುರಂಗರು ಬರೆದಿದ್ದಾರೆ. ಇದೊಂದು ಪ್ರಹಸನ ಎನಿಸಿಕೊಳ್ಳುತ್ತದೆ. ಚದುರಂಗರು ಟಿ.ಪಿ. ಕೈಲಾಸಂರವರ ಪ್ರಭಾವಕ್ಕೆ ಒಳಗಾಗಿ ಈ ನಾಟಕವನ್ನು ಬರೆದಿದ್ದಾರೆ. ಚದುರಂಗರು ತಾವೇ ಇದನ್ನು ಪ್ರಹಸನ ಎಂದು ಹೇಳಿಕೊಂಡಿದ್ದಾರೆ. ಇದರಲ್ಲಿ ಅಗತ್ಯವಿರುವಷ್ಟು ಹಾಸ್ಯ ಇಲ್ಲದೇ ಗಂಭೀರತೆಯೂ ಹೆಚ್ಚಾಗಿದೆ ಎನಿಸುತ್ತದೆ.

ಚದುರಂಗರ ನಾಟಕವಾದ 'ಸತ್ಯದ ಝೋಕು'ವಿನಲ್ಲಿ ಒಂದು ಪ್ರಧಾನ ವಸ್ತುವನ್ನು ಚರ್ಚಿಸಲಾಗಿದೆ. ಅದುವೇ ಜೀವನದಲ್ಲಿ ಎದುರಾಗುವ ಸತ್ಯ ಮತ್ತು ಮಿಥ್ಯೆಗಳ ನಡುವೆ ನಡೆಯುವ ತಾಕಲಾಟಗಳು. ನಂತರ ಆಧುನಿಕ ಜೀವನದಲ್ಲಿ ಸತ್ಯಕ್ಕಿಂತ ಸುಳ್ಳು ಪ್ರಧಾನವಾದದ್ದು ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ.

ಈ ನಾಟಕವು ಇಬ್ಬರು ಗೆಳೆಯರ ಮಧ್ಯೆ ನಡೆಯುವ ಒಂದು ಪ್ರಸಂಗವಾಗಿದೆ. ಈ ನಾಟಕದಲ್ಲಿ ಸತ್ಯಕ್ಕಿಂತ ಸುಳ್ಳು ಮುಖ್ಯ ಎಂಬುದನ್ನು ಈ ಪ್ರಸಂಗದ ಮೂಲಕವೇ ಚರ್ಚೆಯಾಗುವುದು. ಒಬ್ಬ ಜೀವನದಲ್ಲಿ ಸತ್ಯದ ಮಹತ್ವವನ್ನು ಕುರಿತು ಪ್ರತಿಪಾದಿಸಿದರೆ, ಇನ್ನೊಬ್ಬ ಜೀವನದಲ್ಲಿ ಸುಳ್ಳಿನ ಪ್ರಾಧಾನ್ಯತೆಯನ್ನು ಕುರಿತು ಪ್ರತಿಪಾದಿಸಿದ್ದಾನೆ. ಸತ್ಯದ ಪರವಾಗಿ ಡಾ|| ಶಂಕರ್ ಎಂಬ ಪಾತ್ರ ನಿಲ್ಲುತ್ತದೆ. ಸುಳ್ಳಿನ ಪರವಾಗಿ ಅವನ ಸ್ನೇಹಿತನಾದ ಮೂರ್ತಿ ಎಂಬುವನು ನಿಲ್ಲುತ್ತಾನೆ. ಈ ನಾಟಕದ ಪ್ರಾರಂಭದಲ್ಲಿ ಡಾ|| ಶಂಕರ್ ಮನೆಗೆ ಮೂರ್ತಿ ಬರುತ್ತಾನೆ. ಆ ಮನೆಯು ಹೊರಗಡೆಯಿಂದ ನೋಡುವುದಕ್ಕೆ ಸುಂದರವಾಗಿರುತ್ತದೆ. ಈ ವಿಷಯವನ್ನು ತನ್ನ ಸ್ನೇಹಿತ ಶಂಕರ್‌ಗೆ ಹೇಳುತ್ತಾನೆ. ಆಗ ಶಂಕರ್ ಹೊರಗೆ ನೋಡಿದರೆ ಥಳುಕು, ಒಳಗಡೆ ಹುಳುಕು ಎಂಬಂತೆ ಇದೆ ಈ ಮನೆ ಎನ್ನುತ್ತಾನೆ. ಆಗ ಮೂರ್ತಿ ಈ ಆಧುನಿಕ ಜೀವನದಲ್ಲಿ ಎಲ್ಲರೂ ಇದೇ ರೀತಿಯಾಗಿ ಬದುಕುವುದು. ಸುಳ್ಳನ್ನು ಹೇಳಿಯೇ ಜನ ಬದುಕುತ್ತಿದ್ದಾರೆ ಎಂದು ಹೇಳುತ್ತಾನೆ. ಈ ಮಾತನ್ನು ಕೇಳಿದ ಶಂಕರ್‌ಗೆ ಕೋಪ ಬರುತ್ತದೆ. ಈ ರೀತಿಯಾಗಿ ಸುಳ್ಳು ಹೇಳಿ ಬದುಕುವುದು ಸರಿಯಲ್ಲ. ನಮ್ಮ ಹಿಂದಿನ ಹಿರಿಯರು ಪ್ರಾಮಾಣಿಕವಾಗಿ, ಮೇಲುನೋಟಕ್ಕೆ ಹೇಗಿರುತ್ತಾರೋ ಹಾಗೆ ತನ್ನ ನೈಜ

ಜೀವನದಲ್ಲೂ ಹಾಗೆ! ಇರುತ್ತಿದ್ದರು. ಆದ್ದರಿಂದ ನಾವು ಸಹ ಅದರಂತೆ ಬದುಕಬೇಕೆಂದು ಮೂರ್ತಿಗೆ ಹೇಳುತ್ತಾನೆ. ಆಗ ಮೂರ್ತಿಯು ನಾವು ಹಿಂದಿನವರಂತೆ ಇರಲು ಸಾಧ್ಯವೇ ಇಲ್ಲ. ಆಗಿನ ಕಾಲಕ್ಕಿಂತ ಇಂದಿನ ಜೀವನ ತುಂಬಾ ಜಟಿಲವಾಗಿದೆ. ಆದ್ದರಿಂದ ಇಂದಿನ ಜನ ಅವರಂತೆ ಇರಲು ಸಾಧ್ಯವಾಗುವುದಿಲ್ಲ. ಇಂದಿನ ಆಧುನಿಕ ಜೀವನದಲ್ಲಿ ಸತ್ಯ, ಪ್ರಾಮಾಣಿಕತೆಗಿಂತ ಮಿಥ್ಯೆಯೇ ಪ್ರಧಾನವಾಗಿರುತ್ತದೆ. ಇಂದಿನ ಜನರು ಸುಳ್ಳನ್ನು ಹೇಳಿಯೇ ಜೀವನ ಸಾಗಿಸುವುದು ಎಂದು ತನ್ನ ವಾದವನ್ನು ಡಾ॥ ಶಂಕರ್‌ಗೆ ಹೇಳುತ್ತಾನೆ. ಆದರೆ ಎಷ್ಟೇ ಹೇಳಿದರೂ ತನ್ನ ಜೀವನದಲ್ಲಿ ಸತ್ಯವೇ ಮುಖ್ಯ, ಪ್ರಾಮಾಣಿಕತೆಯೇ ಮುಖ್ಯ ಎನ್ನುವುದನ್ನು ಶಂಕರ್ ಮೂರ್ತಿಗೆ ತಿಳಿಸುತ್ತಾನೆ. ಹೀಗೆ ಪ್ರಾರಂಭದಲ್ಲಿ ನಾಟಕವು ಸುಳ್ಳಿನ ಪ್ರಧಾನ್ಯದ ಚರ್ಚೆ ಪ್ರಾರಂಭವಾಗುತ್ತದೆ.

ಇದಕ್ಕೆ ಇವರಿಬ್ಬರ ನಡುವೆ ಸಂಭಾಷಣೆ ಹೀಗಿದೆ.

1. "ಶಂಕರ್: ಸುಳ್ಳು ಹೇಳಲೇಬೇಕು! ಅನೃತದ ದಾಸರಾಗಲೇಬೇಕು" ಎಂಥ philosophy develop ಮಾಡಿಕೊಂಡಿದೀಯ ಮೂರ್ತಿ?

   ಮೂರ್ತಿ: ಅದು ನನ್ನ philosophy ಅಲ್ಲ ಶಂಕರ, that is life with a capital life.

   ಡಾ॥ ಶಂಕರ್: ಛೇ ಛೇ ಅದೆಂಥ life ಬಿಡಯ್ಯ, ಸುಳ್ಳು ಹೇಳಿಕೊಂಡು ಜೀವಿಸುವುದಕ್ಕಿಂತ ಸಾಯುವುದೇ ಮೇಲು.

   ಮೂರ್ತಿ: ಹಾಗಂತ ಎಲ್ಲರೂ ಹೇಳ್ತಾರೆ ಆದರೆ ಯಾರೂ ಅದರಂತೆ ಪ್ರಾಣ ನೀಗಿ ಕೊಳ್ಳೊಲ್ಲ."

ಹೀಗೆ ಡಾ॥ ಶಂಕರ್ ಮತ್ತು ಸ್ನೇಹಿತ ಮೂರ್ತಿಯ ನಡುವೆ ಮಾತಾಗುತ್ತದೆ. ಇದರಲ್ಲಿ ತಿಳಿಯುವುದು ಮೂರ್ತಿಯು ಸುಳ್ಳನ್ನು ಪ್ರತಿಪಾದಿಸಿದರೆ, ಡಾ॥ ಶಂಕರ್ ತನ್ನ ಜೀವನದಲ್ಲಿ ಸತ್ಯವೇ ಪ್ರಧಾನ ಎನ್ನುವುದು.

ನಾಟಕದಲ್ಲಿ ಡಾ॥ ಶಂಕರ್‌ಗೆ ಜೀವನದಲ್ಲಿ ಸತ್ಯವನ್ನು ಹೇಳುವುದೇ ಅಲ್ಲ, ಸುಳ್ಳು ಹೇಳಬೇಕಾಗುತ್ತದೆ ಎನ್ನುವುದನ್ನು ಕೆಲವೊಂದು ಪ್ರಸಂಗಗಳ ಮೂಲಕ ತಿಳಿಸಲಾಗುತ್ತದೆ. ಕೆಲವೊಂದು

ಪ್ರಸಂಗ ಎದುರಾದಾಗ ಡಾ|| ಶಂಕರ್‌ರವರೇ 'ಸುಳ್ಳು ಹೇಳಲೇಬೇಕು ಅದುವೇ ಜೀವನ' ಎಂದುಕೊಳ್ಳುತ್ತಾರೆ.

ಒಂದು ದಿನ ಡಾ|| ಶಂಕರ್ ಮನೆಗೆ ನಾಯ್ಡು ಎಂಬ ರೋಗಿಯು ಬರುತ್ತಾನೆ. ನಾಯ್ಡು ಅವರ ಮನೆಯಲ್ಲಿ ಬಹಳ ಹಿಂದೆ ಬಾಡಿಗೆಮನೆಯಲ್ಲಿ ಶಂಕರ್ ಇದ್ದನು .ಆದ ಕಾರಣ ಸ್ನೇಹದಿಂದ ನಾಯ್ಡು ಡಾ|| ಶಂಕರ್ ಮನೆಗೆ ಬರುತ್ತಾರೆ. ಡಾ|| ಶಂಕರ್ ಅವನನ್ನು ನೋಡಿ ಆಶ್ಚರ್ಯ ಪಡುತ್ತಾನೆ. ನಾಯ್ಡು ರೋಗದಿಂದ ಸಣ್ಣಗಾಗಿರುತ್ತಾನೆ. ಅವನನ್ನು ಡಾ|| ಶಂಕರ್ ಪರೀಕ್ಷಿಸುತ್ತಾನೆ. ಆದರೆ ರೋಗ ಏನೆಂದು ತಿಳಿದು ನಾಯ್ಡುವಿಗೆ ನಿಜ ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ನಾಯ್ಡುವಿಗೆ ಹೆಂಡತಿಯಿಲ್ಲ, 5 ಜನ ಚಿಕ್ಕಮಕ್ಕಳಿದ್ದಾರೆ. ಇವನು ಸತ್ತರೆ ಆ ಕುಟುಂಬವೇ ಬೀದಿ ಪಾಲಾಗುತ್ತದೆ. ಇದನ್ನು ತಿಳಿಸು ಸತ್ಯವನ್ನು ಹೇಳಲು ಡಾ|| ಶಂಕರ್‌ಗೆ ಮನಸ್ಸು ಒಪ್ಪುವುಲ್ಲ. ಆಗ ನಾಯ್ಡುವಿಗೆ ಯಾವುದೇ ರೋಗವಿಲ್ಲ ಚೆನ್ನಾಗಿರುತ್ತೀರಾ ಎಂದು ಸುಳ್ಳು ಹೇಳಿ ನಾಯ್ಡುವನ್ನು ಕಳುಹಿಸುತ್ತಾನೆ. ಸತ್ಯವೆಂದರೆ ನಾಯ್ಡುವಿಗೆ ಕ್ಷಯರೋಗದ ಲಕ್ಷಣಗಳಿವೆ. ಅವನು ಬೇಗ ಸಾಯುತ್ತಾನೆ ಅಂತ ನಾನು ಹೇಳಿದ್ದರೆ ನಾಯ್ಡು ಎದೆಬಡಿದು ಸತ್ತುಹೋಗುತ್ತಿದ್ದನು. ಅದಕ್ಕಾಗಿ ಸತ್ಯವನ್ನು ಹೇಳಲು ಸಾಧ್ಯವಾಗಲಿಲ್ಲ ಎಂದು ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾನೆ.

2. "ಡಾ|| ಶಂಕರ್: (ಭಾರವಾಗಿ ನಿಟ್ಟುಸಿರು ಬಿಟ್ಟು) well ಮೂರ್ತಿ. ನೀನೇ ಗೆದ್ದೆ. ನಿನ್ನ ಮಾತೇ ನಿಜವಾಯಿತು... ನಾನೀಗ ಒಂದು ಪಕ್ಷ ಸುಳ್ಳು ಹೇಳದೇ ಸತ್ಯ ನುಡಿದರೆ ಅದರ ಪರಿಣಾಮ ಎಷ್ಟು ಭಯಂಕರವಾಗುತ್ತಿತ್ತು? ಬಡತನದ ಬೇಗೆಯಲ್ಲಿ ಬೆಂದಿರುವ ನಾಯ್ಡುವಿಗೆ ತನ್ನ ಐದು ಮಕ್ಕಳ ಭವಿಷ್ಯ ಹೇಗೆ ರೂಪಿತವಾಗುದೋ ಎಂಬ ಭೀತಿಯಿಂದ ಕಳವಳಗೊಂಡಿರುವ ನಾಯ್ಡುವಿಗೆ ನಾನು ನೇರವಾಗಿ "ನಿನಗೆ ಕ್ಷಯರೋಗದ ಲಕ್ಷಣಗಳು ಕಾಣುತ್ತಿವೆ. ನಿನ್ನ ಸ್ಥಿತಿಯಲ್ಲಿ ನೀನು ಹೆಚ್ಚುಕಾಲ ಬದುಕುವಂತೆ ನನಗನಿಸದು" ಎಂದು ನಿಜ ಹೇಳಿದ್ದರೆ ಆತ ಆ ಕ್ಷಣವೇ ದಿಗಿಲಿನಿಂದ ಮೃತಿ ಹೊಂದುತ್ತಿದ್ದನೋ. ಏನೋ ಓಹ್ ನಮ್ಮ ಜೀವನವೇ".

ಹೀಗೆ ತನ್ನ ಮನಸ್ಸಿಲ್ಲಿ ಪರಿಸ್ಥಿತಿಗೆ ತಕ್ಕಂತೆ ಸುಳ್ಳು ಹೇಳಲೇಬೇಕು ಸತ್ಯವನ್ನು ಹೇಳುವುದು ತಪ್ಪಾಗುತ್ತದೆ ಎಂದು ತಿಳಿಯುತ್ತಾನೆ.

ಡಾ|| ಶಂಕರ್‌ಗೆ ಇನ್ನು ಕೆಲವು ಅನುಭವಗಳಾಗುತ್ತವೆ. ತನ್ನ ಪತ್ನಿಯು ಇವನನ್ನು ಕರೆಯುತ್ತಾಳೆ. ಆದರೆ ಅದು ಇವನಿಗೆ ಗಂಡಸಿನ ಧ್ವನಿಯಂತೆ ಕೇಳಿಸುತ್ತದೆ. ಆದರೆ ಅದನ್ನು ಅವಳಿಗೆ ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಅವನ ಪತ್ನಿ ಇನ್ನೂ ಚಿಕ್ಕ ವಯಸ್ಸಿನವಳು; ನಿನ್ನ ಕಂಠ ಗಂಡಸು ಧ್ವನಿ ಎಂದು ಹೇಳಿದರೆ ಎಲ್ಲಿ ಬೇಸರ ಮಾಡಿಕೊಳ್ಳುವಳೋ ಎಂದು ಸುಳ್ಳು ಹೇಳುತ್ತಾನೆ.- ನಿನ್ನ ಕಂಠ ಕೋಗಿಲೆಯ ಕಂಠ ಎಂದು. ಇದು ಹೇಳಿದ ಮೇಲೆ ಮತ್ತೆ ಮೂರ್ತಿಯ ಮಾತುಗಳು ಅವನಿಗೆ ನೆನಪಿಗೆ ಬರುತ್ತವೆ. ಮುಂದೆ ಅವನ ಪತ್ನಿಯು ಸುಂದರವಾಗಿಲ್ಲದಿದ್ದರೂ ನೀನು ಸುಂದರಿ ಎಂದು ಸುಳ್ಳು ಹೇಳುತ್ತಾನೆ.

ಮುಂದೆ ಡಾ|| ಶಂಕರ್‌ನ ಹುಟ್ಟುದಿನದ ಪ್ರಯುಕ್ತ ಪತ್ನಿಯ ಅಡುಗೆ ಮಾಡಿರುತ್ತಾಳೆ. ಅದು ತಿನ್ನಲು ಯೋಗ್ಯವಲ್ಲ, ರುಚಿ ಕೆಟ್ಟಿರುತ್ತದೆ. ಆದರೆ ಅಡುಗೆ ಹೇಗಿದೆ ಎಂದು ಪತ್ನಿ ಕೇಳಿದಾಗ ಸತ್ಯವನ್ನು ಹೇಳಲು ಅವನು ನಿರಾಕರಿಸುತ್ತಾನೆ. ಏಕೆಂದರೆ ಇವನ ಹುಟ್ಟುದಿನದ ಪ್ರಯುಕ್ತ ಯಾರ ಸಹಾಯವೂ ಇಲ್ಲದೆ ಕಷ್ಟಪಟ್ಟು ಅಡುಗೆ ಮಾಡಿರುತ್ತಾಳೆ. ಇದು ಸರಿಯಿಲ್ಲ ಎಂದರೆ ಅವಳ ಮನಸ್ಸಿಗೆ ನೋವಾಗುತ್ತದೆ ಎಂದು ತಿಳಿದು ಅಡುಗೆ ಚೆನ್ನಾಗಿದೆ ಎಂದು ಸುಳ್ಳು ಹೇಳುತ್ತಾನೆ. ನಂತರ ಅದೇ ಸಮಯದಲ್ಲಿ ಅವನ ಸ್ನೇಹಿತ ನಾಟಕಪಾತ್ರಧಾರಿ ರವಿ ಬರುತ್ತಾನೆ. ಅವನು ತನ್ನ ಅಭಿನಯದ ಬಗ್ಗೆ ಅನಿಸಿಕೆ ಕೇಳುತ್ತಾನೆ. ಆಗಲೂ ಸಹ ಶಂಕರ್ ಸುಳ್ಳು ಹೇಳುತ್ತಾನೆ. ಅವನ ಪಾತ್ರ ಕೆಟ್ಟದಾಗಿದ್ದರೂ ತನ್ನ ಸ್ನೇಹಿತನಿಗೆ ಬೇಸರ ಉಂಟುಮಾಡಬಾರದೆಂದು ಚೆನ್ನಾಗಿತ್ತು ಎಂದು ಹೇಳುತ್ತಾನೆ. ಇದರಿಂದ ರವಿಯು ಸಂತೋಷದಿಂದ ಹೊರಟುಹೋಗುತ್ತಾನೆ. ನಂತರ ಡಾ|| ಶಂಕರ್ ಮತ್ತು ಅವನ ಪತ್ನಿಯು ಒಂದು ಸಮಾರಂಭಕ್ಕೆ ಹೋಗುತ್ತಾರೆ. ಅಲ್ಲಿ ಅವನ ಸ್ನೇಹಿತ ರಂಗಸ್ವಾಮಿಯು ತನ್ನ ಮಗುವನ್ನು ಪ್ರೀತಿಯಿಂದ ತೋರಿಸುತ್ತಾನೆ. ಹೇಗಿದೆ ಎಂದು ಕೇಳಿದಾಗ ಅವನು ಮತ್ತೆ ಸುಳ್ಳು ಹೇಳಬೇಕಾಗುತ್ತದೆ. ಏಕೆಂದರೆ ರಂಗಸ್ವಾಮಿಯು ಆತ್ಮೀಯ ಸ್ನೇಹಿತ ಅವನ ಮಗು ಚೆನ್ನಾಗಿಲ್ಲ ಎಂದರೆ ಅವನು ತನ್ನ ಬಗ್ಗೆ ಏನು ಅಂದುಕೊಳ್ಳುತ್ತಾನೋ ಎಂದು ತುಂಬಾ ಚೆನ್ನಾಗಿದೆ ಎಂದು ಸುಳ್ಳು ಹೇಳುತ್ತಾನೆ.

3. "<u>ಡಾ|| ಶಂಕರ್ ಮಡದಿ</u>: ಗಂಡೋ? ಹೆಣ್ಣೋ?

<u>ರಂಗಸ್ವಾಮಿ ಪತ್ನಿ</u>: ಗಂಡು ಕಣ್ರೀ

ಡಾ|| ಶಂಕರ್: ಓ ನಮ್ಮ ಜಾತಿ

ರಂಗಸ್ವಾಮಿ: ಹೇಗಿದೆಯಯ್ಯಾ ಶಂಕರ – ಮಗು?

ಡಾ|| ಶಂಕರ್: Beatiful child. ನೀವು ಬಹಳ ಪುಣ್ಯವಂಥರು (ಆತ್ಮಗತ) ಅಯ್ಯೋ, ಎಂಥ ಸುಳ್ಳು ಹೇಳಿದೆ. ಪುನಃ ಈ ಮಗುವಿನ ಮೋರೆ ನೋಡುವುದಕ್ಕಾಗದು . ಅಷ್ಟು ಅವಲಕ್ಷಣವಾಗಿದೆ".

ಡಾ|| ಶಂಕರ್‌ನು ಇನ್ನೊಂದು ಪ್ರಸಂಗದಲ್ಲಿಯೂ ಸುಳ್ಳು ಹೇಳಬೇಕಾಗುತ್ತದೆ. ಅವನ ಸ್ನೇಹಿತ ರಂಗಸ್ವಾಮಿ ಅವನ ಪತ್ನಿ ಎಲ್ಲರೂ ಸೇರಿ ಸಿನಿಮಾಗೆ ಹೋಗುತ್ತಾರೆ. ಅವನ ಸ್ನೇಹಿತ ಅವನ ಪತ್ನಿಯು ಸಿನಿಮಾ ತುಂಬಾ ಚೆನ್ನಾಗಿದೆ ಎಂದು ಹೇಳುತ್ತಾರೆ. ಆದರೆ ಅದು ಅವನಿಗೆ ಸ್ವಲ್ಪವೂ ಹಿಡಿಸದಿದ್ದರೂ ಚೆನ್ನಾಗಿತ್ತು ಎಂದು ಸುಳ್ಳು ಹೇಳುತ್ತಾನೆ.

4. "ಡಾ|| ಶಂಕರ್ ಸಿನಿಮಾ ಮಂದಿರದಲ್ಲಿ ಸುಳ್ಳುಗಳ ಕಂತೆಯೇ ನಮ್ಮ ಮುಂದೆ ಪ್ರದರ್ಶಿಸಲ್ಪಟ್ಟಿತು. ಚಿತ್ರಕಥೆ ಪೂರ್ಣವಾಗಿ ಕೃತಕ ವಾತಾವರಣದಲ್ಲಿ ಹೆಣೆಯಲ್ಪಟ್ಟಿತ್ತು. ಅಲ್ಲಿನ ಪ್ರಣಯ, ಅಲ್ಲಿನ ದುಃಖ, ಅಲ್ಲಿನ ಅಮೋದ ಎಲ್ಲ ವಾಸ್ತವ ಜಗತ್ತಿಗೆ ಅತ್ಯಂತ ದೂರವಾಗಿದ್ದವು. ಅದನ್ನೇ ರಂಗು fine- film ಎಂದು ಮೆಚ್ಚಿ ಆಡಿದ. ಅವನ ಹೆಂಡತಿಯೂ ಅದೇ ಮಾತನ್ನು ಪ್ರತಿಧ್ವನಿಸಿದಳು. ಅದು ಸತ್ಯಕ್ಕೆ ದೂರವಾದ ಅವರನ್ನು ನೋಯಿಸಬಾರದೆಂಬ ಸಂಕಲ್ಪದಿಂದ ನಾನು ನನ್ನ ನಾಲಿಗೆಯನ್ನು ಹತೋಟಿಯಲ್ಲಿಟ್ಟುಕೊಂಡು "yes it is fine film" ಎಂದು ಒಪ್ಪಿಕೊಂಡೆ".

ಇದೆಲ್ಲವನ್ನು ಯೋಚಿಸಿದ ಡಾ|| ಶಂಕರ್ ಈ ಜೀವನದಲ್ಲಿ ಸತ್ಯಕ್ಕು ಜೀವನಕ್ಕೂ ಸಂಬಂಧವೇ ಇಲ್ಲ ಎಂದು ಅಭಿಪ್ರಾಯ ಪಡುತ್ತಾನೆ. ಒಟ್ಟಾರೆಯಾಗಿ ಮೂರ್ತಿಯ ಮಾತು ಸತ್ಯವಾಗುತ್ತದೆ.

5. "ಇಂದಿನ ದುರ್ಭರ ಜೀವನದಲ್ಲಿ ಸತ್ಯ ಹೇಳಿದರೆ ಬದುಕುವುದೇ ಪ್ರಯಾಸ, ಈವತ್ತಿನ ದಿನ ಬಾಳಿನಲ್ಲಿ ಮುಂದುವರಿಯಬೇಕಾದರೆ ನಾವು ಅನೃತದ ದಾಸರಾಗಲೇಬೇಕು. ಸುಳ್ಳು ಹೇಳಲೇಬೇಕು"

ಎಂದು ಹೇಳುವ ಮೂರ್ತಿಯ ಮಾತು ಸತ್ಯ ಎನಿಸಿಕೊಳ್ಳುತ್ತದೆ. ಇಂದಿನ ಆಧುನಿಕ ಜೀವನ ಸಂಕೀರ್ಣವಾದದ್ದು, ಸಂಬಂಧಗಳೂ ಸಹ. ಆದ್ದರಿಂದ ಇಂದಿನ ಜೀವನದಲ್ಲಿ ಸತ್ಯವನ್ನು ಹೇಳುವುದಕ್ಕಿಂತ ಸುಳ್ಳು ಪ್ರಧಾನವಾಗಿ ಹೇಳಲೇಬೇಕಾಗುತ್ತದೆ ಎಂದು ಚದುರಂಗರು 'ಸತ್ಯದ ಝೋಕು' ನಾಟಕದಲ್ಲಿ ಡಾ|| ಶಂಕರ್‌ಗೆ ಆಗುವ ಕೆಲವು ಅನುಭವಗಳಿಂದ ತಿಳಿಸಿಹೇಳುತ್ತಾರೆ.

# ಅಡಿ ಟಿಪ್ಪಣಿಗಳು

# ಅಧ್ಯಾಯ – 5

## ‘ಬಿಂಬ’ ನಾಟಕದಲ್ಲಿ ಬರುವ ಪ್ರೀತಿ ದೇಹದ ಆಕರ್ಷಣೆಯಲ್ಲ; ಅದು ಹೃದಯಗಳ ಬೆಸುಗೆ; ಈ ಬಗೆಗೆ ವಿಶ್ಲೇಷಣೆ

## 'ಬಿಂಬ' ನಾಟಕದಲ್ಲಿ ಬರುವ ಪ್ರೀತಿ ದೇಹದ ಆಕರ್ಷಣೆಯಲ್ಲ;ಅದು ಹೃದಯಗಳ ಬೆಸುಗೆ; ಈ ಬಗೆಗೆ ವಿಶ್ಲೇಷಣೆ:

ಚದುರಂಗರ ನಾಟಕವಾದ 'ಬಿಂಬ'ವು ಅವರೆಲ್ಲಾ ನಾಟಕಗಳಿಗಿಂತ ಭಿನ್ನವಾಗಿದೆ. ನಾಟಕಕಾರರು 'ಬಿಂಬದಲ್ಲಿ' ಪ್ರೀತಿ ಎಂಬ ಎಳೆಯನ್ನು ಬಿಡಿಸಿಟ್ಟಿದ್ದಾರೆ. ಅದಕ್ಕಾಗಿಯೇ ರಾಮ ಸೀತೆಯರ ಕಥೆಯನ್ನು ಆಯ್ದುಕೊಂಡಿದ್ದಾರೆ. ನಾಟಕಕಾರರು ಪ್ರೀತಿ ಎಂಬುದು ಕೇವಲ ಎರಡು ದೇಹಗಳ ನಡುವೆ ಇರುವಂತಹ ಆಕರ್ಷಣೆಯಲ್ಲ, ನಿಜವಾದ ಪ್ರೀತಿ ಎರಡು ಹೃದಯಗಳಿಗೆ ಸಂಬಂಧಿಸಿದ್ದು, ಅದು ಹೃದಯಗಳ ಬೆಸುಗೆಯಾಗುತ್ತದೆ ಎಂಬ ಸತ್ಯವನ್ನು ಲೇಖಕರು ಬಿಂಬದಲ್ಲಿ ರಾಮ–ಸೀತೆಯ ಪ್ರೇಮ ಪ್ರಸಂಗದಲ್ಲಿ ಮೂಡಿಸಿದ್ದಾರೆ.

'ಬಿಂಬ' ನಾಟಕವು ಉತ್ತರರಾಮನ ಕಥೆಯನ್ನಾಗಲಿ, ತಂದೆ ಮಕ್ಕಳ ಯುದ್ಧದ ಕಥೆಯನ್ನಾಗಲಿ, ನಿರೂಪಿಸುವ ಅಥವಾ ನಾಟಕೀಕರಣಗೊಳಿಸುವ ಕೃತಿಯಾಗಿಲ್ಲ. ಇದರ ಉದ್ದೇಶವು ಸಹ ಅದಲ್ಲ. ಹಾಗಾದರೆ 'ಬಿಂಬ' ನಾಟಕವು ಏನನ್ನು ಪ್ರತಿನಿಧಿಸುತ್ತದೆ, ಅದರ ಕೇಂದ್ರವಾದ ವಸ್ತು ಯಾವುದು? ಅದರ ಧ್ವನಿ ಯಾವುದು ಎಂದು ತಿಳಿಯಲು ನಾವು ನಾಟಕದ ವಸ್ತುವನ್ನು ಅದರ ಹಿನ್ನಲೆಯಲ್ಲಿ ನೋಡಬೇಕಾಗಿದೆ. ಮೊದಲಿಗೆ ನಾಟಕದ ಪ್ರಾರಂಭದಲ್ಲಿ ಬರುವ ಮೇಳದ ರಾಮಯ್ಯ ಮತ್ತು ಅವನ ಪತ್ನಿಯಾದ ಸೀತಮ್ಮನವರ ಸಂಸಾರದಲ್ಲಿ ಬರುವ ಒಡಕುಗಳು ನಾಟಕದ ಆಶಯವನ್ನು ಸೂಚಿಸುತ್ತದೆ. ರಾಮಯ್ಯ– ಸೀತಮ್ಮನ ನಡುವೆ ಅವರ ಮಾವಯ್ಯನಾದ ಲಂಕಪ್ಪ ಪ್ರವೇಶಿಸಿ ಗಂಡ–ಹೆಂಡತಿಯರ ನಡುವಿನ ಸಂಸಾರದಲ್ಲಿನ ಪ್ರೀತಿಯ ಸಂಬಂಧವನ್ನು ಕದಡುವ ಪ್ರಯತ್ನ ಮಾಡುತ್ತಾನೆ. ಇದು ಆಧುನಿಕ ಸಮಾಜದಲ್ಲಿ ಕಂಡುಬರುವ ಸಾಮಾನ್ಯ ಗಂಡ–ಹೆಂಡತಿಯರ ಕಥೆಯಾಗಿದೆ. ಅದರಂತೆ ರಾಮಾಯಣದಲ್ಲಿ ಅಂದರೆ ಬಿಂಬದಲ್ಲಿ ರಾಮ–ಸೀತೆಯರ ನಡುವೆ ರಾವಣನು ಪ್ರವೇಶಿಸಿ ಇವರಿಬ್ಬರ ಗಾಢವಾದ ಪ್ರೀತಿಯ ಸಂಬಂಧವನ್ನು ಕದಡುತ್ತಾನೆ. ಇದೇ 'ಬಿಂಬ'ದಲ್ಲಿ ಬರುವ ಅಂಶವಾಗಿದೆ. ಇದನ್ನು ಮುಂದುವರೆಸುತ್ತಾ ನಾಟಕದಲ್ಲಿ ಬರುವ ಭಾಗವತರು ಇದನ್ನು ಹೇಳಿಯೇ ನಾಟಕವನ್ನು ಪ್ರಾರಂಭಿಸುತ್ತಾರೆ. ರಾವಣನ ಬಿಂಬ ರಾಮಾಯಣದ ರಾಮ–ಸೀತೆಯರ ಸಂಬಂಧವನ್ನು ಕದಡುತ್ತದೆ ಎನ್ನುವುದರ ಮೇಲೆಯೇ ನಮ್ಮ ಈ ಬಿಂಬ ನಾಟಕವು

ಹಬ್ಬಿದೆ ಎಂದು ಭಾಗವತರು ಹೇಳುತ್ತಾರೆ. ಅವರ ಈ ಮಾತಿನ ಅರ್ಥದಿಂದಲೇ ಬಿಂಬದಲ್ಲಿ ಬರುವ ರಾಮ-ಸೀತೆಯರ ಕಥೆ ತಿಳಿಯುತ್ತದೆ, ಇವರಿಬ್ಬರ ನಡುವೆ ಇರುವುದು ನಿಜವಾದ ಪ್ರೀತಿ ಎಂಬುದನ್ನು ಈ ನಾಟಕವು ತಿಳಿಸುತ್ತದೆ. ರಾಮ-ಸೀತೆಯರು ಪ್ರೀತಿಸುವುದು ಕೇವಲ ದೇಹದ ಆಕರ್ಷಣೆಯಿಂದಲ್ಲ ಅವರು ಹೃದಯದಿಂದ ಒಬ್ಬರನ್ನೊಬ್ಬರು ಪ್ರೀತಿಸುತ್ತಾರೆ. ಅದುವೇ ಹೃದಯಗಳ ಬೆಸುಗೆಯ ಪ್ರೀತಿಯಾಗಿದೆ ಎಂಬುದನ್ನು ಚದುರಂಗರು ಈ ನಾಟಕದಲ್ಲಿ ನಿರೂಪಿಸಿದ್ದಾರೆ.

ನಾಟಕವು ಮುಂದುವರೆಯಲು ಭಾಗವತರು ಪ್ರಮುಖರಾಗಿದ್ದಾರೆ. ನಾಟಕದ ಪ್ರಾರಂಭದಲ್ಲಿ ಮೇಳದ ರಾಮಯ್ಯ-ಸೀತಮ್ಮ ಇವರು ಆಧುನಿಕ ಸಂಬಂಧದ ಸಂಕೇತವಾಗಿ ಕಂಡಿದ್ದಾರೆ ಇಲ್ಲಿ ಬರುವ ಸೀತಮ್ಮನು ತನ್ನ ತೌರುಮನೆಗೆ ಹೋದಾಗ ಗಂಡನಾದ ರಾಮಯ್ಯನು ಗೊಂಬೆಗಳನ್ನು ಮನೆಯಿಂದ ತಂದಿರುತ್ತಾನೆ. ಅದನ್ನು ತಿಳಿದ ಸೀತಮ್ಮನು ತನಗೆ ಗೊಂಬೆಗಳು ಬೇಕು ಎಂದು ಭಾಗವತರಲ್ಲಿ ಕೇಳುತ್ತಾಳೆ. ಗಂಡನಾದ ರಾಮಯ್ಯನು ಕುಡುಕ, ಕೊನೆಗೆ ಗೊಂಬೆಗಳನ್ನು ತಮ್ಮ ಮನೆಗೆ ಇಬ್ಬರೂ ಸಾಗಿಸುತ್ತಾರೆ. ಸೀತಮ್ಮನು ತನ್ನ ಗಂಡ ರಾಮಯ್ಯ ಕುಡುಕನಾಗಿದ್ದರಿಂದ ಗೊಂಬೆಗಳನ್ನು ಮಾರಿಬಿಡಬಹುದೆಂದು ತನ್ನ ಮಾವನಾದ ಲಂಕಪ್ಪನ ಮನೆಗೆ ಸಾಗಿಸುತ್ತಾಳೆ. ಈ ರೀತಿ ಮಾಡಿದಾಗ ರಾಮಯ್ಯನಿಗೆ ಸಂಶಯದ ಭೂತ ಮನಸ್ಸಿನಲ್ಲಿ ಮೂಡುತ್ತದೆ. ಸೀತಮ್ಮನು ಭಾಗವತರಲ್ಲಿ ತನ್ನ ಅಳಲನ್ನು ತೋಡಿಕೊಳ್ಳುತ್ತಾಳೆ. ನಾನು ಚಿಕ್ಕವಳಾಗಿದ್ದಾಗಿನಿಂದ ಮಾವನ ನೆರಳಲ್ಲಿ ಬೆಳೆದವಳು. ಅದನ್ನೇ ನನ್ನ ಗಂಡ ತಪ್ಪಾಗಿ ತಿಳಿದಿದ್ದಾನೆ ಎನ್ನುವಳು. ಆದರೆ ರಾಮಯ್ಯನು ಅವನದೇ ಆದ ಅಭಿಪ್ರಾಯ ಹೇಳುತ್ತಾನೆ. ಅವರಿಬ್ಬರೂ ನನ್ನ ಮದುವೆ ಆಗುವುದಕ್ಕಿಂತ ಮೊದಲೇ ಸಂಬಂಧವಿತ್ತು ಎಂಬುದನ್ನು ರಾಮಯ್ಯ ಹೇಳುತ್ತಾನೆ. ಇದನ್ನು ಕೇಳಿದ ಭಾಗವತರು ಏನು ಹೇಳಬೇಕು ಎಂಬುದೇ ತಿಳಿಯುವುದಿಲ್ಲ.

1. "ಸೀತಮ್ಮ: ಏನೋ ಎಲ್ಲವೂ ನಿಮಗೆ ಬಿಟ್ಟಿದ್ದು, ನಮ್ಮಿಬ್ಬರ ನಡುವೆ ಈ ಗಂಡಸು ಸದಾಕಾಲದಲ್ಲೂವೆ ನನ್ನ ಮಾವಯ್ಯನ ಛಾಯೇನೇ ಕಾಣ್ತಾ ಇರ್ತಾನೆ, ನನಗಂತೂ ಈ ಗಂಡಸಿನ ಜೊತೆಗೆ ಸಂಸಾರ ಸಾಗಿಸಕ್ಕೆ ಸಾಧ್ಯ ಆಗ್ತಾ ಇಲ್ಲ.

ಭಾಗವತ: ಹೀಗೆನೆ ರಾವಣನ ಬಿಂಬ ರಾಮಾಯಣದ ಸೀತೆ-ರಾಮರ ನಡುವೆ ಹಗರಣ ಮಾಡೋದನ್ನು ಕಾಣ್ತೇವೆ. ಈ ಹಂದರದ ಮೇಲೆ ನಮ್ಮ ಇಂದಿನ ನಾಟಕ ಹಬ್ಬಿದೆ."

ಹೀಗೆ ಭಾಗವತರು ನಮ್ಮ ನಾಟಕದಲ್ಲಿ ಬರುವುದನ್ನು, ಇಲ್ಲಿನ ಆಧುನಿಕ ಕುಟುಂಬದಲ್ಲಿನ ರಾಮಯ್ಯ-ಸೀತಮ್ಮನವರ ಸಂಬಂಧದ ಕುರಿತಾಗಿ ಹೇಳಿದ್ದಾರೆ. ಇನ್ನು ರಾಮಾಯಣದ ವಸ್ತುವಿಗೆ ಬಂದಾಗ ರಾಮ-ಸೀತೆಯರ ಸಂಬಂಧ ಹೇಗೆ ಕದಡುತ್ತದೆ, ಅದಕ್ಕೆ ರಾವಣ ಹೇಗೆ ಕಾರಣನಾಗುತ್ತಾನೆ. ಕೊನೆಗೆ ರಾಮ-ಸೀತೆಯರ ನಡುವೆ ಇರುವುದು ನಿಜವಾದ ಪ್ರೀತಿಯೇ? ಎಂಬುದನ್ನು ಈ ಬಿಂಬ ನಾಟಕದ ಹಿನ್ನೆಲೆಯಲ್ಲಿ ನೋಡಬಹುದಾಗಿದೆ.

ನಾಟಕದ ಪ್ರಾರಂಭದಲ್ಲಿ ರಾಮನು ಒಂದು ರಾತ್ರಿ ಕನಸನ್ನು ಕಂಡಿರುತ್ತಾನೆ. ಅದರಲ್ಲಿ ಒಮ್ಮೆ ರಾಮ-ಸೀತೆಯರು ಮಲಗಿರುವಾಗ, 'ಯಾವುದೋ ಕಾಣದ ಕೈಯೊಂದು ನಮ್ಮಿಬ್ಬರನ್ನು ಬೇರ್ಪಡಿಸಿತು. ನಂತರ ನಮ್ಮಿಬ್ಬರ ನಡುವೆ ಸಣ್ಣ ಕಾಲುವೆಯಂತೆ, ನಂತರ ನದಿಯಂತೆ, ಮುಂದೆ ವಿಸ್ತಾರವಾದ ಸಾಗರವಾಗಿ ಹರಡಿ ನಿಂತಿತು. ಈ ಭೀಕರ ಸಾಗರದಲ್ಲಿ ಭಯಂಕರ ಮೊಸಳೆ ಬಂದು ಯಾರಿಗೂ ಕಾಣದಂತೆ, ಸದ್ದು ಮಾಡದಂತೆ ಬಂದು ನಿನ್ನನ್ನು ಎಳೆದುಕೊಂಡು ಹೋಗುತ್ತಿತ್ತು. ಅಷ್ಟರಲ್ಲಿ ನನ್ನ ಕನಸು ಒಡೆಯಿತು. ಎಚ್ಚರವಾಗಿ ನೋಡಿ ಭಯಂಕರ ಅನುಭವವಾದ ಸ್ಥಿತಿ ಉಂಟಾಗಿತ್ತು.' ಇದನ್ನು ಕೇಳಿದ ಸೀತೆಗೆ ಈ ಕೆಟ್ಟ ಕನಸು ಇನ್ನಾವ ದುರಂತದ ಮುನ್ಸೂಚನೆಯಾಗಿದೆಯೋ ಎಂದು ತನ್ನ ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾಳೆ. ಏಕೆಂದರೆ ರಾವಣನು ಸೀತೆಯನ್ನು ಅಪಹರಣ ಮಾಡಿದಾಗ ಒಂದು ವರ್ಷ ಚಿತ್ರಹಿಂಸೆಯನ್ನು ಪಡಬೇಕಾಗಿತ್ತು. ಆದ್ದರಿಂದ ಈ ಕೆಟ್ಟ ಕನಸಿನಿಂದ ಮುಂದೆ ಇನ್ನಾವುದೋ ಕೆಡಕು ಉಂಟಾದರೆ ಏನು ಗತಿ? ರಾಮನನ್ನು ಬಿಟ್ಟಿರಲು ನನ್ನಿಂದ ಸಾಧ್ಯವಿಲ್ಲ. ಆದ್ದರಿಂದ ನನ್ನ ಪ್ರೀತಿಗೆ ಕೆಡಕು ಉಂಟಾಗಬಾರದು ಎಂದು ತನ್ನ ಮನಸ್ಸಿನಲ್ಲಿ ಸೀತೆ ಹೇಳಿಕೊಳ್ಳುತ್ತಾಳೆ.

ರಾಮನಿಗೆ ಬಿದ್ದಂತಹ ಕನಸಿನಿಂದ ಅವರಿಬ್ಬರೂ ಮತ್ತೆ ಬೇರೆಯಾಗುವ ಸೂಚನೆ ಕಂಡುಬರುತ್ತದೆ. ಹಾಗೆಯೇ ಆಧುನಿಕ ಕುಟುಂಬದ ರಾಮಯ್ಯ- ಸೀತಮ್ಮನವರು ಬೇರೆ ಬೇರೆ ಆಗುವ ಮುನ್ಸೂಚನೆ ಕಂಡುಬರುತ್ತದೆ. ಸೀತಮ್ಮ ತನ್ನ ಮಾವನ ಮನೆಗೆ ಹೋಗಿದ್ದಳು ಎಂದು ಅವಳನ್ನು ರಾಮಯ್ಯನು ರಕ್ತ ಬರುವಂತೆ ಹೊಡೆದಿರುತ್ತಾನೆ.

ರಾಮ-ಸೀತೆಯರು ದೂರವಾಗಲು ಕಾರಣ ಶೂರ್ಪನಖಿ. ಇವಳು ಕೊರವಂಜಿ ವೇಷದಲ್ಲಿ ಬಂದು ಸೀತೆಗೆ ಭವಿಷ್ಯವನ್ನು ಹೇಳುವ ನೆಪದಲ್ಲಿ ಸೀತೆಯನ್ನು ತನ್ನ ಬಲೆಗೆ ಬೀಳಿಸಿಕೊಳ್ಳುತ್ತಾಳೆ. ಸೀತೆಯ ಅಂತಃಪುರಕ್ಕೆ ಹೋಗಿ ಸೀತೆಗೆ ಹಿಂದೆ ನಡೆದದ್ದನ್ನು ಹೇಳುತ್ತಾಳೆ. ಅದನ್ನು ಕೇಳಿದ ಸೀತೆಯು ಅವಳನ್ನು ನಂಬುತ್ತಾಳೆ. ಕೊನೆಗೆ ಕೊರವಂಜಿಯು ಸೀತೆಗೆ ಎರಡು ಗಂಡು ಮಕ್ಕಳಾಗುತ್ತವೆ ಎಂಬುದನ್ನು ಹೇಳುತ್ತಾಳೆ. ಇದನ್ನು ಕೇಳಿದ ಸೀತೆ ನಿನಗೆ ಏನು ಬೇಕು ಕೇಳು ಕೊಡುತ್ತೇನೆ ಎಂದು ಮಾತು ಕೊಡುತ್ತಾಳೆ. ಕೊರವಂಜಿ ನನಗೆ ಚಿನ್ನ ಧಾನ್ಯ ಬೇಡ, ನನಗೆ ರಾವಣನ ಚಿತ್ರಪಟವನ್ನು ಬರೆದುಕೊಡುವಂತೆ ಒತ್ತಾಯಿಸುತ್ತಾಳೆ. ಸೀತೆಯು ಒಲ್ಲದ ಮನಸ್ಸಿನಿಂದ ಕೊರವಂಜಿಯ ಒತ್ತಾಯದಿಂದ ರಾವಣನ ಚಿತ್ರವನ್ನು ಬರೆಯುತ್ತಾಳೆ. ಆಗ ಕೊರವಂಜಿಯು ಆ ಚಿತ್ರಪಟಕ್ಕೆ ಜೀವ ತುಂಬುತ್ತಾಳೆ. ಅದು ಹೋಗಿ ಸೀತೆಯ ಎದೆಗೆ ಅಂಟಿಕೊಳ್ಳುತ್ತದೆ. ಅದನ್ನು ಏನು ಮಾಡಿದರೂ ನಾಶವಾಗದಂತೆ ಕೊರವಂಜಿಯು ಶಾಪವನ್ನು ನೀಡುತ್ತಾಳೆ. ಇದನ್ನು ತಿಳಿದ ಸೀತೆಯು ಶೂರ್ಪನಖಿಯನ್ನು ದೂರುತ್ತಾಳೆ. ನಿನ್ನ ಕಾರಣದಿಂದ ನಾನು ಒಂದು ವರ್ಷ ಕಾಡಿನಲ್ಲಿ ಒಂಟಿಯಾಗಿ ಚಿತ್ರಹಿಂಸೆ ಅನುಭವಿಸಿದ್ದೇನೆ, ಹೀಗೇಕೆ ನನ್ನ ಮೇಲೆ ದ್ವೇಷ ಎಂದು ಕೇಳುತ್ತಾಳೆ. ಇದನ್ನು ಕೇಳಿದ ಶೂರ್ಪನಖಿಗೆ ಕೋಪ ಬರುತ್ತದೆ. ಆಗ ಶೂರ್ಪನಖಿಯು ಸೀತೆ, ನೀನು ನನ್ನನ್ನು ಕೋಪ ಬರುವಂತೆ ಮಾಡಿದ್ದು, ನಾನು ರಾಮನ ಸುಂದರತೆಗೆ ಮೋಹಿತಳಾಗಿ ಅವನನ್ನು ಸೇರಬೇಕು ಎಂದು ಪ್ರಯತ್ನಿಸುವಾಗ ನೀನು ನಗುತ್ತಿದ್ದೆ. ನಂತರ ನೀನು ಎದುರಿಗಿದ್ದ ಕಾರಣ ರಾಮನು ನನ್ನನ್ನು ಲಕ್ಷ್ಮಣನಿಂದ ದಂಡಿಸಿದನು. ನೀನು ನನ್ನಂತೆ ಒಂದು ಹೆಣ್ಣು, ಅದನ್ನು ತಿಳಿದುಕೊಳ್ಳದೆ ನಾನು ಶಿಕ್ಷೆಯನ್ನು ಅನುಭವಿಸುವಾಗ ನಗುತ್ತಿದ್ದೆ. ಆ ನಗುವನ್ನು ಕಂಡು ನನಗೆ ಕೋಪ ಬಂತು. ಆ ಕೋಪದ ಸಲುವಾಗಿಯೇ, ನನ್ನ ಸೇಡನ್ನು ತೀರಿಸಿಕೊಳ್ಳಲು ಹೀಗೆ ಕೊರವಂಜಿಯಾಗಿ ಬಂದಿದ್ದೇನೆ ಎಂದು ಶೂರ್ಪನಖಿಯು ಹೇಳುತ್ತಾಳೆ.

ಇಲ್ಲಿ ಶೂರ್ಪನಖಿಯು ಕೊರವಂಜಿಯಾಗಿ ಬಂದು ಸೀತೆಯ ಮೇಲೆ ಸೇಡನ್ನು ತೀರಿಸಿಕೊಳ್ಳಲು ಕಾರಣ ರಾಮನೇ? ಶೂರ್ಪನಖಿಯು ರಾಮನ ಚೆಲುವನ್ನು ನೋಡಿ ಆಕರ್ಷಿತಳಾಗಿರುತ್ತಾಳೆ. ತಾನು ಹೇಗಾದರೂ ಮಾಡಿ ರಾಮನನ್ನು ಸೇರಬೇಕೆಂಬುದು ಶೂರ್ಪನಖಿಗೆ ಬಯಕೆ. ಶೂರ್ಪನಖಿಗೆ ರಾಮನ ಮೇಲೆ ಕೇವಲ ದೇಹದ ಆಕರ್ಷಣೆ ಮಾತ್ರ; ನಿಜವಾದ ಪ್ರೀತಿಯಲ್ಲ. ಹಾಗೆಯೇ ರಾವಣನು ಸೀತೆಯನ್ನು ಅಪಹರಿಸಲು ಕಾರಣ ಸೀತೆಯ ಸೌಂದರ್ಯ.

ಶೂರ್ಪನಖಿಯು ಸೀತೆಯ ಮೇಲಿನ ಸೇಡಿನಿಂದ ತನ್ನ ಅಣ್ಣನಾದ ರಾವಣನ ಬಳಿ ಸೀತೆಯ ಸೌಂದರ್ಯವನ್ನು ಹೊಗಳುತ್ತಾಳೆ. ಇದನ್ನು ಕೇಳಿ ಸಹಜವಾಗಿ ರಾವಣನು ಸೀತೆಯ ದೇಹದ ಸೌಂದರ್ಯಕ್ಕೆ ಮೋಹಗೊಳ್ಳುತ್ತಾನೆ. ಇವನು ನಿಜವಾದ ಪ್ರೀತಿಯಿಂದ ಅಪಹರಣ ಮಾಡಿಲ್ಲ, ಸೀತೆಯ ಸೌಂದರ್ಯಕ್ಕೆ ಮನಸೋತು, ಅಷ್ಟೇ. ಅದಕ್ಕೋಸ್ಕರವೇ ರಾವಣನು ಸೀತೆಯನ್ನು ಅಪಹರಿಸಿದ್ದು.

ರಾಮನನ್ನು ಕಂಡು ಅವನ ಸೌಂದರ್ಯಕ್ಕೆ ಶೂರ್ಪನಖಿಯು ಮೋಹಿತಳಾಗುತ್ತಾಳೆ. ಸೀತೆಯನ್ನು ಕಂಡ ರಾವಣನು ಅವಳ ಸೌಂದರ್ಯಕ್ಕೆ ಮನಸೋಲುತ್ತಾನೆ. ರಾಮನನ್ನು ಶೂರ್ಪನಖಿಯು ಕಾಡಿನಲ್ಲಿ ಸೇರಲು ಹೋದಾಗ ಅವನ ಮುಂದೆ ಸೀತೆ ಇದ್ದಳು. ಶೂರ್ಪನಖಿಯ ಮನಸ್ಸಿನಲ್ಲಿ ಆಗ ಸೀತೆಯು ಅಲ್ಲಿರದಿದ್ದರೆ ತನ್ನ ಸೌಂದರ್ಯಕ್ಕೆ, ಯೌವನಕ್ಕೆ ರಾಮನು ಸೋಲುತ್ತಿದ್ದನು, ನನ್ನನ್ನು ಸೇರುತ್ತಿದ್ದನು ಎಂಬ ಭಾವನೆಯೂ ಮೂಡುತ್ತದೆ. ರಾವಣನು ಸುಂದರವಾಗಿದ್ದವನು, ತಾನು ಸೀತೆಯನ್ನು ಒಲಿಸಿಕೊಳ್ಳಲು ರಾಮನು ಅಡ್ಡ ಬರುತ್ತಾನೆ. ರಾಮನು ಬದುಕಿರುವಾಗ ಅವನ ಬಿಂಬ ತನ್ನ ಮತ್ತು ಸೀತೆಯರ ನಡುವೆ ಅಡ್ಡ ಬರುತ್ತಿದೆ. ಆದ್ದರಿಂದಲೇ ಸೀತೆಯನ್ನು ತಾನು ಒಲಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂಬುದು ರಾವಣನ ಭಾವನೆಯಾಗಿರುತ್ತದೆ. ಇಲ್ಲಿ ಮುಖ್ಯವಾಗಿ ಇವರಲ್ಲಿ ಪ್ರೀತಿ ಎಂಬುದಕ್ಕಿಂತಲೂ ದೇಹದ ಸೌಂದರ್ಯವೇ ಮುಖ್ಯ ಎಂಬುದಾಗಿದೆ. ರಾವಣನಿಗೆ ತಾನು ಸೀತೆಯನ್ನು ಪಡೆಯಲು ರಾಮನ ಬಿಂಬ ಅಡ್ಡ ಬರುತ್ತದೆ, ಅವನು ಬದುಕಿರುವ ತನಕ ತಾನು ಸೀತೆಯನ್ನು ಸೇರಲು ಆಗುವುದಿಲ್ಲ ಎಂದು ತಿಳಿದು ರಾಮನನ್ನು ಕೊಲ್ಲಲು ರಾವಣನು ಯುದ್ಧರಂಗಕ್ಕೆ ಹೋಗುತ್ತಾನೆ. ಇನ್ನು ಶೂರ್ಪನಖಿಯು ರಾಮನ ಸೌಂದರ್ಯಕ್ಕೆ ಮೋಹಿತಳಾಗಿ ರಾಮನ ತಿರಸ್ಕಾರಕ್ಕೆ ಒಳಗಾಗಿ ಲಕ್ಷ್ಮಣನಿಂದ ದಂಡನೆಗೆ ಒಳಗಾಗುತ್ತಾಳೆ. ಸೀತೆಯ ಅಪಹಾಸ್ಯಕ್ಕೆ ಒಳಗಾಗುತ್ತಾಳೆ. ಯುದ್ಧರಂಗದಲ್ಲಿ ರಾಮನ ಬಾಣಕ್ಕೆ ಗುರಿಯಾಗಿ ರಾವಣನು ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತಾನೆ. ರಾವಣನು ಸತ್ತರೂ ಸಹ ಅವನಲ್ಲಿ ಸೀತೆಯ ಚೆಲುವು, ಅವಳ ಬಿಂಬ ಮರೆಯಾಗುವುದಿಲ್ಲ. ಆದ್ದರಿಂದಲೇ ಚಿತ್ರಪಟವಾಗಿ ಬಂದು ಅವನು ಸೀತೆಯ ಎದೆಯೇರುತ್ತಾನೆ. ಲಕ್ಷ್ಮಣನ ದಂಡನೆಗೆ ಒಳಗಾಗಿ ನೋವನ್ನು ಅನುಭವಿಸಿದರೂ, ಸೀತೆಯ ತಿರಸ್ಕಾರಕ್ಕೆ ಒಳಗಾದರೂ ಅವಳಲ್ಲಿ ರಾಮನ ಬಿಂಬ ಮರೆಯಾಗುವುದಿಲ್ಲ. ಆದ್ದರಿಂದಲೇ ಕೊರವಂಜಿಯಾಗಿ ಬಂದು ಸೀತೆಯ ಮೇಲೆ ತನ್ನ ಸೇಡನ್ನು ತೀರಿಸಿಕೊಳ್ಳಲು ಪ್ರಯತ್ನಿಸುತ್ತಾಳೆ.

ಶೂರ್ಪನಖಿಯು ತನ್ನ ಸೇಡನ್ನು ತೀರಿಸಿಕೊಳ್ಳಲು ಸೀತೆಯಿಂದ ಬರೆಯಿಸಿದ ರಾವಣನ ಚಿತ್ರಪಟವು ಪ್ರೀತಿಯಿಂದ ಸೀತೆ-ರಾಮರನ್ನು ದೂರವಾಗಿಸಲು ಕಾರಣವಾಗುತ್ತದೆ. ಒಮ್ಮೆ ರಾಮನು ಬೇಟೆಗೆ ಹೋಗಿರುತ್ತಾನೆ, ಬರುವಷ್ಟರಲ್ಲಿ ರಾವಣನ ಚಿತ್ರಪಟಕ್ಕೆ ಜೀವತುಂಬಿ ಸೀತೆಗೆ ಅಂಟಕೊಂಡಿರುತ್ತದೆ. ಅದು ರಾಮನಿಗೆ ತಿಳಿದರೆ ಅನಾಹುತ ಆಗುತ್ತದೆ ಎಂದು ಭಾವಿಸಿ ತನ್ನ ಹಾಸಿಗೆಯ ಅಡಿ ಇಡುತ್ತಾಳೆ, ಬೇಟೆಯಿಂದ ರಾಮನು ಬರುತ್ತಾನೆ. ಪ್ರೀತಿಯಿಂದ ಮಾತನಾಡಿಸುತ್ತಾ ಹಾಸಿಗೆಯ ಮೇಲೆ ಕುಳಿತುಕೊಳ್ಳುತ್ತಾನೆ. ಆದರೆ ಹಾಸಿಗೆಯ ಕೆಳಗೆ ಏನೋ ಒತ್ತಿದಂತಾಗಿ ತೆಗೆದು ನೋಡುತ್ತಾನೆ, ಅಲ್ಲಿ ತನ್ನ ಶತ್ರು ರಾವಣನ ಚಿತ್ರಪಟವನ್ನು. ಕೋಪ ಬರುತ್ತದೆ ಆಗ ಸೀತೆಯು ಶೂರ್ಪನಖಿಯು ಕೊರವಂಜಿಯಾಗಿ ಬಂದು ತನ್ನ ಕೈಯಿಂದ ಮೋಸದಿಂದ ರಾವಣನ ಚಿತ್ರ ಬರೆಯಿಸಿದಳು, ನಂತರ ಆ ಚಿತ್ರಪಟಕ್ಕೆ ಜೀವ ತುಂಬಿದಳು ಎಂಬುದಾಗಿ ನಡೆದ ನೈಜ ಘಟನೆಯನ್ನು ಸೀತೆಯ ರಾಮನಿಗೆ ಹೇಳುತ್ತಾಳೆ. ಆದರೆ ಇದರಿಂದ ಬೇಸರಗೊಂಡ ರಾಮನು ಸೀತೆಯನ್ನು ಮಾತನಾಡಿಸದೇ ಚಿತ್ರಪಟವನ್ನು ಎಸೆದು ಹೊರಟುಹೋಗುತ್ತಾನೆ. ಇಲ್ಲಿ ರಾಮ-ಸೀತೆಯರ ನಡುವೆ ಸಂಬಂಧವನ್ನು ಕಡಿದು ಹಾಕಿದ್ದು ರಾವಣನ ಚಿತ್ರಪಟವೇ ಆಗಿದೆ.

ಸೀತೆಯ ನಡೆದದ್ದನ್ನು ನೇರವಾಗಿ ಹೇಳಿದರೂ ರಾಮನು ಅದನ್ನು ಒಪ್ಪುವುದಿಲ್ಲ. ಕೋಪಗೊಂಡು ಹೊರಟು ಹೋಗುತ್ತಾನೆ. ಇದನ್ನು ಕಂಡು ಸೀತೆಗೆ ರಾಮನ ಮೇಲೆ ಬೇಸರವು ಉಂಟಾಗುತ್ತದೆ. ಶೂರ್ಪನಖಿ ಮಾಯಾವಿ, ಅವಳ ಮಾತನ್ನು ಕೇಳಿ ಚಿತ್ರ ಬರೆದದ್ದು ನನ್ನ ತಪ್ಪು ಇದೆ, ಆದರೆ ಅದು ನಡೆದ ಸಂದರ್ಭವನ್ನು ತಿಳಿಯದ ರಾಮನು ನನ್ನನ್ನು ನಿರಾಕರಿಸಿ ಹೋದದ್ದು, ಸೀತೆಗೆ ಬೇಸರ ಉಂಟುಮಾಡುತ್ತದೆ. ನಂತರ ರಾಮ-ಸೀತೆಯರ ನಡುವಿನ ಸಂಬಂಧವನ್ನು ನಾಶಮಾಡಿದ್ದು ಚಿತ್ರಪಟ, ಅದನ್ನು ತನ್ನ ಅತ್ತೆ ಕಂಡರೆ ಇನ್ನೇನು ಕೆಡಕಾಗುವುದೋ ಎಂದು ಯೋಚಿಸಿ ತನ್ನ ಚೇಟಿಯಾದ ಸುಜಾತೆಗೆ ಹೇಳುತ್ತಾಳೆ. ಅವಳು ಚಿತ್ರಪಟವನ್ನು ತನ್ನ ಎದೆಯ ಒಳಗೆ ಮುಚ್ಚಿಕೊಳ್ಳುತ್ತಾಳೆ. ನಾಶವಾಗದ ಚಿತ್ರಪಟವನ್ನು ತನ್ನ ಎದೆಯ ಒಳಗೆ ಮುಚ್ಚಿಟ್ಟುಕೊಳ್ಳುತ್ತಾಳೆ.

2. "ನನ್ನೆದೆಯ ಮರ್ಮಸ್ಥಳದಿ
ಅವಿತು ಕುಳಿತಿರು ಪಟವೆ
ನನ್ನ ಮಾನವ ಮುಚ್ಚಿ

ಅವಿಸಿಕೊಂಡಿರು ಪಟವೆ

ಬೀಳದಂತಿರು

ಕೆಟ್ಟ ದೃಷ್ಟಿಗೆ

ನಿನ್ನ ಪಾಡಿಗೆ

ತೆಪ್ಪಗೆ"

ಸೀತೆಯನ್ನು ಮಾತನಾಡಿಸದೇ ಕೋಪಗೊಂಡು ಬೇಸರದಿಂದ ರಾಮನು ತನ್ನಲ್ಲಿಯೇ ಯೋಚಿಸುತ್ತಾನೆ. 'ನನ್ನ ಮನಸ್ಸಿನಲ್ಲಿರುವ ಭಾವನೆಯನ್ನು ನನ್ನ ಪ್ರೀತಿಯ ತಮ್ಮನಾದ ಲಕ್ಷ್ಮಣನ ಬಳಿಯಲ್ಲೂ ಹೇಳಲಾಗದ ಸ್ಥಿತಿಯಲ್ಲಿದ್ದೇನೆ. ನನ್ನ ಪ್ರೀತಿಯ ಸೀತೆಯು ನನ್ನ ಜೊತೆ ಹದಿಮೂರು ವರ್ಷಗಳು ಕಾಡಿನಲ್ಲಿ ನಾನಾ ರೀತಿಯ ಹಿಂಸೆಯನ್ನು ಅನುಭವಿಸಿದ್ದವಳು ನನ್ನ ಕಷ್ಟದಲ್ಲಿ ಭಾಗಿಯಾಗಿದ್ದವಳು. ಈಗ ರಾವಣನ ಚಿತ್ರಪಟವನ್ನು ಬರೆದು ನನಗೆ ವಿಚಿತ್ರ ಎನ್ನುವಂತೆ ಮಾಡಿರುವೆ ಎಷ್ಟೇ ಯೋಚಿಸಿದರೂ ನಿನ್ನ ಪ್ರೀತಿಯೇ ನನಗೆ ಕಾಣುತ್ತಿದೆ. ಆದರೆ ನಮ್ಮ ಪ್ರೀತಿಯ ಮಧ್ಯೆ ಈ ಚಿತ್ರಪಟವು ಅಡ್ಡವಾಗಿ ಬಂದಿದೆ' ಎಂದು ಹೇಳಿಕೊಳ್ಳುತ್ತಾನೆ. ರಾಮನಿಗೆ ತನ್ನ ಪ್ರೀತಿಯ ಸೀತೆಯು ರಾವಣನ ಚಿತ್ರಪಟವನ್ನು ಬರೆದಿರುವುದನ್ನು ನಂಬಲು ಸಾಧ್ಯವೇ ಆಗುತ್ತಿಲ್ಲ. 'ಶೂರ್ಪನಖಿಯು ಮಾಯಾವಿ. ಅವಳು ಕೊರವಂಜಿಯಾಗಿ ಬಂದು ರಾವಣನ ಚಿತ್ರವನ್ನು ಬರೆದು ಕೊಡು ಎಂದು ಕೇಳಿದಾಗ ಸೀತೆಯು ಯೋಚಿಸದೇ ಏಕೆ ಬರೆಯಬೇಕಾಗಿತ್ತು? ಸೀತೆಯು ತಿಳಿಯದೇ ಚಿತ್ರಪಟವನ್ನು ಬರೆದಳು. ಆದರೆ ಆ ಮಾಯಾವಿ ಆ ಚಿತ್ರಪಟಕ್ಕೆ ಜೀವತುಂಬಿ ಹೋಗಿದ್ದಾಳೆ. ಅದು ಸೀತೆಯ ಎದೆಗೆ ಅಂಟಿಕೊಂಡಿದೆ. ಹೀಗಿರುವಾಗ ನಾನು ಸೀತೆಯನ್ನು ಸೇರಲು ಹೋದಾಗ ಆ ಚಿತ್ರಪಟವು ಅಡ್ಡ ಬರುತ್ತದೆ. ಅದು ಅಡ್ಡ ಬಂದಾಗ ನಾನು ಎಂದಿಗೂ ನಿನ್ನನ್ನು ಸೇರಲಾಗುವುದಿಲ್ಲ. ನನ್ನ ಪ್ರೀತಿಯಿಂದ ನೀನು ಏಕೆ ವಂಚಿತಳಾದೆ. ನನ್ನನ್ನು ನಿಜವಾಗಿ ಪ್ರೀತಿಸುವ ಹೆಣ್ಣು ನೀನು. ಆದರೆ ಲಂಕೆಗೆ ಹೋಗಿ ಬದಲಾಗಿಬಿಟ್ಟಿರುವೆಯಾ? ಎಂದು ಬೇಸರದಿಂದ ಹೇಳಿಕೊಳ್ಳುತ್ತಾನೆ.' ನಂತರ 'ನೀನು ನನ್ನನ್ನು ಸೇರದೇ ಬಲುದೂರ ಹೋಗಿರುವೆ. ಆದರೆ ನಿನ್ನನ್ನು ನನ್ನ ಅಂತರಂಗದಲ್ಲಿ ಪ್ರೀತಿಯ ಮೂರ್ತಿಯಾಗಿ ನೆಲೆಸಿರುವೆ ಎಂದಿಗೂ ನೀನೇ ನನ್ನ ಪ್ರೀತಿಯ ಪತ್ನಿ. ಆದರೆ ಚಿತ್ರಪಟವು ನಿನ್ನ ಎದೆಗೆ ಅಂಟಿಕೊಳ್ಳುತಿರುವಾಗ ನಾನು ನಿನ್ನನ್ನು ಸೇರಲಾಗುವುದಿಲ್ಲ. ನಾನು ನಿನ್ನನ್ನು ಕೂಡಲು

ಬಂದಾಗ ಪರಸ್ತ್ರೀಯರಂತೆ ಕಾಣುವೆ' ಎಂದು ತನ್ನ ಮನಸ್ಸಿನಲ್ಲಿಯೇ ಸೀತೆಯ ಮೇಲಿನ ಪ್ರೀತಿಯನ್ನು ಹೇಳಿಕೊಳ್ಳುತ್ತಾನೆ.

ಇಲ್ಲಿ ರಾಮನು ತನ್ನ ಮನಸ್ಸಿನಲ್ಲಿಯೇ ದುಃಖದಿಂದ ಹೇಳಿಕೊಳ್ಳುವುದನ್ನು ಗಮನಿಸಿದರೆ, ರಾಮನಿಗೆ ಸೀತೆಯ ಮೇಲೆ ನಿಜವಾದ ಪ್ರೀತಿಯಿದೆ. ಆದರೆ ಅವನಿಗೆ ರಾವಣನ ಚಿತ್ರಪಟವು ಅಡ್ಡ ಬರುತ್ತದೆ. ಆದರೂ ಏನೇ ಮಾಡಿದರೂ ಸೀತೆಯು ನನ್ನ ಹೆಂಡತಿ, ಅವಳಿಲ್ಲದ ಜೀವನವಿಲ್ಲ, ಅವಳು ನನ್ನ ಹೃದಯದಲ್ಲಿ ಯಾವಾಗಲೂ ಸ್ಥಾನವನ್ನು ಹೊಂದಿರುತ್ತಾಳೆ ಎಂಬುದನ್ನು ನೋಡಿದಾಗ ರಾಮನಿಗೆ ಸೀತೆಯ ಮೇಲೆ ಕೇವಲ ಆಕರ್ಷಣೆಯಲ್ಲ, ಅವನ ಹೃದಯದಿಂದ ತುಂಬಿದ ಪ್ರೀತಿಯಿದೆ ಎಂದು ತಿಳಿಯುತ್ತದೆ.

ಚಿತ್ರಪಟದ ಕಾರಣ ರಾಮನು ಚಿಂತೆಯಲ್ಲಿ ಮುಳುಗಿರುವಂತೆ ಇತ್ತ ಸೀತೆಯೂ ಚಿಂತೆಯಲ್ಲಿ ಮುಳುಗಿದ್ದಾಳೆ. ಇವಳಿಗೆ ರಾಮನ ಮೇಲೆ ಪ್ರೀತಿಯಿದೆ, ಆದರೆ ಅವನ ಯಾಂತ್ರಿಕ ನಡವಳಿಕೆಯನ್ನು ಕಂಡು ಸೀತೆಗೆ ಬೇಸರವಾಗುತ್ತದೆ. ಮೊದಲಿನ ಪ್ರೀತಿಯಿಲ್ಲ, ಅನುರಾಗವಿಲ್ಲ, ಈಗ ಕೇವಲ ಯಾಂತ್ರಿಕ ಚಲನೆ ಆಗಿದೆ. ತಾನು ಚಿತ್ರಪಟದ ಬಗ್ಗೆ ನಿಜವನ್ನು ಹೇಳಿದಾಗ ಅವರು ನನ್ನನ್ನು ಛೇಡಿಸಲಿಲ್ಲ, ಆದರೆ ಸುಮ್ಮನೆ ಗೊಂಬೆಯಂತೆ ಇರುತ್ತಾರೆ. ಇದನ್ನು ಕಂಡು ಸೀತೆಗೆ ತನ್ನ ರಾಮನ ಪ್ರೀತಿಯು ಕಡಿಮೆಯಾಗಲು ಕಾರಣ ಚಿತ್ರಪಟ ಎಂದು ಹೇಳಿಕೊಳ್ಳುತ್ತಾಳೆ. ರಾಮನ ಯಾಂತ್ರಿಕತೆ, ಅವನ ನಡವಳಿಕೆಯನ್ನು ನೋಡಿ ಸೀತೆಗೆ ಉಸಿರುಕಟ್ಟಿಸುವ ವಾತಾವರಣದಂತೆ ಕಾಣುತ್ತದೆ. ಆಗ ಅವಳಿಗೆ ತನ್ನನ್ನು ಅಪಹರಿಸಿದ್ದ ರಾವಣನು ತನ್ನ ಬಳಿ ಹೇಗೆ ಗೌರಯುತವಾಗಿ ನಡೆದುಕೊಂಡ ಎಂದು ಯೋಚಿಸುತ್ತಾಳೆ.

3. "ರಾವಣ: ಸೀತೆ ನಾನು ನಿನ್ನನ್ನು ಹೊತ್ತು ತಂದಿದ್ದರಿಂದ ನಿನಗೆ ಕೋಪ ಬಂದಿರುವುದು ಸಹಜವೇ ಆಗಿದೆ. ಇದು ನಿಮ್ಮ ಆರ್ಯರ ಸಮಾಜದ ದೃಷ್ಟಿಯಲ್ಲಿ ಅನಾಗರಿಕ, ಅಸಭ್ಯ ನಡವಳಿಕೆ ಅಲ್ಲವೇ? ಆದರೆ ನಮ್ಮ ಸಂಸ್ಕೃತಿಯ ಪ್ರಕಾರ ಯಾರು ಶಕ್ತಿವಂತರೋ, ಯಾರು ಪೌರುಷವಂತರೋ, ಅವರು ಮಾತ್ರ ಸುಂದರ ವಸ್ತುಗಳನ್ನು ಪಡೆಯೋದಕ್ಕೆ ಅರ್ಹರ, ಯೋಗ್ಯರು ಅನ್ನಿಸಿಕೊಳ್ಳತ್ತಾರೆ".

ರಾವಣನು ಸೀತೆಯ ಬಳಿ ಗೌರವಯುತವಾಗಿ ನಡೆದುಕೊಳ್ಳುತ್ತಾನೆ. ಪ್ರೀತಿಯಿಂದ ಮಾತನಾಡಿಸುತ್ತಾನೆ. ಅವನ ಗೌರವಯುತವಾದ ನಡವಳಿಕೆ, ಮಾತುಗಳು ಸೀತೆಯ ಮನಸ್ಸಿನಲ್ಲಿ ತೇಲಿಬರುತ್ತವೆ. ರಾವಣನು ಬಲಾತ್ಕರಿಸದೇ ನಡೆಸಿಕೊಂಡು ನೆನಪಿಗೆ ಬರುತ್ತದೆ. ಆದರೆ ಅಗಸನಾಡಿದ ಮಾತುಗಳನ್ನು ಕೇಳಿ ತನ್ನ ಅತ್ತೆಯರು ಕುಹಕದಿಂದಾಡುವ ಮಾತುಗಳು, ಅವರ ತಿರಸ್ಕಾರ, ಅವರ ಮಾತುಗಳನ್ನು ಕೇಳಿದ ಸೀತೆಗೆ ತನಗೆ ಅಂಟಿಕೊಂಡಿರುವ ಚಿತ್ರಪಟವು ನಾಶವಾಗುವವರೆಗೂ ತಾನು ಅರಮನೆಯಲ್ಲಿರಬಾರದು, ಕಾಡಿನಲ್ಲಿ ಇದ್ದು ಚಿತ್ರಪಟವು ಬಿದ್ದುಹೋದ ಮೇಲೆ ರಾಮನ ಬಳಿಗೆ ಹೋಗುವುದು ಸರಿ ಎಂದುಕೊಳ್ಳುತ್ತಾಳೆ. ಅಂದರೆ ತನ್ನ ಪ್ರೀತಿಯ ರಾಮನು ಸೇರಲು ಬಂದಾಗ ಅಡ್ಡ ಬರುವ ಚಿತ್ರಪಟವನ್ನು ಬೈದುಕೊಳ್ಳುತ್ತಾಳೆ. ತನ್ನ ಪ್ರೀತಿಯ ರಾಮನನ್ನು ಕೂಡುವ ಸಲುವಾಗಿ ಚಿತ್ರಪಟವು ನಾಶವಾಗುವ ತನಕ ಕಾಡಿನಲ್ಲಿ ಇರಲು ನಿರ್ಧರಿಸುತ್ತಾಳೆ.



ನಾಟಕವು ಮುಂದುವರೆಯುವಾಗ ಮಧ್ಯದಲ್ಲಿ ಸೀತಮ್ಮ ಬರುತ್ತಾಳೆ. ಇವಳು ಬಂದು ತನ್ನ ಗಂಡನಾದ ರಾಮಯ್ಯನು ಮಾಡಿರುವ ಅನಾಹುತವನ್ನು ತಿಳಿಸುತ್ತಾಳೆ. ಸೀತಮ್ಮನ ಮಾವನಿಗೆ ಆರೋಗ್ಯ ಸರಿಯಿಲ್ಲದ ಕಾರಣ ಒಂದು ಕೆ.ಜಿ ಅಕ್ಕಿಯನ್ನು ತರಲು ಹೇಳಲು ಬಂದಿರುತ್ತಾನೆ. ಅದನ್ನು ಕಂಡು ರಾಮಯ್ಯನಿಗೂ ಕೋಪ ಬರುತ್ತದೆ. ಚೂರಿಯಿಂದ ಅವನನ್ನು ಇರಿಯಲು ಪ್ರಯತ್ನಿಸಿ ವಿಫಲನಾಗುತ್ತಾನೆ. ಇವೆಲ್ಲ ಕಾರಣಗಳಿಂದ ಸೀತಮ್ಮನನ್ನು ಹೊಡೆದು ಮನೆಯಿಂದ ಹೊರಹಾಕುತ್ತಾನೆ. ಊರ ಜನರ ಮುಂದೆ ಕೆಟ್ಟ ನಡವಳಿಕೆಯವಳು ಎಂದು ಹೇಳಿ ಮನೆಯಿಂದ ಹೊರಹಾಕುತ್ತಾನೆ. ಇದನ್ನು ಸೀತಮ್ಮನು ಭಾಗವತರಿಗೆ ಹೇಳಿ ತನ್ನನ್ನು ಒಂದೆರಡು ದಿನ ತಮ್ಮ ಮನೆಯಲ್ಲಿ ಇಟ್ಟುಕೊಳ್ಳುವಂತೆ ಬೇಡುತ್ತಾಳೆ. ಆದರೆ ಭಾಗವತರ ಪತ್ನಿಯು ಅನುಮಾನ ಸ್ವಭಾವದವಳು ಆದ್ದರಿಂದ ಆಗುವುದಿಲ್ಲ ಎನ್ನುತ್ತಾನೆ. ಇದರಿಂದಾಗಿ ಬೇಸರಗೊಂಡ ಸೀತಮ್ಮ ಊರನ್ನು ಬಿಟ್ಟು ಹೋಗಲು ಸಿದ್ಧಳಾಗುತ್ತಾಳೆ.

ರಾಮನ ತಿರಸ್ಕಾರಕ್ಕೆ ಒಳಗಾದ ಸೀತೆಯು ಸಹ ಅರಮನೆಯಲ್ಲಿರಲು ಇಷ್ಟಪಡುವುದಿಲ್ಲ. ಅವಳು ತನ್ನ ಚೇಟಿಯಾದ ಸುಜಾತೆಗೆ ಹೇಳಿ ಕಾಡಿಗೆ ಹೋಗಲು ನಿರ್ಧರಿಸುತ್ತಾಳೆ. ಅಂದರೆ ಮುಂದಿನವಾರ ಸುಬ್ರಮಣ್ಯ ಷಷ್ಠಿ ಇದೆ ಅಂದು ದೊಡ್ಡ ಹುತ್ತಕ್ಕೆ ಹಾಲನ್ನು ಎರೆಯಲು ಹೋಗಿ ಅಲ್ಲಿಂದಲೇ ಕಾಡಿಗೆ ತೆರಳಲು ಸಿದ್ಧಳಾಗಿರುತ್ತಾಳೆ. ಅವಳಿಗೆ ರಾಮನ ಮೇಲೆ ಪ್ರೀತಿಯಿದೆ. ಆದರೆ

ಅವನು ಸೇರಲು ಬಂದಾಗ ರಾವಣನ ಚಿತ್ರಪಟವು ಅಡ್ಡ ಬರುತ್ತಿದೆ. ಅದಕ್ಕಾಗಿ ರಾವಣನ ಬಿಂಬವು ನಾಶವಾಗುವವರೆಗೂ ತಾನು ರಾಮನನ್ನು ಸೇರುವುದಿಲ್ಲ. ರಾಮನೇ ನನ್ನನ್ನು ಸೇರಲು ಬರಲಿ ಎಂದು ತೀರ್ಮಾನಿಸಿ ಕಾಡಿಗೆ ಹೋಗಲು ನಿರ್ಧರಿಸುತ್ತಾಳೆ.

ಇಲ್ಲಿ ಆಧುನಿಕ ಕುಟುಂಬದಲ್ಲಿನ ರಾಮಯ್ಯ-ಸೀತಮ್ಮನ ನಡುವೆ ಲಂಕಪ್ಪ ಬಂದಿದ್ದಾನೆ. ರಾಮಾಯಣದಲ್ಲಿ ರಾಮ-ಸೀತೆಯರ ನಡುವೆ ರಾವಣನ ಚಿತ್ರಪಟ ಬಂದಿದೆ. ಅಲ್ಲಿ ಬೇರೆ ಊರಿಗೆ ಸೀತಮ್ಮ ಹೋಗಲು ನಿರ್ಧರಿಸಿದಂತೆ, ಇಲ್ಲಿ ಸೀತೆಯು ತನ್ನ ಪ್ರೀತಿಯಿಂದ ರಾಮನು ದೂರವಾಗಬಾರದು ಎಂದು ಕಾಡಿಗೆ ತೆರಳಲು ನಿರ್ಧರಿಸುತ್ತಾಳೆ.

ಕಾಡಿಗೆ ಹೊರಡಲು ಸಿದ್ದಳಾದ ಸೀತೆಯು ಹುತ್ತಕ್ಕೆ ಹಾಲನ್ನು ಎರೆದು ಅಲ್ಲಿಂದಲೇ ಕಾಡಿಗೆ ಹೊರಟು ಹೋಗುತ್ತಾಳೆ. ಕಾಡಿಗೆ ಹೋದ ನಂತರ ಸೀತೆಗೆ ಒಂಟಿತನವು ಕಾಡಲಾರಂಭಿಸುತ್ತದೆ. ಅವಳು ತನ್ನ ಮನಸ್ಸಿನಲ್ಲಿಯೇ ರಾಮನ ಬಗ್ಗೆ ಚಿಂತಿಸುತ್ತಾಳೆ. ರಾಮನು ನನ್ನನ್ನು ತುಂಬಾ ಪ್ರೀತಿಸುತ್ತಿದ್ದನು. ಲಂಕಾಗೆ ರಾವಣನು ಕರೆದೊಯ್ದಾಗ ತಮ್ಮ ಪ್ರಾಣದ ಆಸೆಯನ್ನು ಬಿಟ್ಟು ಲಂಕೆಗೆ ಬಂದರು. ಅಲ್ಲಿ ನನಗಾಗಿ ರಾವಣನನ್ನು ಸಂಹಾರ ಮಾಡಿದರು. ಅಲ್ಲಿಂದ ನನ್ನನ್ನು ಅಯೋಧ್ಯೆಗೆ ಕರೆತಂದರು. ನನ್ನನ್ನು ಎಷ್ಟೊಂದು ಪ್ರೀತಿಯಿಂದ ಉಪಚರಿಸಿದರು. ತನ್ನ ಪ್ರಾಣವನ್ನು ನನಗಾಗಿ ಇಟ್ಟಿದ್ದಾರೆ. ನನ್ನ ಪ್ರೀತಿಗಾಗಿ ಅವರು ಏನೆಲ್ಲಾ ಮಾಡುವುದಕ್ಕೂ ಸಿದ್ಧರಿದ್ದಾರೆ. ಆದರೆ ಇಷ್ಟೊಂದು ಪ್ರೀತಿಸುವ ರಾಮನನ್ನು ಬಿಟ್ಟು ಬರಬಾರದಿತ್ತು. ಇಂತಹವರು ಕೆಲವು ದಿನಗಳಿಂದ ಬೇಸರದಿಂದ ನನ್ನನ್ನು ತಾತ್ಸಾರವಾಗಿ ಕಾಣುತ್ತಿದ್ದಾರೆ. ಅಷ್ಟಕ್ಕೆ ನಾನು ನನ್ನ ಪ್ರೀತಿಯ ರಾಮನನ್ನು ಬಿಟ್ಟುಬರಬಾರದಿತ್ತು ಎಂದು ಸೀತೆ ತನ್ನಲ್ಲಿಯೇ ಹೇಳಿಕೊಳ್ಳುತ್ತಾಳೆ.

ಸೀತೆಯು ರಾಮನ ಮೇಲೆ ಕೋಪವನ್ನು ಮಾಡಿಕೊಂಡು ಕಾಡಿಗೆ ಹೋದಳು. ಆದರೆ ತನ್ನ ಬಗ್ಗೆಯೇ ಅವಳಿಗೆ ಬೇಸರ ಉಂಟಾಗುತ್ತದೆ. ಏಕೆಂದರೆ ತನ್ನನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ರಾಮನನ್ನು ಬಿಟ್ಟುಬಂದಿದ್ದು. ರಾಮನು ಸೀತೆಯ ಬಗ್ಗೆ ತಾತ್ಸಾರ ಉಂಟಾಗಲು ಕಾರಣ ಸೀತೆಯೇ. ಇದರಲ್ಲಿ ರಾಮನದು ಏನು ತಪ್ಪಿಲ್ಲ. ಕೊರವಂಜಿಯ ಮಾಯಾವಿ ಬಲಿಯಾಗಿ ಚಿತ್ರಪಟ ಬರೆದದ್ದು ನಾನೇ. ಇದರಲ್ಲಿ ರಾಮರನ್ನು ದೂಷಿಸುವುದು ಯಾವ ನ್ಯಾಯ? ಹಾಗೆಯೇ ಚಿತ್ರಪಟವು ಎದೆಗೆ

ಅಂಟಿರುವುದು ತಾನಾಗಿಯೇ ಕೆಲವು ದಿನಗಳ ನಂತರ ಅಂಟು ಕಡಿಮೆಯಾಗಿ ಬೀಳುತ್ತಿತ್ತೋ ಏನೋ? ಆದರೆ ಅದಕ್ಕೆ ಸಮಯವನ್ನು ನೀಡದೇ ನಾನೇ ತಾಳ್ಮೆಯನ್ನು ಕಳೆದುಕೊಂಡು ಬಂದಿದ್ದೇನೆ, ಇದರಲ್ಲಿ ರಾಮನದು ದೋಷವೇ ಇಲ್ಲ.' ಹೀಗೆ ಸೀತೆಯು ರಾಮನ ಬಗ್ಗೆ ಪ್ರೀತಿಯನ್ನು ವ್ಯಕ್ತಪಡಿಸುತ್ತಾಳೆ. ನಂತರ ಚಿತ್ರಪಟವು ತನಗೆ ಅಂಟಿಕೊಂಡಿರುವ ತನಕ ನಾನು ಅಯೋಧ್ಯೆಗೆ ಹೋಗಲು ಸಾಧ್ಯವಿಲ್ಲ. ಏಕೆಂದರೆ ರಾಮನನ್ನು ಕೂಡಲು ಆಗದೇ ತಿರಸ್ಕಾರಕ್ಕೆ ಒಳಗಾಗಬೇಕು, ಅದಕ್ಕಾಗಿಯೇ ಚಿತ್ರಪಟವು ಬೀಳುವ ತನಕ ನಾನು ಕಾಡಿನಲ್ಲಿಯೇ ಇರಬೇಕು ಎಂದು ನಿರ್ಧರಿಸುತ್ತಾಳೆ. ಯಾವುದೇ ತಪ್ಪನ್ನು ರಾಮನ ಮೇಲೆ ಹೊರಿಸಲು ಸೀತೆ ಇಚ್ಛಿಸುವುದಿಲ್ಲ, ಕಾರಣ ಅವನ ಮೇಲಿನ ಪ್ರೀತಿ ಕಾರಣವಾಗಿದೆ.

ಕಾಡಿನಲ್ಲಿ ಏಕಾಂಗಿಯಾಗಿರುವ ಸೀತೆಗೆ ವನದೇವತೆಗಳು ಆಶ್ರಯ ನೀಡುತ್ತವೆ. ಸೀತೆಯು ವನದೇವತೆಗಳ ಆಶ್ರಯದಲ್ಲಿ ವಾಸವಾಗಿದ್ದಾಳೆ. ಆದರೆ ಅಯೋಧ್ಯೆ ನಗರದಲ್ಲಿ ಪುರಜನರು ನಾನಾ ರೀತಿಯಲ್ಲಿ ಸೀತೆಯ ಬಗ್ಗೆ ಅನುಕಂಪವನ್ನು ತೋರುತ್ತಾರೆ. ರಾಮನು ತನ್ನ ಸೇವಕರನ್ನು ಕಳುಹಿಸಿ ಹುಡುಕಿಸುತ್ತಾನೆ. ಸ್ವತಃ ಲಕ್ಷ್ಮಣನು ಹೋಗಿ ಹುಡುಕಿದರೂ ಸೀತೆ ಸಿಗಲಿಲ್ಲ. ಆಗ ರಾಮನು ಚಿಂತಿಸುತ್ತಾನೆ. ರಾಮನಿಗೆ ಸೀತೆಯ ಮೇಲೆ ಪ್ರೀತಿ ಇದೆ,ಆದ್ದರಿಂದ ತನ್ನಲ್ಲಿಯೇ ಯೋಚಿಸುತ್ತಾನೆ.

ಸೀತೆಯು ತುಂಬು ಗರ್ಭಿಣಿ,ಅಂಥವಳು ಕಾಡಿಗೆ ಏಕೆ ಹೋದಳು? ನನ್ನ ಅವಳ ಇಷ್ಟು ವರ್ಷದ ಸಂಬಂಧವನ್ನು ಕಡಿದುಕೊಂಡು ಸೀತೆ ಎಲ್ಲಿಗೆ ಹೋದಳು? ಸೀತೆಯು ಕಾಡಿಗೆ ಹೋಗಲು ನನ್ನ ತಿರಸ್ಕಾರ ಮನೋಭಾವವೇ ಕಾರಣವಾಯಿತೆ? ಎಂದು ನಾನಾ ರೀತಿಯಲ್ಲಿ ಚಿಂತಿಸುತ್ತಾನೆ. ಮಾಯಾವಿ ಶೂರ್ಪನಖಿಯು ಹೇಳಿದಳು ಎಂಬ ಮಾತ್ರಕ್ಕೆ ಸೀತೆ ರಾವಣನ ಚಿತ್ರಪಟವನ್ನು ಬರೆಯಬಾರದಾಗಿತ್ತು. ಅವಳು ಬರೆದ ಚಿತ್ರಪಟಕ್ಕೆ ಜೀವ ತುಂಬಿ ಶೂರ್ಪನಖಿ ಹೊರಟುಹೋಗಿದ್ದಾಳೆ. ನನ್ನ ಸೀತೆಯ ಪ್ರೀತಿಗೆ ಅಡ್ಡವಾಗಿ ಈ ಚಿತ್ರಪಟವು ಬಂದಿದೆ. ಅದು ಸೀತೆಯ ಎದೆಗೆ ಅಂಟಿಕೊಂಡಿರುತ್ತದೆ. ನಾನು ಸೀತೆಯನ್ನು ಸೇರಲು ಎಷ್ಟೇ ಪ್ರಯತ್ನಿಸಿದರೂ ಚಿತ್ರಪಟ ಅಡ್ಡ ಬರುತ್ತಿದೆ. ಹೀಗಿರುವಾಗ ನಾನು ಹೇಗೆ ಅವಳನ್ನು ಸೇರಲು ಸಾಧ್ಯವಾಗುತ್ತದೆ. ನಮ್ಮಿಬ್ಬರ ನಡುವೆ ಯಾಕಾದರೂ ಈ ಚಿತ್ರ ಬಂದಿತೋ? ಆದರೂ ಕಾಲಕಳೆದಂತೆ ನಾನು ಅವಳಿಗೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಿದ್ದೆನು, ಹಾಗೆಯೇ ಚಿತ್ರಪಟದ ಅಂಟು ಕಡಿಮೆಯಾಗಿ ಬಿದ್ದು

ಹೋಗುತ್ತಿತ್ತು. ಆದರೆ ಅಷ್ಟರಲ್ಲಿ ಸೀತೆಯು ದುಡುಕಿದಳು, ದುಡುಕಿ ನನ್ನಿಂದ ದೂರವಾದಳು. ಏಕೆ ಹೀಗೆ ಮಾಡಿದಳು, ಸೀತೆಯು ಸಹನಶೀಲೆ, ಆದರೂ ಈ ವಿಷಯದಲ್ಲಿ ದುಡುಕಿ ಹೋಗಿದ್ದಾಳೆ ಎಂದು ರಾಮನು ಮರುಗುತ್ತಾನೆ. ನಂತರ ಸೀತಯ ಯೋಗಕ್ಷೇಮದ ಬಗ್ಗೆ ಚಿಂತಿಸುತ್ತಾನೆ. ಕಾಡಿನಲ್ಲಿ ಯಾರ ಕಣ್ಣಿಗೂ ಕಾಣಲಿಲ್ಲ, 'ಇದಕ್ಕೆಲ್ಲ ಶೂರ್ಪನಖಿಯ ಮಾಯೆ ಇರಬಹುದು. ಸೀತೆಯು ಬೇಸರದಿಂದ ಆತ್ಮಹತ್ಯೆ ಮಾಡಿಕೊಂಡಿರಬಹುದೇನು? ಇಲ್ಲವಾದರೆ ಕಾಡುಪ್ರಾಣಿಗಳಿಗೆ ಬಲಿಯಾಗಿರಬಹುದೇ? ಎಂದು ತಿಳಿದು ಒಂದೂ ಅರ್ಥವೇ ಆಗುತ್ತಿಲ್ಲ' ಎಂದುಕೊಳ್ಳುತ್ತಾನೆ. ನಂತರ ತನಗೆ ಬಿದ್ದ ಕನಸು ನಿಜವಾಗಿ ತನ್ನಿಂದ ಸೀತೆಯು ದೂರವಾಗಿರಬಹುದು ಎಂಬುದಾಗಿ ರಾಮನು ನಾನಾ ರೀತಿಯಾಗಿ ಚಿಂತಿಸುತ್ತಾನೆ. ಇದನ್ನು ಗಮನಿಸಿದಾಗ 'ಸೀತೆಯು ದುಡುಕಿ ಕಾಡಿಗೆ ಬಂದಿದ್ದೇನೆ, ರಾಮನದು ತಪ್ಪಿಲ್ಲ' ಎಂದುಕೊಳ್ಳುವುದು, ರಾಮನು 'ಸೀತೆಯದು ತಪ್ಪಿಲ್ಲ ಇದರಲ್ಲಿ ಮಾಯೆ ಸೇರಿರಬಹುದು' ಎಂದು ಹೇಳುವುದು ಇಬ್ಬರಲ್ಲಿಯೂ ಒಬ್ಬರ ಮೇಲೆ ಒಬ್ಬರಿಗೆ ಪ್ರೀತಿ ಎಂಬುದು ಗಾಢವಾಗಿದೆ ಎಂಬುದಾಗಿ ತಿಳಿಯುತ್ತದೆ.

ಸೀತೆಯು ಅಯೋಧ್ಯೆಯಿಂದ ಕಾಡಿಗೆ ಹೋದ ನಂತರ ಅಯೋಧ್ಯೆಯಲ್ಲಿ ಬರಗಾಲ ಉಂಟಾಗುತ್ತದೆ. ಲಕ್ಷ್ಮಣನು ರಾಮನಿಗೆ ಬರಗಾಲದ ಭೀಕರತೆಯನ್ನು ತಿಳಿಸಿಹೇಳುತ್ತಾನೆ. ಆಗ ಚಿಂತೆಯಲ್ಲಿದ್ದ ಇವನು ಪ್ರಜೆಗಳಿಗಾಗಿ ಸೇವೆ ಮಾಡುತ್ತಾ ತನ್ನ ಚಿಂತೆಯನ್ನು ಮರೆಯಲು ಪ್ರಯತ್ನಿಸುತ್ತಾನೆ.

ಕಾಡಿನಲ್ಲಿ ವನದೇವತೆಗಳ ಆಶ್ರಯದಲ್ಲಿರುವ ಸೀತೆಯು ತನ್ನ ಜೀವನ ನಡೆದು ಬಂದಿದ್ದರ ಬಗ್ಗೆ ಚಿಂತಿಸುತ್ತಾಳೆ. ಅವಳ ಜನ್ಮದಾತರು ಯಾರೆಂದು ತಿಳಿದಿಲ್ಲ, ನೇಗಿಲು ಹೂಳುವಾಗ ಸಿಕ್ಕಿದ್ದರಿಂದ ಭೂಮಿತಾಯಿಯ ಮಗಳು ಎಂದು ಕರೆಯುತ್ತಾರೆ. ತನ್ನನ್ನು ಸಾಕಿದ್ದು ಜನಕರಾಜನು. ಶಿವಧನಸ್ಸನ್ನು ಮುರಿದು ರಾಮನು ವಿವಾಹವಾಗಿದ್ದು, ನಂತರ ವನವಾಸಕ್ಕೆ ಹೋಗಿದ್ದು, ಕಾಡಿನಲ್ಲಿ ರಾವಣನು ತನ್ನನ್ನು ಅಪಹರಿಸಿದ್ದು, ಎಲ್ಲವೂ ನೆನಪಿಗೆ ತಂದುಕೊಳ್ಳುತ್ತಾಳೆ. ರಾವಣನು ತನ್ನನ್ನು ಅಪಹರಿಸಿ ಅಶೋಕವನದಲ್ಲಿ ಇಟ್ಟಿದ್ದು, ಅಲ್ಲಿ ತನ್ನ ಸೇವಕಿಯಾದ ವಿಕಟೆ, ದುರ್ಮುಖಿ ರಾವಣನ ವ್ಯಕ್ತಿತ್ವದ ಬಗ್ಗೆ ಹೇಳುತ್ತಿದ್ದದ್ದು ಎಲ್ಲವೂ ನೆನಪಿಸಿಕೊಳ್ಳುತ್ತಾಳೆ. ವಿಕಟೆಯೇ ಹೇಳುವಂತೆ ರಾವಣನು ಸೀತೆಯ ದೇಹದ ಸೌಂದರ್ಯಕ್ಕೆ ಮನಸೋತಿದ್ದಾನೆ. ಅವಳನ್ನು ಪಡೆಯಲು ತನ್ನ ಸಂಬಂಧಿಕರನ್ನು ಕಳೆದುಕೊಳ್ಳುತ್ತಾನೆ.

ರಾಜ್ಯವು ನಾಶವಾಗುವ ಹಂತಕ್ಕೆ ಬಂದಿದ್ದಾಗಲೂ ರಾವಣನು ಸೀತೆಯ ಮೇಲಿನ ಬಯಕೆಯನ್ನು ಬಿಡುವುದಿಲ್ಲ. ಕೊನೆಗೆ ಸೀತೆಗಾಗಿ ರಾವಣನು ತನ್ನ ಪ್ರಾಣವನ್ನು ಬಿಟ್ಟಿದ್ದು, ಇವೆಲ್ಲ ಕಂಡ ಸೀತೆಗೆ ರಾಮನ ಮೇಲೆ ಪ್ರೀತಿ, ರಾವಣನ ಮೇಲೆ ಅನುಕಂಪ ಉಂಟಾಗುತ್ತದೆ.

ರಾವಣನು ತನಗಾಗಿ ಎಲ್ಲವನ್ನು ಕಳೆದುಕೊಂಡಿದ್ದಾನೆ. ಆದರೆ ಯುದ್ದದಲ್ಲಿ ರಾಮನು ಗೆದ್ದು ಬರಬೇಕು, ರಾವಣನು ಬದುಕಬೇಕು ಎಂಬ ಭಾವನೆಗಳು ಮೂಡುತ್ತದೆ. ನಂತರ ಯುದ್ದದಲ್ಲಿ ರಾವಣನನ್ನು ಸಂಹಾರ ಮಾಡಿ ರಾಮನು ಬರುತ್ತಾನೆ. ಅಲ್ಲಿಂದ ತನ್ನ ಅಯೋಧ್ಯೆಗೆ ಸೀತೆಯನ್ನು ಕರೆದೊಯ್ಯುತ್ತಾನೆ. ಇದೆಲ್ಲವನ್ನು ಕಾಡಿನಲ್ಲಿ ಸೀತೆಯು ನೆನಪಿಸಿಕೊಳ್ಳುತ್ತಿರುತ್ತಾಳೆ.

ಸೀತೆಯು ಕಾಡಿನಲ್ಲಿ ಗಂಡು ಮಕ್ಕಳಿಗೆ ಜನ್ಮವನ್ನು ನೀಡುತ್ತಾಳೆ. ಆದರೆ ತನ್ನ ಮಕ್ಕಳಿಗೆ ಹಾಲುಣಿಸಲು ಸೀತೆಗೆ ಸಾಧ್ಯವಾಗುವುದೇ ಇಲ್ಲ. ಅದಕ್ಕೆ ರಾವಣನ ಚಿತ್ರಪಟವು ಅಡ್ಡಬರುತ್ತಿರುತ್ತದೆ. ಮಕ್ಕಳು ಹಾಲಿಲ್ಲದೇ ಪರದಾಡುವ ದೃಶ್ಯವನ್ನು ಶೂರ್ಪನಖಿಯು ನೋಡುತ್ತಾಳೆ. ತನ್ನ ಸೇಡಿನ ಪರಿಣಾಮ ಅತಿಯಾಯಿತು ಎಂದು ತಿಳಿದು ಶೂರ್ಪನಖಿಯು ಸೀತೆಯಲ್ಲಿಗೆ ಬರುತ್ತಾಳೆ. ಆಗ ಸೀತೆಯು ರ್ಪನಖಿಯನ್ನು ಕಂಡು ಭಯಗೊಳ್ಳುತ್ತಾಳೆ. ಮಾಯಾವಿ ಶೂರ್ಪನಖಿಯು ತನ್ನ ಮಕ್ಕಳನ್ನು ಅಪಹರಿಸಬಹುದೆ ಎಂದುಕೊಳ್ಳುತ್ತಾಳೆ. ಆದರೆ ಶೂರ್ಪನಖಿಯು ತಾನು ಕೊಟ್ಟ ಶಾಪವನ್ನು ಹಿಂಪಡೆಯುತ್ತಾಳೆ. ರಾವಣನ ಚಿತ್ರಪಟ ಬಿದ್ದು ಹೋಗುತ್ತದೆ. ಮಕ್ಕಳು ಎದೆಯ ಹಾಲನ್ನು ಸೇವಿಸುತ್ತವೆ. ಶೂರ್ಪನಖಿಯು ಸೀತೆಯನ್ನು ಸಮಾಧಾನಪಡಿಸುತ್ತಾಳೆ.

4. "ಶೂರ್ಪನಖಿ. ಅಹುದಹುದು

ನಿನ್ನೊಹೆ ಸರಿ

ಋಷಿಪುಂಗವರೆ

ಅವರು

ಆಶ್ರಮವಿಹುದು

ಈ ಕಾಡಿನಲೆ

ವಾಲ್ಮೀಕಿ

ಅವರ ಹೆಸರು
ಅವರ ಸಿಗಬಹುದು
ಆಶ್ರಯವು ಸೀತೆಗೆ
ಮತ್ತವಳ ಮಕ್ಕಳಿಗೆ"

ಶೂರ್ಪನಖಿಯು ತನ್ನ ಶಾಪವನ್ನು ಹಿಂಪಡೆದು ಹೊರಟುಹೋಗುತ್ತಾಳೆ. ಇಲ್ಲಿ ವಾಲ್ಮೀಕಿ ಮಹರ್ಷಿಗಳು ಸೀತೆಗೆ ಆಶ್ರಯ ನೀಡುತ್ತಾರೆ. ಅವರು ಸಹ ರಾಮರು ನಿನ್ನನ್ನು ತುಂಬಾ ಪ್ರೀತಿಸುತ್ತಾರೆ, ರಾಮನು ಬಂದು ನಿನ್ನ ಕರೆದೊಯ್ಯುತ್ತಾನೆ. ಅಲ್ಲಿಯವರೆಗೂ ನನ್ನ ಆಶ್ರಯದಲ್ಲಿರು ಎಂದು ಸೀತೆಗೆ ಹೇಳಿ ಆಶ್ರಮದಲ್ಲಿ ಆಶ್ರಯ ನೀಡುತ್ತಾರೆ.

ಅಯೋಧ್ಯೆಯಲ್ಲಿ ರಾಮನು ಲಕ್ಷ್ಮಣನ ಮಾತಿನಿಂದ ಜನಸೇವೆಯಲ್ಲಿ ತೊಡಗಿದ್ದಾನೆ. ಆದರೆ ಅವನ ಮನಸ್ಸು ಯಾವಾಗಲೂ ಸೀತೆಯನ್ನು ನೆನಪಿಸಿಕೊಳ್ಳುತ್ತಲೇ ಇರುತ್ತದೆ. ಬಿಡುವಿನ ಸಮಯದಲ್ಲಿ ಸೀತೆಯ ನೆನಪು ರಾಮನಿಗೆ ಕಾಡುತ್ತದೆ. ಒಮ್ಮೆ ಚಿಕ್ಕಮ್ಮನಾದ ಕೈಕೆಯಿ ಹಟದಿಂದ ರಾಮನು ವನವಾಸಕ್ಕೆ ಹೋಗಬೇಕಾಗಿರುತ್ತದೆ. ಆಗ ರಾಮನು ತನ್ನ ಪ್ರೀತಿಯ ಸೀತೆಯನ್ನು ನೀನು ಕೋಮಲೆ, ಚಿಕ್ಕ ವಯಸ್ಸಿನವಳು ಕಾಡಿಗೆ ಬರಬೇಡ ಇಲ್ಲೆ ಇರು ಎನ್ನುತ್ತಾನೆ, ಆಗ ಸೀತೆಯು ಕಠೋರವಾಗಿ ಪ್ರತಿಕ್ರಿಯಿಸುತ್ತಾಳೆ:

5. "ಈ ಸುಖಕ್ಕೆ ನನ್ನನ್ನೇಕೆ ವಿವಾಹವಾದಿರಿ? ನೀವು ನನ್ನನ್ನು ಜೊತೆಯಲ್ಲಿ ಕರೆದೊಯ್ಯದಿದ್ದರೆ ನಿಮ್ಮನ್ನು ಗಂಡೂ ಅಲ್ಲದ, ಹೆಣ್ಣೂ ಅಲ್ಲದ ಶೈಲೂಷ ಎನ್ನಬೇಕಾಗುತ್ತದೆ ಎಂದಿದ್ದಳು"

ಈ ಮಾತನ್ನು ಕೇಳಿದ ತಕ್ಷಣವೇ ಸೀತೆಯು ತನ್ನನ್ನು ಎಷ್ಟು ಪ್ರೀತಿಸುತ್ತಿದ್ದಳು ಎಂಬುದು ತಿಳಿಯುತ್ತದೆ. ಮದುವೆಯಾದ ತನ್ನನ್ನು ಬಿಟ್ಟು ಹದಿನಾಲ್ಕು ವರ್ಷ ವನವಾಸಕ್ಕೆ ರಾಮ ಹೋದಾಗ ತನ್ನ ಗತಿ ಏನು ಎಂದು ಸೀತೆಯ ಮಾತಾಗಿತ್ತು. ತಾನು ಎಂದಿಗೂ ನಿನ್ನನ್ನು ಬಿಟ್ಟಿರಲು ಸಾಧ್ಯವಿಲ್ಲ ಎಂದು ತಿಳಿದ ಸೀತೆಯು ರಾಮನಿಗೆ ಕಠೋರವಾದ ಮಾತುಗಳನ್ನು ಆಡಿದ್ದಳು. ಇದನ್ನು ರಾಮನು ಅರ್ಥಮಾಡಿಕೊಂಡಿದ್ದನು. ಅವರ ಕಠೋರ ಮಾತಿನ ಹಿಂದೆ ಅವಳಿಗಿರುವ ಪ್ರೀತಿಯನ್ನು ತಿಳಿಸುತ್ತದೆ.

ಆದ್ದರಿಂದ ಅವಳು ತನ್ನ ಮನಸ್ಸಿನಲ್ಲಿಯೇ ನನ್ನನ್ನು ಆರಾಧಿಸುತ್ತಿದ್ದಾಳೆ. ಅಂತಹವುಗಳ ಮೇಲೆ ತಿರಸ್ಕಾರ ಮಾಡಿ ಕಾಡಿಗೆ ಹೋಗುವಂತೆ ಮಾಡಿದೆನಲ್ಲ ಎಂದು ರಾಮನು ನೋವನ್ನು ಅನುಭವಿಸುತ್ತಾನೆ.

ರಾಮನ ಮೇಲೆ ಸೀತೆಗೆ ಪ್ರೀತಿಯಿದೆ. ಹಾಗೆಯೇ ರಾಮನಿಗೂ ಸೀತೆಯಷ್ಟೇ ಪ್ರೀತಿಯಿದೆ. ಸೀತೆಯು ಹಟವನ್ನು ಮಾಡಿ ವನವಾಸಕ್ಕೆ ರಾಮನ ಜೊತೆ ಹೋಗಿಲ್ಲದಿದ್ದರೆ ಒಂಟಿಯಾಗಿ ಹದಿಮೂರು ವರ್ಷ ಕಾಲ ಕಳೆಯಲು ಸಾಧ್ಯವೇ ಆಗುತ್ತಿರಲಿಲ್ಲ. 'ಅವಳು ತನ್ನ ಪ್ರೇಮದಿಂದ ನನಗೆ ಸಂತೋಷ ಪಡಿಸುತ್ತಿದ್ದಳು. ನಾನು ಕೈಕೆಯ ಕುತಂತ್ರದಿಂದ ರಾಜನಾಗಿ ಸಿಂಹಾಸನವನ್ನು ಏರಲಾಗಲಿಲ್ಲ, ಆದರೆ ಸೀತೆಯು ತನ್ನ ಹೃದಯ ಸಾಮ್ರಾಜ್ಯದಲ್ಲಿ ನನ್ನನ್ನು ರಾಜನಂತೆ ಸಿಂಹಾಸನವನ್ನು ಏರಿ ಕುಳ್ಳಿರಿಸಿದ್ದಳು. ಆ ದಿನಗಳಲ್ಲಿ ಸೀತೆಯು ನನ್ನ ಪ್ರೀತಿಯ ಹೆಂಡತಿಯಾಗಿದ್ದಳು. ತಾಯಿಯಂತೆ ಸಲುಹಿದಳು, ನನ್ನನ್ನು ಸಹೋದರಿಯರಂತೆ ಉಪಚರಿಸಿದ್ದಳು. ಹೀಗೆ ತನ್ನ ಪ್ರಾಣವನ್ನು ತನಗಾಗಿ ಮೀಸಲಾಗಿರಿಸಿಟ್ಟಿದ್ದಳು. ಅಂತಹ ಸೀತೆಯ ಮೇಲೆ ಅನುಮಾನ ಪಟ್ಟು, ತಿರಸ್ಕಾರ ತೋರಿಸಿದೆನು, ಈ ತಿರಸ್ಕಾರದಿಂದ ಸೀತೆಯು ಬೇಸರಗೊಂಡಿದ್ದಳು. ನನ್ನಿಂದಲೇ ಸೀತೆಯು ನನ್ನನ್ನು ಬಿಟ್ಟು ಕಾಡಿಗೆ ಹೋಗುವಂತಾಯಿತು. ಅವಳು ಕಾಡಿಗೆ ಹೋಗಿದ್ದರಿಂದ ನಾನು ಪ್ರೀತಿಯನ್ನು ಕಳೆದುಕೊಂಡು ಅನಾಥವಾಗಿದ್ದೇನೆ' ಎಂದು ದುಃಖಿಸುತ್ತಾನೆ. ಇಲ್ಲಿ ರಾಮನು ತನ್ನ ಮೇಲೆಯೇ ಬೇಸರ ತಂದುಕೊಳ್ಳುತ್ತಾನೆ. ತನ್ನ ಜೀವನ ಸೀತೆಯಿಲ್ಲದೇ ಪೂರ್ಣವಾಗಿರುವುದಿಲ್ಲ. ನನ್ನ ಬಾಳು ಎಂಬುದು ಸಂತೋಷವಾಗಿರಬೇಕಾದರೆ ಸೀತೆಯು ನನ್ನ ಜೊತೆ ಇರಬೇಕು ಎಂದುಕೊಳ್ಳುತ್ತಾನೆ. ರಾಮನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಅಂದು ಕೇವಲ ಚಿತ್ರಪಟದ ನೆಪವಾಗಿ ಸೀತೆಯಲ್ಲಿ ತಿರಸ್ಕಾರವನ್ನು ರಾಮ ತೋರಿಸಿದ್ದನು. ಅವಳಲ್ಲಿ ಕೇವಲ ಯಾಂತ್ರಿಕ ನಟನೆಯನ್ನು ಮಾಡಿದ್ದ ರಾಮನು ತನ್ನ ತಪ್ಪಿನ ಅರಿವಾಗಿ ಪಶ್ಚಾತ್ತಾಪವನ್ನು ಪಡುತ್ತಾನೆ. ತನ್ನ ಪ್ರೀತಿಯ ಸೀತೆಯು ಇರದಿದ್ದ ಈ ಜೀವನವೇ ವ್ಯರ್ಥ, ಅದಕ್ಕಾಗಿ ನನಗೆ ಸೀತೆ ಬೇಕು, ಅವಳ ಪ್ರೀತಿ ಬೇಕು, ಅವಳನ್ನು ಸೇರಬೇಕು ಎಂದು ರಾಮನು ಹಾತೊರೆಯುತ್ತಾನೆ. ನಂತರ ತನ್ನ ಪ್ರೀತಿಯ ಸೀತೆಯು ಕಾಡಿನಲ್ಲಿ ಹೋಗಿದ್ದಾಗ, ಸೇವಕರು ಹೋಗಿ ಹುಡುಕಿ ಬರಿಗೈಯಲ್ಲಿ ಬಂದಿದ್ದರು. ತನ್ನ ತಮ್ಮನಾದ ಲಕ್ಷ್ಮಣನು ಸಹ ಹೋಗಿ ಸೀತೆಯನ್ನು ಹುಡುಕಿ ಸಿಗಲಾರದೇ ವಾಪಸ್ಸಾಗಿದ್ದನು. ಆದರೆ ಈಗ ರಾಮನು ತನ್ನ ಪ್ರೀತಿಯ ಸೀತೆಯನ್ನು ಹುಡುಕಲು ತಾನೇ ಕಾಡಿಗೆ ಹೊರಡಲು ಸಿದ್ಧನಾಗುತ್ತಾನೆ.

ಶೂರ್ಪನಖಿ ಸೀತೆಗೆ ಕೊಟ್ಟ ಶಾಪವನ್ನು ಅಳುವ ಮಕ್ಕಳನ್ನು ನೋಡಿ ಕನಿಕರದಿಂದ ಹಿಂಪಡೆಯುತ್ತಾಳೆ. ಸೀತೆಯ ಮೇಲಿನ ಸೇಡು ತೀರುತ್ತದೆ, ಸೀತೆಯ ಅಂದಿನ ನಗುವಿಗೆ ಪ್ರತಿಕಾರವಾಗಿ ಇಲ್ಲಿಯ ತನಕ ಸೀತೆಯ ನೋವನ್ನು ಅನುಭವಿಸಿದ್ದಾಳೆ. ಆದರೆ ಶೂರ್ಪನಖಿಯು ಅದರಿಂದ ಕಾಡಿನಲ್ಲಿಯೇ ಏಕಾಂಗಿಯಾಗಿ ಅಲೆದಾಡುತ್ತಿರುತ್ತಾಳೆ. ಕಾಡಿನಲ್ಲಿ ಅಲೆದಾಡುವ ಶೂರ್ಪನಖಿಗೆ ನೆಮ್ಮದಿಯೇ ಎಂಬುವುದಿಲ್ಲ. ತನ್ನ ಜೀವನ ಹೇಗೆ ನಡೆದುಬಂತು ಎಂಬುದನ್ನು ನೆನೆಯುತ್ತಾಳೆ. ತಾನು ಹುಟ್ಟಿದಾಗಲೇ ತಾಯಿಯನ್ನು ಕಳೆದುಕೊಂಡಿದ್ದಳು, ಇತರ ಎಲ್ಲಾ ಮಕ್ಕಳಂತೆ ತಾನು ತನ್ನ ತಾಯಿಯ ಎದೆ ಹಾಲನ್ನು ಕುಡಿಯಲಿಲ್ಲ. ಸೀತೆಯ ಮಕ್ಕಳು ಎದೆ ಹಾಲನ್ನು ಕುಡಿಯುವಾಗ ಇವಳಿಗೆ ಈ ರೀತಿಯ ಸೌಭಾಗ್ಯ ಸಿಗಲಿಲ್ಲವಲ್ಲ ಎಂದುಕೊಳ್ಳುತ್ತಾಳೆ. ನಂತರ 'ನಾನು ರಾಜಕುಮಾರಿಯಾಗಿ ಹುಟ್ಟಿದ್ದರೂ ನನಗೆ ಎಲ್ಲಾ ರೀತಿಯಲ್ಲೂ ವಂಚನೆಯಾಗಿದೆ. ಅರಮನೆಯಲ್ಲಿ ನನಗೆ ನಿಜವಾದ ಪ್ರೀತಿ ಎಂಬುದು ಸಿಗಲಿಲ್ಲ, ನಂತರ ತನ್ನ ಅಣ್ಣನಾದ ರಾವಣನು ದೇವತೆಗಳ ಮೇಲೆ ಯುದ್ಧ ಮಾಡುತ್ತ ಸ್ತ್ರೀಯರಲ್ಲಿ ಮೋಜು ಪಡೆಯುತ್ತಿದ್ದನು. ಇನ್ನೊಬ್ಬ ಅಣ್ಣನಾದ ಕುಂಭಕರ್ಣ ಸ್ವಾರ್ಥಿ, ಅವನಿಗೆ ಊಟ ನಿದ್ದೆಯಲ್ಲಿ ಮಾತ್ರ ಆಸಕ್ತಿ, ಇನ್ನೊಬ್ಬ ಅಣ್ಣನಾದ ವಿಭೀಷಣನು ನೀತಿ, ನಿಯಮ, ತತ್ವಗಳು ಎಂದು ಅದರಲ್ಲಿಯೇ ಮುಳುಗಿ ಹೋಗಿದ್ದನು. ಇಂತಹ ಪರಿಸ್ಥಿತಿಯಲ್ಲಿ ತನ್ನ ಮಾವನಾದ ಮಾರೀಚನು ತನಗೆ ಮಾಯಾ ವಿದ್ಯೆ ಕಲಿಸಿದನು. ಭಾರತದಲ್ಲಿನ ಜಿಂಕೆ ಮಾಂಸದ ರುಚಿ ಹಿಡಿಸಿದನು, ನನಗೆ ಮದುವೆ ವಯಸ್ಸಾದರೂ ಕಾಡುಗಳಲ್ಲಿ ಒಬ್ಬಂಟಿಯಾಗಿ ಅಲೆದಾಡುತ್ತಿದ್ದೆನು. ತನಗೆ ಇಷ್ಟಬಂದ ಜೀವನಸಂಗಾತಿಯನ್ನು ಆರಿಸಿಕೊಳ್ಳಲು ಅವಕಾಶ ನೀಡಿದ್ದರು. ಆದರೆ ಯಾರೂ ಸಿಗಲಿಲ್ಲ. ಅಂತಹ ಸಮಯದಲ್ಲಿ ನನಗೆ ರಾಮನು ಕಂಡನು. ಅವನನ್ನು ನೋಡಿದ ತಕ್ಷಣ ಅವನಿಗೆ ಮನಸೋತು. ಅವನನ್ನು ಪಡೆಯಲೇಬೇಕೆಂಬ ಬಯಕೆಯೂ ಹೆಚ್ಚಾಯಿತು. ಅವನನ್ನು ಸೇರುವ ಹುಚ್ಚಾಯಿತು. ಆದರೆ ತಾನು ಅವನನ್ನು ಸೇರಲು ಹೋದಾಗ ಅವನ ಮಡದಿ ಸೀತೆ ಇದ್ದಳು, ಅವಳು ಇದ್ದುದರಿಂದಲೇನೊ ರಾಮನು ನನ್ನನ್ನು ತಿರಸ್ಕರಿಸಿದನು, ನಂತರ ಲಕ್ಷ್ಮಣನ ಕೈಯಿಂದ ಶಿಕ್ಷೆಯನ್ನು ನೀಡಿದನು. ಅಗ ನನಗೆ ತುಂಬಾ ಕೋಪ ಬಂತು ಆದರೆ ರಾಮನ ಮುಖವನ್ನು ನೋಡಿದ ತಕ್ಷಣ ಕೋಪ ಹೋಗಿ ಅವನನ್ನು ಪಡೆಯಬೇಕು ಎನ್ನುವ ಆಸೆ ಬರುತ್ತಿತ್ತು. ಸೀತೆಯು ಆಗ ಪಕ್ಕದಲ್ಲಿದ್ದು ನಕ್ಕಳು. ಆ ನಗುವನ್ನು ನೋಡಿ ನನಗೆ ಕೋಪ ಬಂತು. ಕೋಪದ ಪರಿಣಾಮ ರಾವಣನಿಂದ ಸೀತೆಯನ್ನು ಅಪಹರಿಸುವಂತೆ ಮಾಡಿದೆ. ಕೋಪದಲ್ಲಿ ಗಂಡ- ಹೆಂಡತಿಯರನ್ನು ಬೇರ್ಪಡಿಸಿದೆ. ಆದರೆ ಹಾಲು ಕುಡಿಯಲು ಪರದಾಡುವ ಮಕ್ಕಳನ್ನು ನೋಡಿ ಕನಿಕರದಿಂದ

ಸೀತೆಯನ್ನು ಶಾಪದಿಂದ ಮುಕ್ತಗೊಳಿಸಿದೆ. ಆದರೆ ನನ್ನ ಸೇಡಿನಿಂದ ಸೀತೆ ಮಕ್ಕಳಾದರೂ ಮುಕ್ತಿ ಪಡೆದವು ಆದರೆ ನನಗೆ ಪ್ರೀತಿಯಿಂದ ಮುಕ್ತಿ ಸಿಗಲೇ ಇಲ್ಲ. ನಾನು ರಾಮನನ್ನು ಪಡೆಯಬೇಕು ಎಂಬುದು ಅತಿಯಾಗಿ ಕಾಡುತ್ತಿದೆ. ಹಾಗೆಯೇ ಅವನನ್ನು ಮರೆಯಲು ಹೋದರೆ ಅವರ ಸುಂದರ ಮುಖ ನನ್ನ ಕಣ್ಣು ಮುಂದೆ ಬಂದು ನಿಲ್ಲುತ್ತದೆ. ಅಂದು ರಾಮನು ನನ್ನನ್ನು ತಿರಸ್ಕಾರ ಮಾಡಿದನು, ಅದನ್ನು ನೆನೆದರೆ ಕೋಪ ಬರುತ್ತದೆ. ಆದರೆ ಅವನ ಮೇಲೆ ಕೋಪಕ್ಕಿಂತ ಆಸೆಯೇ ಪ್ರಬಲವಾಗಿದೆ. ಇದಕ್ಕೆಲ್ಲ ಕಾರಣ ರಾಮನು ಅಂದು ನನ್ನನ್ನು ಸೇರಲು ನಿರಾಕರಿಸಿದ್ದು, ಅವನ ಹೆಂಡತಿ ಸೀತೆ ಪಕ್ಕದಲ್ಲಿಯೇ ಇದ್ದದ್ದು. ಅದಕ್ಕಾಗಿ ಅಂದು ನನ್ನನ್ನು ಸ್ವೀಕರಿಸಲಿಲ್ಲ. ಆದರೆ ಈಗ ರಾಮನು ಒಬ್ಬನೇ ಸೀತೆಯನ್ನು ಹುಡುಕಲು ಬಂದಿದ್ದಾನೆ. ಈ ಸಮಯದಲ್ಲಿ ನಾನು ಅವನನ್ನು ಸೇರಬೇಕು ಎಂದು ಬಯಸುತ್ತಾಳೆ. ಇಲ್ಲಿ ಸೀತೆಯು ಇಲ್ಲ ಕೇವಲ, ರಾಮ ಮಾತ್ರ ಇದ್ದಾನೆ, ಅವನು ತನ್ನ ಯೌವನಕ್ಕೆ ಸೋತು ನನ್ನನ್ನು ಸೇರುತ್ತಾನೆ ಎಂದು ಶೂರ್ಪನಖಿಯು ಭಾವಿಸುತ್ತಾಳೆ. ಇಲ್ಲಿ ಶೂರ್ಪನಖಿಗೆ ರಾಮ-ಸೀತೆಯರ ನಡುವೆ ಇರುವ ಪ್ರೀತಿಯಲ್ಲ, ಕೇವಲ ಅವನ ಚೆಲುವನ್ನು ನೋಡಿ ತಾನು ಅವನನ್ನು ಸೇರಿ ಸಂತೋಷ ಹೊಂದಬೇಕು ಎಂಬ ಬಯಕೆ. ಇಲ್ಲಿ ದೇಹಗಳ ಆಕರ್ಷಣೆಯಿದೆ, ದೇಹ-ದೇಹ ಸೇರಿದರೆ ಸಾಕು ಎನ್ನುವ ಭಾವನೆ ಇಲ್ಲಿ ಶೂರ್ಪನಖಿಗೆ ಇದೆ. ಆದರೆ ನಿಜವಾದ ಹೃದಯದ ಪ್ರೀತಿ ಎಂಬುದು ಶೂರ್ಪನಖಿಗೆ ಇಲ್ಲವಾಗಿದೆ.

ಸೀತೆಯು ಯಾರಿಗೂ ಕಾಣದಿದ್ದ ಸಂದರ್ಭದಲ್ಲಿ ಕೊನೆಗೆ ರಾಮನೇ ಸೀತೆಯನ್ನು ಹುಡುಕಲು ಕಾಡಿಗೆ ಹೋಗುತ್ತಾನೆ. ರಾಮನಿಗೆ ತನ್ನ ಸೀತೆಯನ್ನು ಮರೆಯಲು ಸಾಧ್ಯವಾಗುವುದಿಲ್ಲ. ಅವನು ಕಾಡಿನಲ್ಲಿ ಎಲ್ಲಾ ಕಡೆಯಲ್ಲೂ ಸೀತಾ, ಸೀತಾ ಎಂದು ಎಷ್ಟು ಸಾರಿ ಕರೆದರೂ ಸಿಗುವುದಿಲ್ಲ. ಆಗ ಅವನ ಮನಸ್ಸಿಗೆ ಬರುವುದು ಶೂರ್ಪನಖಿ. ಶೂರ್ಪನಖಿಯು ಕೊರವಂಜಿಯಾಗಿ ಬಂದು ಸೀತೆಯ ಕೈಯಲ್ಲಿ ಒತ್ತಾಯ ಮಾಡಿ ರಾವಣನ ಚಿತ್ರಪಟವನ್ನು ಬರೆಸಿದ್ದಾಳೆ, ನಂತರ ಅದಕ್ಕೆ ಜೀವ ತುಂಬಿ ಸೀತೆಯ ಎದೆಗೆ ಅಂಟಿಕೊಳ್ಳುವಂತೆ ಮಾಡಿ ನನ್ನ ಮತ್ತು ಸೀತೆಯ ನಡುವೆ ವೈಮನಸ್ಸು ಬರುವಂತೆ ಮಾಡಿದ್ದಾಳೆ. ಅದರಿಂದ ಸೀತೆಯನ್ನು ನಾನು ಕಳೆದುಕೊಂಡು ದುಃಖ ಪಡುವ ಪರಿಸ್ಥಿತಿ ಉಂಟಾಗಿದೆ. ಶೂರ್ಪನಖಿಗೆ ಸೀತೆಯ ಮೇಲೆ ಕೋಪ ಉಂಟಾಗಲು ಕಾರಣ ನಾನೇ ಎಂದು ಹೇಳಿಕೊಳ್ಳುತ್ತಾನೆ. ಶೂರ್ಪನಖಿಯು ಅಂದು ರಾಮನನ್ನು ಇಷ್ಟಪಟ್ಟು ಸೇರಲು ಬಂದಾಗ ರಾಮನೇ ತಿರಸ್ಕರಿಸಿದ್ದನು. ತನ್ನ ತಮ್ಮನಾದ ಲಕ್ಷ್ಮಣನ ಕೈಯಿಂದ ಶೂರ್ಪನಖಿಗೆ ಶಿಕ್ಷೆಯನ್ನು ವಿಧಿಸಿದನು. ಆಗ

ಸೀತೆಯು ಅದನ್ನು ನೋಡಿ ನಗುತ್ತಿದ್ದಳು. ಇದನ್ನು ಕಂಡು ಶೂರ್ಪನಖಿಯು ತುಂಬಾ ಕೋಪ ಮಾಡಿಕೊಂಡಿದ್ದಳು. ಅದರ ಪ್ರತಿಫಲ ಇಂದು ರಾಮನಿಂದ ಸೀತೆಯು ದೂರವಾಗಿರುವುದು. ರಾಮನು ಶೂರ್ಪನಖಿಯು ಕೋಪಗೊಂಡು ಸೇಡು ತೀರಿಸಿಕೊಳ್ಳುವ ಹಂತಕ್ಕೆ ಹೋಗಲು ಅವನೇ ಕಾರಣನಾಗುತ್ತಾನೆ. ರಾಮನ ಮನಸ್ಸಿನಲ್ಲಿ ಶೂರ್ಪನಖಿಯ ಬಗ್ಗೆ ಅನುಕಂಪ ಮೂಡುತ್ತದೆ. ಒಂದು ಹೆಣ್ಣು ಒಂದು ಗಂಡನ್ನು ಪ್ರೀತಿಸಿ ಪಡೆಯಲು ಬಂದಾಗ ನಿರಾಕರಿಸಿದರೆ ಅವಳು ಕೋಪಗೊಳ್ಳುವುದು ಸಹಜವೇ, ಹಾಗೆಯೇ ಶೂರ್ಪನಖಿಯೂ ಆಗಿದ್ದಾಳೆ. ಆದರೆ ಅಂದು ನನ್ನನ್ನು ಅವಳು ಇಷ್ಟಪಟ್ಟು ಸೇರಲು ಎಷ್ಟೇ ಪೀಡಿಸಿದ್ದರೂ ಒಳ್ಳೆಯ ಮಾತಿನಿಂದ ಬುದ್ಧಿವಂತಿಕೆಯಿಂದ ಸಮಾಧಾನ ಮಾಡಿ ಕಳುಹಿಸಬೇಕಾಗಿತ್ತು. ಆದರೆ ಅಂದು ರಾಮನು ಯೋಚಿಸದೇ ದುಡುಕಿದನು. ನಂತರ ಲಕ್ಷ್ಮಣನು ಶೂರ್ಪನಖಿಯನ್ನು ದಂಡಿಸುವಂತಾಯಿತು. ರಾಮನಿಂದ ಸೀತೆಯು ದೂರವಾಗಲು ಶೂರ್ಪನಖಿಯ ಸೇಡೇ ಕಾರಣವಿರಬಹುದೆಂದು ರಾಮನು ತನ್ನ ಮನಸ್ಸಿನಲ್ಲಿಯೇ ಹೇಳಿಕೊಳ್ಳುತ್ತಾನೆ. ಒಂದು ದುರ್ಬಲವಾದ ಗಳಿಗೆಯಲ್ಲಿ ಮಾಡಿದ ಒಂದು ಸಣ್ಣ ತಪ್ಪಿನಿಂದ ಎಂಥೆಂಥ ಕಷ್ಟವನ್ನು ಅನುಭವಿಸಬೇಕಾಗುತ್ತದೆ ಎನ್ನುವುದಕ್ಕೆ ರಾಮ–ಸೀತೆಯರೇ ಸಾಕ್ಷಿಯಾಗಿ ನಿಲ್ಲುತ್ತಾರೆ. ರಾಮನು ತನ್ನ ಮನಸ್ಸಿನಲ್ಲಿಯೇ ಎಲ್ಲವನ್ನು ಹೇಳಿಕೊಳ್ಳುತ್ತಾ ಕಾಡಿನಲ್ಲಿ ಸೀತೆಯನ್ನು ಹುಡುಕಲು ಪ್ರಾರಂಭಿಸುತ್ತಾನೆ.

ರಾಮನು ಸೀತೆಯನ್ನು ಕಾಡಿನಲ್ಲಿ ಹುಡುಕುವಾಗ ಎದುರಿಗೆ ಶೂರ್ಪನಖಿಯು ಬರುತ್ತಾಳೆ. ರಾಮನಿಗೆ ಶೂರ್ಪನಖಿಯನ್ನು ಕಂಡು ಕೋಪ ಬರುತ್ತದೆ. ಸೀತೆಯು ದೂರವಾಗುವಂತೆ ಮಾಡಿದವಳು ಎಂಬ ಕಾರಣಕ್ಕೆ ಶೂರ್ಪನಖಿಯು ರಾಮನಿಗೆ ನೀನು ಸೀತೆಯನ್ನು ಸೇರಬಹುದು ಎಂದು ಹೇಳುತ್ತಾಳೆ. ಆಗ ರಾಮನಿಗೆ ಸಂತೋಷವಾಗುತ್ತದೆ. ಏಕೆಂದರೆ ಸೀತೆಯು ಬದುಕಿದ್ದಾಳೆ ಎಂದು. ಆಗ ರಾಮನು ತನ್ನ ಸೀತೆಯನ್ನು ತಾನು ಸೇರಬೇಕು ಎಂದು ಹೇಳಿದಾಗ ಶೂರ್ಪನಖಿಯು ಒಂದು ಷರತ್ತನ್ನು ವಿಧಿಸುತ್ತಾಳೆ. ಅದು ರಾಮನು ಸೀತೆಯನ್ನು ಸೇರಬೇಕಾದರೆ ಮೊದಲು ಶೂರ್ಪನಖಿಯನ್ನು ಸೇರುವಂತೆ ಹೇಳುತ್ತಾಳೆ. ಆಗ ರಾಮನು ನಿರಾಕರಿಸಿ ನಾನು ಏಕಪತ್ನಿವ್ರತಸ್ಥ, ಆದ್ದರಿಂದ ನಾನು ನಿನ್ನನ್ನು ಸೇರುವುದಿಲ್ಲ ಎಂದು ಹೇಳುತ್ತಾನೆ. ಅದಕ್ಕೆ ಶೂರ್ಪನಖಿಯು ರಾಜನನ್ನು ವ್ಯಂಗ್ಯ ರೀತಿಯಲ್ಲಿ ಅಣಕಿಸುತ್ತಾಳೆ.

6. "ಶೂರ್ಪನಖಿ- ಯಾವ ರಾಜ ಈ ಲೋಕದಲ್ಲಿ ಏಕಪತ್ನಿವ್ರತಸ್ಥನಾಗಿದ್ದಾನೆ? ನಿಮ್ಮ ತಂದೆ ದಶರಥ ಮಹಾರಾಜರೇ ಮೂವರು ಹೆಂಡಿರನ್ನು ಕಟ್ಟಿಕೊಂಡರಲ್ಲ? ಏಕಪತ್ನಿವ್ರತಸ್ಥ- ಹೆಂಡತಿ ಜೊತೆಗಿರುವಾಗ ಎಲ್ಲ ಗಂಡಂದಿರೂ ಏಕಪತ್ನೀವ್ರತಸ್ಥರೇ! ಈಗ ಸೀತೆ ಇಲ್ಲಿಲ್ಲ, ಈಗ ಇಲ್ಲಿ ಈ ಪ್ರಶಾಂತ ಪರಿಸರದಲ್ಲಿ ನಾನು ನೀನು ಇಬ್ಬರೇ!".

'ಪ್ರತಿಯೊಬ್ಬ ರಾಜರೂ ಹೆಂಡತಿಯು ಜೊತೆಗಿರುವಾಗ ಏಕಪತ್ನೀವ್ರಸ್ಥರೇ ಆದರೆ ಹೆಂಡತಿ ಇಲ್ಲದಾಗ ಎಲ್ಲ ಹೆಣ್ಣುಗಳನ್ನು ಭೋಗಿಸುತ್ತಾರೆ. ಆದ್ದರಿಂದ ನೀನು ಕಾಡಿನಲ್ಲಿ ಒಬ್ಬನೇ ಇದ್ದೀಯ, ಪಕ್ಕದಲ್ಲಿ ಸೀತೆಯೂ ಇಲ್ಲ. ನಿನಗೂ ಏಕಾಂಗಿಯಾಗಿ ದಣಿದಿರುವೆ ನಾನು ಕಾಯುತ್ತಿರುವೆ, ಬೇಗ ಬಂದು ನನ್ನನ್ನು ಸೇರು' ಎಂದು ಶೂರ್ಪನಖಿಯು ರಾಮನಲ್ಲಿ ಒತ್ತಾಯಿಸುತ್ತಾಳೆ. ಆಗ ರಾಮನು ಇದಕ್ಕೆ ನನ್ನ ಅಂತರಾತ್ಮವು ಒಪ್ಪವುದಿಲ್ಲ ಎನ್ನುತ್ತಾನೆ. ಆಗ ಶೂರ್ಪನಖಿಯು 'ಆತ್ಮಗಳಲ್ಲಿ ನಂಬಿಕೆಯಿಲ್ಲ, ದೇಹದ ಮೂಲಕ ಸುಖವನ್ನು ಪಡೆಯುವುದೇ ನಿಜವಾದದ್ದು. ಆದ್ದರಿಂದ ನೀನು ನನ್ನನ್ನು ಸಂತೋಷಪಡಿಸು, ನಿನ್ನ ದೇಹದ ಸೌಂದರ್ಯಕ್ಕೆ ಮನಸೋತಿದ್ದೇನೆ. ದಯವಿಟ್ಟು ನನ್ನನ್ನು ಸೇರಿ ಆನಂದವನ್ನು ಉಂಟುಮಾಡು' ಎಂದು [illegible] ರಾಮನಲ್ಲಿ ಬೇಡಿಕೊಳ್ಳುತ್ತಾಳೆ. ಇಲ್ಲಿ ಶೂರ್ಪನಖಿಗೆ ನಿಜವಾದ ಪ್ರೀತಿಯಿಲ್ಲ, ಅವಳು ರಾಮನ ದೇಹದ ಸೌಂದರ್ಯವನ್ನು ಸವಿಯುವ ಬಯಕೆಯಾಗಿದೆ. ಅವನನ್ನು ಕೂಡಿ ದೇಹದ ಮೂಲಕ ಸುಖಪಡುವುದೇ ಶೂರ್ಪನಖಿಯ ಉದ್ದೇಶವಾಗಿದೆ.

ಶೂರ್ಪನಖಿಯು ಎಷ್ಟೇ ಒತ್ತಾಯ ಮಾಡಿದರೂ ರಾಮನು ಅವಳನ್ನು ಸೇರಲು ಬಯಸುವುದಿಲ್ಲ. ಆಗ ಶೂರ್ಪನಖಿಯು ಸೀತೆಯ ವೇಷ ಧರಿಸಿ ರಾಮನ ಮುಂದೆ ನಿಲ್ಲುತ್ತಾಳೆ. ಆದರೆ ರಾಮನು ಆಗಲೂ ಒಪ್ಪುವುದಿಲ್ಲ.

7. "ಶೂರ್ಪನಖಿ:- ಈ ನನ್ನನ್ನು ಸ್ವೀಕರಿಸಲೇನಡ್ಡಿ? ಈಗ ನನ್ನನ್ನು ನೀನು ಕೂಡಿದರೆ, ನಿನ್ನ ಸೀತೆಯನ್ನು ಭೋಗಿಸಿದಂತಾಗುತ್ತದೆ. ಬಾ ತಡಮಾಡಬೇಡ ಬಾ, ಏಳು ಎದ್ದೇಳು.

ರಾಮ:- ಶೂರ್ಪನಖಿ ವಿನಯದಿಂದ ಪ್ರೀತಿಯಿಂದ ಒಲುಮೆ ಸಿದ್ದಿಸುತ್ತದೆಯೇ ಹೊರತು ಮಾಯ-ಮಂತ್ರ ಕುಟಿಲೋಪಾಯಗಳಿಂದಾಗಲಿ, ಬಲಾತ್ಕಾರದಿಂದಾಗಲಿ ಅಲ್ಲ ಎಂಬುದನ್ನು ನೀನು ತಿಳಿದಂತಿಲ್ಲ.

ಶೂರ್ಪನಖಿ:- ಇಲ್ಲ,ನನಗೆ ನಿಮ್ಮ ಆರ್ಯರ ನಯ ನಾಜೂಕುಗಳಲ್ಲಿ ನಂಬಿಕೆ ಇಲ್ಲ. ನನಗೀಗ ಹಸಿವಾಗಿದೆ, ಊಟ ಸಿಕ್ಕಿದೆ, ಊಟ ಮಾಡಬೇಕು,ಇಷ್ಟೇ ನನಗೆ ಗೊತ್ತು".

ಶೂರ್ಪನಖಿಗೆ ಕೇವಲ ದೇಹದ ಆಕರ್ಷಣೆಯಿದೆ ಎನ್ನುವುದಕ್ಕೆ ಇಲ್ಲಿ ಉದಾಹರಣೆ ಇದೆ. ಅಂದರೆ ಅವಳು ಸೀತೆಯ ವೇಷದಲ್ಲಿ ಬಂದು ರಾಮನ ಎದುರಿಗೆ ಬಂದು ನಿಲ್ಲುತ್ತಾಳೆ. ಆದರೂ ರಾಮನು ಅವಳನ್ನು ಭೋಗಿಸುವುದಿಲ್ಲ. ಶೂರ್ಪನಖಿ ಹೇಳುವಂತೆ ಹಸಿವಾಗಿದೆ, 'ಊಟ ಇದೆ ಹಸಿವಾದಾಗ ಎದುರಿಗೆ ಇರುವ ಊಟ ಮಾಡುವುದು ಸರಿ' ಎಂದು ಶೂರ್ಪನಖಿ ಹೇಳುತ್ತಾಳೆ. ಅಂದರೆ ಒಬ್ಬಂಟಿಯಾದ ರಾಮನ ಮುಂದೆ ಯೌವ್ವನ ತುಂಬಿದ ಹೆಣ್ಣು ಇದ್ದಾಳೆ, ಯಾರೂ ಇಲ್ಲ, ಇಂತಹ ಪ್ರಶಾಂತ ವಾತಾವರಣದಲ್ಲಿ ದೇಹ-ದೇಹ ಕೂಡಿ ಆನಂದವನ್ನು ಪಡುವುದು ಸರಿ ಎಂದು ಹೇಳಿ ಒತ್ತಾಯ ಮಾಡುತ್ತಾಳೆ. ಆದರೆ ರಾಮನು ಶೂರ್ಪನಖಿಯು ಎಷ್ಟೇ ವಿಧದಲ್ಲಿ ಭೋಗಿಸಲು ಹೇಳಿದರೂ ಒಪ್ಪುವುದಿಲ್ಲ. ಅವನಿಗೆ ಸೀತೆಯನ್ನು ಬಿಟ್ಟು ಬೇರೆಯವರೊಂದಿಗೆ ದೈಹಿಕ ಸಂಬಂಧವನ್ನು ಹೊಂದಲು ಇಷ್ಟವಿಲ್ಲ. ಅವನಿಗೆ ಸೀತೆಯ ಮೇಲೆ ಇರುವುದು ನಿಜವಾದ ಪ್ರೀತಿ, ಹೃದಯಗಳಿಗೆ ಸಂಬಂಧಿಸಿದ್ದು, ಕೇವಲ ದೇಹದ ಆಕರ್ಷಣೆಯಲ್ಲ. ಆದ್ದರಿಂದಲೇ ರಾಮನು ಸೀತೆಯನ್ನು ನಿಜವಾಗಿ ಪ್ರೀತಿಸುವುದರಿಂದ ಶೂರ್ಪನಖಿಯನ್ನು ಕೂಡಲು ಒಪ್ಪುವುದಿಲ್ಲ. ಆದರೆ ಶೂರ್ಪನಖಿಗೆ ರಾಮನ ಮೇಲೆ ಇರುವುದು ನಿಜವಾದ ಪ್ರೀತಿಯಲ್ಲ, ಕೇವಲ ದೈಹಿಕ ಸುಖವನ್ನು ಪಡೆಯುವುದಾಗಿದೆ.

ಕೊನೆಗೆ ರಾಮನು ಶೂರ್ಪನಖಿಯನ್ನು ಮತ್ತೊಮ್ಮೆ ತಿರಸ್ಕರಿಸುತ್ತಾನೆ. ಇದರ ಮೂಲಕ ಶೂರ್ಪನಖಿಗೆ ರಾಮನ ಮೇಲೆ ಮತ್ತಷ್ಟು ಕೋಪ ಬರುತ್ತದೆ. ಆದರೂ ಅವನ ಮೇಲೆ ಪ್ರೀತಿ ಇರುತ್ತದೆ. ನಂತರ ಶೂರ್ಪನಖಿಯು ತನ್ನನ್ನು ಈಗಲೂ ನಿರಾಕರಿಸಿದ್ದರಿಂದ ನಿನ್ನ ಸೀತೆಯು ಇನ್ನು ಕೆಲವು ವರ್ಷಗಳು ಸಿಗಬಾರದು, ನನ್ನಂತೆಯೇ ನೀನೂ ಸೀತೆ ವಿರಹಿಯಾಗಿ ನೋವನ್ನು ಅನುಭವಿಸುವಂತಾಗಲಿ ಎಂದು ಶಾಪವನ್ನು ನೀಡಿ ಹೋಗುತ್ತಾಳೆ. ಆದರೂ ಹೋಗುವಾಗ

ರಾಮನಿಗೆ ನಾನು ಯಾವಾಗಲೂ ಪ್ರೀತಿಸುತ್ತೇನೆ ಎಂದು ಹೇಳಿ ಹೊರಟುಹೋಗುತ್ತಾಳೆ. ಆದರೆ ರಾಮನು ಶೂರ್ಪನಖಿಗೆ ತನ್ನ ನಿರ್ಧಾರವನ್ನು ಹೇಳಿದ್ದನು. ಸೀತೆಯನ್ನು ಬಿಟ್ಟು ಬೇರೆಯಾರೂ ಬೇಡ ಎಂದಿದ್ದನು. ಈಗ ಸೀತೆ ದೂರವಾಗಿದ್ದಾಳೆ, ಹಲವಾರು ವರ್ಷಗಳ ನಂತರವಾದರೂ ಸೀತೆಯನ್ನು ಸೇರುತ್ತೇನೆ ಎಂದು ರಾಮನು ತನ್ನ ಅಯೋಧ್ಯೆ ನಗರಕ್ಕೆ ಹಿಂದಿರುಗುತ್ತಾನೆ. ಇಲ್ಲಿ ಸೀತೆಯ ಮೇಲೆ ಇರುವುದು ರಾಮನಿಗೆ ದೇಹದ ಆಕರ್ಷಣೆಯಲ್ಲ, ಹೃದಯಗಳ ಸಂಬಂಧವಾಗಿದೆ. ಆದರೆ ಶೂರ್ಪನಖಿಗೆ ರಾಮನ ಮೇಲಿರುವುದು ಪ್ರೀತಿಯಲ್ಲ, ಕೇವಲ ದೇಹದ ಆಕರ್ಷಣೆ ಮಾತ್ರ ಎಂದು ಅವಳ ಮಾತಿನಿಂದಲೇ ಸ್ಪಷ್ಟವಾಗುತ್ತದೆ.

ರಾಮನನ್ನು ಕಂಡು ಅವನ ಸೌಂದರ್ಯಕ್ಕೆ ಶೂರ್ಪನಖಿಯು ಮನಸೋಲುತ್ತಾಳೆ, ಹಾಗೆಯೇ ಸೀತೆಯ ಸೌಂದರ್ಯಕ್ಕೆ ರಾವಣನು ಆಕರ್ಷಿತನಾಗುತ್ತಾನೆ. ಶೂರ್ಪನಖಿಯು ರಾಮನನ್ನು ಕೂಡಲು ಹೋದಾಗ ಪಕ್ಕದಲ್ಲಿ ಅವನ ಹೆಂಡತಿ ಸೀತೆಯು ಇಲ್ಲದಿದ್ದಲ್ಲಿ ರಾಮನು ನನ್ನ ಯೌವ್ವನಕ್ಕೆ ಆಕರ್ಷಿತನಾಗುತ್ತಿದ್ದನು ಎಂಬ ಭಾವನೆ ಶೂರ್ಪನಖಿಯಲ್ಲಿದೆ. ಸೀತೆಯ ಸೌಂದರ್ಯಕ್ಕೆ ಮನಸೋತು ಅಪಹರಿಸಿರುವ ರಾವಣನು, ತನ್ನನ್ನು ಸೀತೆಯು ಸೇರಲು ರಾಮನು ಬದುಕಿದ್ದಾನೆ, ಅವನ ಪ್ರತಿಬಿಂಬವು ಅಡ್ಡ ಬರುತ್ತಿದೆ. ಆದ್ದರಿಂದ ಬದುಕಿರುವ ರಾಮನನ್ನು ಕೊಲ್ಲುವುದರಿಂದ ಸೀತೆಯು ತನ್ನನ್ನು ಸ್ವೀಕರಿಸುತ್ತಾಳೆ ಎಂದು ರಾವಣನು ತಿಳಿಯುತ್ತಾನೆ. ಆದ್ದರಿಂದ ರಾಮನನ್ನು ಕೊಲ್ಲಲು ಯುದ್ಧ ಭೂಮಿಗೆ ರಾವಣನು ಹೋಗುತ್ತಾನೆ. ರಾಮನ ಆದೇಶದಂತೆ ಲಕ್ಷ್ಮಣನು ಶೂರ್ಪನಖಿಯನ್ನು ದಂಡಿಸುತ್ತಾನೆ, ಹಾಗೆಯೇ ಸೀತೆಯ ಅಪಹಾಸ್ಯಕ್ಕೆ, ತಿರಸ್ಕಾರಕ್ಕೆ ಶೂರ್ಪನಖಿಯು ಗುರಿಯಾಗುತ್ತಾಳೆ.

ತನಗೆ ಎಷ್ಟೇ ಅವಮಾನವಾದರೂ ಶೂರ್ಪನಖಿಯ ಮನಸ್ಸಿನಿಂದ ರಾಮನ ಬಿಂಬ ಮರೆಯಾಗುವುದಿಲ್ಲ. ಹಾಗೆಯೇ ಸೀತೆಯ ಸೌಂದರ್ಯಕ್ಕೆ ಸೋತು ರಾಮನಿಂದ ಹತನಾದ ರಾವಣನು ಸತ್ತರೂ ಸೀತೆಯ ಮೇಲಿನ ಆಸೆಯನ್ನು ಬಿಡುವುದಿಲ್ಲ. ಆದ್ದರಿಂದಲೇ ಚಿತ್ರಪಟವಾಗಿ ಅವನು ಸೀತೆಯ ಎದೆಗೆ ಅಂಟಿಕೊಳ್ಳುತ್ತಾನೆ. ತನ್ನಿಂದ ಶೂರ್ಪನಖಿಯು ಅವಮಾನಕ್ಕೆ ಒಳಗಾದಳು ಎಂಬ ಕರುಣೆ, ಅನುಕಂಪ ರಾವಣನ ಬಗ್ಗೆ ಕನಿಕರವಿದೆ, ಅನುಕಂಪವಿದೆ.

ಇಲ್ಲಿ ಹೇಳುವುದಾದರೆ ರಾವಣ-ಶೂರ್ಪನಖಿಯರು ಅನುಕ್ರಮವಾಗಿ ಸೀತೆ-ರಾಮರ ಸೌಂದರ್ಯಕ್ಕೆ, ರೂಪಕ್ಕೆ ಮಾತ್ರವೇ ಮನಸೋತಿದ್ದಾರೆ, ಆಕರ್ಷಿತರಾಗಿದ್ದಾರೆ.

8. "ನಮ್ಮ ಸಂಸ್ಕೃತಿ ಪ್ರಕಾರ ಯಾರು ಶಕ್ತಿವಂತರೋ, ಯಾರು ಪೌರುಷವಂತರೋ ಅವರು ಮಾತ್ರ ಸುಂದರ ವಸ್ತುಗಳನ್ನು ಪಡೆಯೋದಕ್ಕೆ ಅರ್ಹರು, ಯೋಗ್ಯರು ಅನಿಸಿಕೊಳ್ತಾರೆ"

ರಾವಣನ ಈ ಮಾತಿನಲ್ಲಿ ಇವನ ಪ್ರೀತಿ ಕೇವಲ ದೈಹಿಕ ಆಕರ್ಷಣೆಯೇ ಹೊರತು, ಪ್ರೀತಿ ಮಾನಸಿಕವಾದದ್ದಲ್ಲ ಎಂದು ತಿಳಿಯುತ್ತದೆ.

"ರಾಮ, ನನಗೀಗ ಹಸಿವಾಗಿದೆ, ಊಟ ಸಿಕ್ಕಿದೆ, ಊಟ ಮಾಡಬೇಕು `ಇಷ್ಟೇ ನನಗೆ ಗೊತ್ತು"

ಶೂರ್ಪನಖಿಯ ಈ ಮಾತುಗಳು ಸಹ ಅವಳಲ್ಲಿರುವ ದೇಹದ ಆಕರ್ಷಣೆಯ ಬಗ್ಗೆ ತಿಳಿಸುತ್ತದೆ. ಇವಳಿಗೆ ದೇಹದ ಸಂಬಂಧದಿಂದ ಸಂತೋಷ ದೊರತರೆ ಸಾಕು ಎನ್ನುವ ಮನಸ್ಸಾಗಿದೆ. ಇವರಲ್ಲಿ ಮಾನಸಿಕ ಭಾವನೆಯ ಪ್ರೀತಿಯ ಅರಿವು ಇಲ್ಲವಾಗಿದೆ. ಇದಕ್ಕೆ ವಿರುದ್ದವಾದ ಮನಸ್ಥಿತಿಯನ್ನು ಹೊಂದಿರುವರು ರಾಮ-ಸೀತೆಯರು, ಅವರ ಪ್ರೀತಿ ಕೇವಲ ದೇಹದ ಆಕರ್ಷಣೆಯದಲ್ಲ, ಅದು ಹೃದಯಗಳ ಬೆಸುಗೆ ಎಂಬ ಅರ್ಥ ಅವರ ಪ್ರೀತಿಗಿದೆ.

9. "ವಿನಯದಿಂದ, ಪ್ರೀತಿಯಿಂದ, ಒಲುಮೆ ಸಿದ್ದಿಸುತ್ತದೆಯೇ ಹೊರತು ಮಾಯ-ಮಂತ್ರ ಕುಟಿಲೋಪಾಯಗಳಿಂದಾಗಲಿ, ಬಲಾತ್ಕಾರದಿಂದಾಗಲಿ ಅಲ್ಲ"

ಈ ರಾಮನ ಮಾತಿನಲ್ಲಿ ಪ್ರೀತಿ ಎಂಬುದು ಕೇವಲ ದೈಹಿಕವಾದದ್ದಲ್ಲ, ಹೃದಯಗಳ ಬೆಸುಗೆಯಾದದ್ದು, ನಿಜವಾದ ಪ್ರೀತಿಯು ಈ ಪ್ರಪಂಚದಲ್ಲಿ ಯಾರಿಗೂ ಸುಲಭವಾಗಿ ಸಿಗುವುದಿಲ್ಲ ಎಂಬುದಾಗಿದೆ. ಈ ಮಾತು ಶುದ್ಧ ಪ್ರೀತಿಗೆ ಹಿಡಿದ ಕೈ ಕನ್ನಡಿಯಾಗಿದೆ.

ರಾವಣನ ಚಿತ್ರಪಟಕ್ಕೆ ಜೀವತುಂಬಿಸಿ ಕುಣಿಸಿ ಶೂರ್ಪನಖಿಯು ರಾಮ-ಸೀತೆಯರನ್ನು ದೈಹಿಕವಾಗಿ ಅಗಲಿಸಬಲ್ಲಳು, ದೂರವಾಗಿಸಬಲ್ಲಳು, ಆದರೆ ಅವರಲ್ಲಿರುವ ನಿಜವಾದ ಹೃದಯದಲ್ಲಿರುವ ಪ್ರೀತಿಯ ಬೆಸುಗೆಯನ್ನು ಒಡೆಯಲು ಶೂರ್ಪನಖಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಶೂರ್ಪನಖಿಗೆ ರಾಮನು ಸಿಗುವುದಿಲ್ಲ, ಇದಕ್ಕೆ ಉದಾಹರಣೆ ಎಂಬಂತೆ ವಾಲ್ಮೀಕಿ ಮಹರ್ಷಿಗಳು ಸೀತೆಗೆ ಹೇಳುವ ಮಾತು ಮುಖ್ಯವಾಗಿದೆ;

10. "ಸೀತೆ, ರಾಮನು ನಿನ್ನನ್ನು ಬಿಟ್ಟು ಬದುಕಿರಲಾರನು. ಅವನು ನಿನ್ನನ್ನು ಹುಡುಕಿಕೊಂಡು ಕಾಡಿಗೆ ಬಂದೇ ಬರುತ್ತಾನೆ" ಎಂದು ಹೇಳುವಾಗ ರಾಮನ ಮನಸ್ಸಿನ ತುಂಬ ಸೀತೆಯೇ ಇದ್ದಾಳೆ. ಬೇರೆ ಯಾರಿಗೂ ಸ್ಥಾನವನ್ನು ರಾಮನು ನೀಡುವುದಿಲ್ಲ ಎಂದಾಗಿದೆ.

ರಾಮನ ಪ್ರೀತಿಯ ಸಂಕೇತವಾಗಿ ಅವಳ ಎರಡು ಮಕ್ಕಳು ಸೀತೆಯ ಮಡಿಲಲ್ಲಿ ಆಡಿದರೆ, ಸೀತೆಯ ಚಿತ್ರವು ರಾಮನ ಎದೆಯ ಮೇಲೆ ಕುಳಿತು ಶಾಖ ಕೊಡುತ್ತದೆ. ಅಂದರೆ ರಾಮನು ಸಿಗುವವರೆಗೂ ಸೀತೆಗೆ ಮಕ್ಕಳಿಂದ ಅವರ ಚಿತ್ರವು ಸಂತೋಷ ನೀಡುತ್ತದೆ. ಹೀಗೆ ಹೇಳುವಾಗ ಬಿಂಬ ನಾಟಕದಲ್ಲಿ ಬರುವ ರಾಮ-ಸೀತೆಯರ ಪ್ರೀತಿ ಎಂಬುದು ಕೇವಲ ದೇಹದ ಆಕರ್ಷಣೆಗೆ ಸಂಬಂಧಿಸಿದ್ದಲ್ಲ, ಅದು ಹೃದಯಗಳಿಗೆ ಸಂಬಂಧಿಸಿದ ಪ್ರೀತಿಯ ಬೆಸುಗೆ ಎಂಬುದಾಗಿ ತಿಳಿಯುತ್ತದೆ. ಎಷ್ಟೇ ಕಾಲ ದೂರವಿದ್ದರೂ, ಯಾರೇ ಬಂದು ಬಲಾತ್ಕಾರಿಸಿದರೂ ಮನಸ್ಸಿನಲ್ಲಿರುವ ನಿಜವಾದ ಪ್ರೀತಿ ಕಾಯುತ್ತದೆ ಎಂಬುದು ರಾಮ-ಸೀತೆಯ ಪ್ರೀತಿಗೆ ಹಿಡಿದ ಕೈಗನ್ನಡಿಯಾಗಿದೆ, ಸಾಕ್ಷಿ ಯಾಗಿದೆ.

## ಅಡಿ ಟಿಪ್ಪಣಿಗಳು

| | | |
|---|---|---|
| 1. ಬಿಂಬ | ಚದುರಂಗ | ಪುಟ: 144 |
| 2. ಬಿಂಬ | -- | ಪುಟ: 164 |
| 3. ಬಿಂಬ | -- | ಪುಟ: 167 |
| 4. ಬಿಂಬ | -- | ಪುಟ: 193 |
| 5. ಬಿಂಬ | -- | ಪುಟ: 195 |
| 6. ಬಿಂಬ | -- | ಪುಟ: 200 |
| 7. ಬಿಂಬ | -- | ಪುಟ: 201 |
| 8. ಬಿಂಬ | -- | ಪುಟ: 167 |
| 9. ಬಿಂಬ | -- | ಪುಟ: 201 |
| 10. ಬಿಂಬ | -- | ಪುಟ: 195 |

# ಅಧ್ಯಾಯ – 6

## 'ಬಿಂಬ' ನಾಟಕದಲ್ಲಿ ಬರುವ ಕೊರವಂಜಿ ಪಾತ್ರದ ವಿಶಿಷ್ಟತೆ

## 'ಬಿಂಬ' ನಾಟಕದಲ್ಲಿ ಬರುವ ಕೊರವಂಜಿಯ ಪಾತ್ರದ ವಿಶಿಷ್ಟತೆ:

ಚದುರಂಗರು ಬರೆದ ಬಿಂಬ ನಾಟಕಕ್ಕೆ 18ನೇ ಶತಮಾನದ ಜಾನಪದ ಕವಯಿತ್ರಿ ಹೆಳವನಕಟ್ಟೆ ಗಿರಿಯಮ್ಮ ರಚಿಸಿರುವ "ಲವಕುಶರ ಕಾಳಗ" ಸ್ಫೂರ್ತಿಯಾಗಿದೆ. ಇದರಲ್ಲಿ ಬರುವ ಒಂದು ಪ್ರಸಂಗವನ್ನು ತೆಗೆದುಕೊಂಡು ಚದುರಂಗರು ಬಿಂಬ ನಾಟಕವನ್ನು ಬರೆದಿದ್ದಾರೆ. ಅಂದರೆ ಶೂರ್ಪನಖಿಯು ಕೊರವಂಜಿಯಾಗಿ ಬಂದು ಸೀತೆಯ ಕೈಯಿಂದ ರಾವಣನ ಚಿತ್ರಪಟವನ್ನು ಬರೆಸುವ ಭಾಗವನ್ನು ಮಾತ್ರ ಈ ನಾಟಕದಲ್ಲಿ ಉಪಯೋಗಿಸಿದ್ದಾರೆ.

ನಾಟಕಕಾರರು ತಮ್ಮ ಹೊಸ ಪ್ರಯೋಗವನ್ನು ಮಾಡಿರುವುದು ಶೂರ್ಪನಖಿಯ ಪಾತ್ರದ ರಚನೆಯಲ್ಲಿ. ಇಡೀ ನಾಟಕವೇ ಶೂರ್ಪನಖಿಯ ಪಾತ್ರದ ಮೇಲೆ ನಿಂತಿದೆ. ಇಡೀ ನಾಟಕದ ಕಥೆಗೆ, ಪಾತ್ರಗಳಲ್ಲಿ ಕಂಡುಬರುವ ವ್ಯತ್ಯಾಸಕ್ಕೆ ಶೂರ್ಪನಖಿಯೇ ಕಾರಣಳಾಗುತ್ತಾಳೆ. ಇಲ್ಲಿ ಶೂರ್ಪನಖಿಯ ಪಾತ್ರ ವಿಶಿಷ್ಟವಾದದ್ದು. ಮೂಲ ರಾಮಾಯಣವನ್ನು ಬರೆದ ವಾಲ್ಮೀಕಿಯು ತನ್ನ ಕಾವ್ಯದಲ್ಲಿ ಮಂಥರೆಯನ್ನು ತಿರಸ್ಕಾರ ಮನೋಭಾವನೆಯಿಂದ ನೋಡಿದ್ದನು. ಅವಳು ಹೆಣ್ಣಾಗಿದ್ದರೂ ಅವಳನ್ನು ಕುರೂಪಿಯಾಗಿ, ಕ್ರೂರಿಯಾಗಿ ಚಿತ್ರಿಸಲಾಗಿದೆ. ಒಟ್ಟಾರೆಯಾಗಿ ವಾಲ್ಮೀಕಿ ರಾಮಾಯಣದಲ್ಲಿ ಮಂಥರೆಯು ಎಲ್ಲರಿಂದಲೂ ತಿರಸ್ಕೃತವಾದವಳು, ಆದರೆ ಇದೇ ಕಥೆಯನ್ನು ಬರೆದ ಕುವೆಂಪುರವರು ತಮ್ಮ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಮಂಥರೆಯನ್ನು ಸಹಹಾನುಭೂತಿಯಿಂದ ಕಂಡಿದ್ದಾರೆ. ವಾಲ್ಮೀಕಿಯಿಂದ ತಿರಸ್ಕಾರಕ್ಕೆ ಒಳಗಾದ ಪಾತ್ರ ಕುವೆಂಪುರವರಲ್ಲಿ ತ್ಯಾಗಮಯಿ, ಕರುಣಾಮಯಿ ಎಂಬಂತೆ ಚಿತ್ರಿಸಲಾಗಿದೆ. ಇಲ್ಲಿ ಸಹಾನುಭೂತಿಯನ್ನು ಪಡೆದ ಪಾತ್ರವಾಗಿ ಮೂಡಿ ಬಂದಿದೆ. ಮಂಥರೆಯು ಹೊಸಜೀವ, ಚೈತನ್ಯ ಪಡೆಯುತ್ತಾಳೆ.

ಮೂಲ ರಾಮಾಯಣದ ತಿರಸ್ಕಾರಕ್ಕೆ, ಅವಕೃಪೆಗೆ ಪಾತ್ರವಾಗಿದ್ದ ಮಂಥರೆಯು "ಶ್ರೀರಾಮಾಯಣದರ್ಶನಂ"ನಲ್ಲಿ ಹೊಸ ಜೀವ ಪಡೆದಂತೆ, ಚಂದುರಂಗರು ಇಲ್ಲಿ ಶೂರ್ಪನಖಿಗೆ ಜೀವ ತುಂಬಿದ್ದಾರೆ. ಮೂಲ ರಾಮಾಯಣದ ವಾಲ್ಮೀಕಿಯು ಶೂರ್ಪನಖಿಯು ಕೆಟ್ಟವಳು, ರಾಕ್ಷಸಿ,

ನಿರ್ದಯಿ ಎಂಬುದಾಗಿ ಹೇಳಿದ್ದಾಳೆ. ಆದರೆ ಚದುರಂಗರು ವಾಲ್ಮೀಕಿ ರಾಮಾಯಣದಲ್ಲಿ ತಿರಸ್ಕೃತವಾದ ಪಾತ್ರಕ್ಕೆ. ಇಲ್ಲಿ ಜೀವಂತಿಕೆ ನೀಡಿದ್ದಾರೆ. ಅದಕ್ಕೆ ಶೂರ್ಪನಖಿಯ ಪಾತ್ರವೇ ಸಾಕ್ಷಿಯಾಗಿದೆ.

'ಬಿಂಬ' ನಾಟಕದಲ್ಲಿ ಚದುರಂಗರು ಶೂರ್ಪನಖಿಯು ಕೊರವಂಜಿಯ ವೇಷದಲ್ಲಿ ಬರುವುದನ್ನು ಚಿತ್ರಿಸಿದ್ದಾರೆ. 'ಬಿಂಬ' ನಾಟಕವು ನಡೆಯುವುದೇ ಶೂರ್ಪನಖಿಯಿಂದ. ರಾಮ-ಸೀತೆಯರು ಕಾಡಿನಲ್ಲಿ ವನವಾಸವನ್ನು ಅನುಭವಿಸುವಾಗ, ಅವರ ಮಧ್ಯೆ ರಾವಣನನ್ನು ತರುವುದೇ ಇವಳು. ನಂತರ ಸೀತೆಯನ್ನು ರಾವಣನು ಅಪಹರಿಸಲು ಕಾರಣಳು ಪ್ರೇರಕವಾದವಳು ಇವಳು. ನಂತರ ಹೇಗೋ ರಾಮನು ರಾವಣನನ್ನು ಕೊಂದು ಮತ್ತೆ ಅರಮನೆಗೆ ಬಂದಾಗ ನಂತರ ರಾವಣನ ಬಿಂಬದಿಂದ ರಾಮ-ಸೀತೆಯರು ದೂರವಾಗುವುದು ಇವಳಿಂದಲೇ. ಅವರ ನಡುವೆ ಸಂಬಂಧಗಳು ಅಲ್ಲೋಲ-ಕಲ್ಲೋಲವಾಗುವುದು ಸಹ ಕೊರವಂಜಿ ವೇಷದ ಶೂರ್ಪನಖಿಯಿಂದಲೇ.

ಶೂರ್ಪನಖಿಯು ಬೆಳೆದದ್ದು ಒಬ್ಬಂಟಿಯಾಗಿ, ತನ್ನ ಬಾಲ್ಯವನ್ನು ಒಬ್ಬಂಟಿಯಾಗಿ ಯಾರ ನಡುವೆಯೂ ಸ್ನೇಹವಿಲ್ಲದೆ ಬೆಳೆಯುತ್ತಾಳೆ. ಇವಳು ತಂದೆ-ತಾಯಿಯ ಆಶ್ರಯದಲ್ಲಿ ಬೆಳೆದವಳಲ್ಲ, ನಂತರ ಬಾಲ್ಯದಿಂದಲೂ ಒಬ್ಬಂಟಿಯಾಗಿ ಬೆಳೆದವಳು. ಅಣ್ಣಂದಿರ ಪ್ರೀತಿಯನ್ನು ಪಡೆಯಲಿಲ್ಲ. ಇವಳು ರಾಜಕುಮಾರಿಯಾಗಿದ್ದರಿಂದ ರಾವಣಾದಿಗಳು ಇವಳಿಗೆ ಪೂರ್ಣ ಸ್ವತಂತ್ರವನ್ನು ನೀಡದ್ದರೇ ಹೊರತು ಪ್ರೀತಿಯಿಂದ ಕಾಣಲಿಲ್ಲ. ಶೂರ್ಪನಖಿಯು ರಾಜಕುಮಾರಿಯಾಗಿದ್ದರೂ ಯಾವ ಪುರುಷನ ಕಡೆಗೂ ಆಕರ್ಷಿತಳಾದವಳಲ್ಲ. ಒಂದು ಸಾರಿ ಕಾಡಿನಲ್ಲಿ ರಾಮನನ್ನು ನೋಡುತ್ತಾಳೆ, ಅವಳು ಯಾರಿಗೂ ಮನಸ್ಸನ್ನು ನೀಡದೇ ಇದ್ದವಳು ರಾಮನನ್ನು ಕಂಡ ತಕ್ಷಣ ರಾಮನಿಗೆ ಆಕರ್ಷಿತಳಾಗುತ್ತಾಳೆ. ಆದರೆ ರಾಮನು ಮಾತ್ರ ಶೂರ್ಪನಖಿಗೆ ಸೋಲುವುದಿಲ್ಲ. ಶೂರ್ಪನಖಿಗೆ ಶಿಕ್ಷೆಯನ್ನು ಕೊಡಿಸುತ್ತಾನೆ. ಶೂರ್ಪನಖಿಯು ಶಿಕ್ಷೆಯನ್ನು ಅನುಭವಿಸುವಾಗ ಅಲ್ಲಿದ್ದ ಸೀತೆಯು ಗಹಗಹಿಸಿ ನಗುತ್ತಾಳೆ. ಈ ನಗುವನ್ನು ನೋಡಿದ ಶೂರ್ಪನಖಿಗೆ ಕೋಪ ಬರುತ್ತದೆ, ಅವಳ ತಿರಸ್ಕಾರದ ನಗುವಿನಿಂದಲೇ ರಾಮನು ನನ್ನನ್ನು ಶಿಕ್ಷಿಸಿದ್ದು, ಅದಕ್ಕಾಗಿ ಅವಳ ನಗುವಿಗೆ ತಕ್ಕ ಶಿಕ್ಷೆಯನ್ನು ಅನುಭವಿಸಲೇಬೇಕು ಎಂದು ಶೂರ್ಪನಖಿ ನಿರ್ಧರಿಸುತ್ತಾಳೆ. ಸೀತೆಯ ಮೇಲಿನ ದ್ವೇಷದಿಂದ, ರಾಮನ ಮೇಲಿನ ಪ್ರೀತಿಯಿಂದ ಶೂರ್ಪನಖಿಯು ಕೊರವಂಜಿಯ ವೇಷದಲ್ಲಿ

ಬರುತ್ತಾಳೆ. ಕೊರವಂಜಿಯು ಸೀತೆಯನ್ನು ಶಿಕ್ಷಿಸಲು, ರಾಮನನ್ನು ಸೇರಲೆಂದು ಅಯೋಧ್ಯೆಯನ್ನು ಪ್ರವೇಶಿಸುತ್ತಾಳೆ.

1. "ಹೆಣ್ಣುಮೇಳ:-

ನಡುವಿಗೆ ಒಡ್ಯಾಣ
ತುರುಬಿಗೆ ಮಲ್ಲಿಗೆ ದಂಡೆ
ಗಲ್ಲ ಕೂತ್ತಿದ ವೀಳ್ಯವು
ಕೊರಳಿಗೆ ಹವಳ ಸರ
ಮುತ್ತಿನ ಮಣಿಮಾಲೆ
ಕಾಲಿನ ಕಿರುಗೆಜ್ಜೆ
ಘಲಿರು ಘಲಿರು
ಕುಲುಕೂತ ಬಳುಕೂತ
ಬೆಳೆಸಿಹಳು ಪಾದಗಳ
ಸೀತೆಯಂತಃಪುರಕ್ಕೆ
ವಿಧಿಯಂತೆ ಹೊತ್ತು ಹರಕೆ"

ಚದುರಂಗರು ತಮ್ಮ 'ಬಿಂಬ' ನಾಟಕದಲ್ಲಿ ಶೂರ್ಪನಖಿಯ ಮಾರುವೇಷದ ಕೊರವಂಜಿಯನ್ನು ಪ್ರವೇಶಿಸುವುದು ಹೀಗೆ, ಕೊರವಂಜಿಯು ತನ್ನ ಸೇಡನ್ನು ತೀರಿಸಿಕೊಳ್ಳಲು ಅಯೋಧ್ಯೆ ನಗರಕ್ಕೆ ಬರುತ್ತಾಳೆ, ಆಗ ನಾಟಕದಲ್ಲಿ ಬರುವ ಹೆಣ್ಣು ಮೇಳವೂ ಈ ರೀತಿಯಲ್ಲಿ ಹೇಳುತ್ತದೆ. ಕೊರವಂಜಿಯ ವೈಯ್ಯಾರ, ಅವಳ ವೇಷಭೂಷಣ, ಅವಳ ನಡವಳಿಕೆಯನ್ನು ತಿಳಿಸುತ್ತಾರೆ. ನಂತರ ಕೊರವಂಜಿಯು ಅಯೋಧ್ಯೆಗೆ ಬಂದಿದ್ದು, ಸೀತೆಯ ಅಂತಃಪುರಕ್ಕೆ ಬಂದಿದ್ದು ಒಂದು ವಿಧಿಯಂತೆ ಎಂದಿದ್ದಾರೆ. ಸೀತೆಯ ವಿಧಿಯನ್ನು ಇಲ್ಲಿ ಕೊರವಂಜಿಯ ನಿರ್ಧರಿಸುತ್ತಾಳೆ. ಕೊರವಂಜಿಯಿಂದ ಸೀತೆಗೆ ಕೇಡು ಉಂಟಾಗುತ್ತದೆ ಎಂಬುದನ್ನು ಹೆಣ್ಣುಮೇಳವು ಸಾಂಕೇತಿಕವಾಗಿ ಮೊದಲೇ ಸೂಚಿಸುತ್ತದೆ.

ಕೊರವಂಜಿಯು ಯಾರಿಗೂ ಪ್ರವೇಶವಿಲ್ಲದ ಸೀತೆಯ ಅಂತಃಪುರಕ್ಕೆ ಎಲ್ಲರನ್ನು ಕಣ್ಣು ತಪ್ಪಿಸಿ ಪ್ರವೇಶಿಸುತ್ತಾಳೆ. ಆಗ ಕೊರವಂಜಿಯನ್ನು ಸೀತೆಯ ಸೇವಕಿಯಾದ ಚೇಟಿಯು ತಡೆಯುತ್ತಾಳೆ. ಇವರ ನಡುವೆ ಮಾತುಕತೆ ನಡೆಯುವಾಗ ಸೀತೆಯು ಅಲ್ಲಿಗೆ ಬರುತ್ತಾಳೆ.

2. " ಸೀತೆ: ಯಾರವ್ವ ನೀನು
ಬಂದಿರುವೆ ಏಕಿಲ್ಲಿ
ಈ ವೇಷದಲ್ಲಿ

ಕೊರವಿ: ವೃತ್ತಿಗೊಪ್ಪುವ ವೇಷ
ಕಣಿ ಹೇಳುವುದೇ ಕಸುಬು
ಕೈಲಾಸ ವೈಕುಂಠ
ಬ್ರಹ್ಮ ಲೋಕಗಳ
ಬಳಸಿ ಬಂದಿಹೆ ನಾನು
ನಿನಗೊಂದು ಶುಭವ ತಂದಿಹೆನು

ಸೀತೆಯು ಕೊರವಂಜಿಯನ್ನು ನೋಡಿ ಆಶ್ಚರ್ಯವಾಗಿ 'ಯಾರು ನೀನು? ಈ ವೇಷದಲ್ಲಿ ಹೇಗೆ ಬಂದೆ ಇಲ್ಲಿಗೆ' ಎಂದು ಪ್ರಶ್ನಿಸುತ್ತಾಳೆ. ಆ ಕೊರವಂಜಿಯು ತನ್ನ ಉಡುಪು ನೋಡಿದರೆ ತಿಳಿಯುತ್ತದೆ ನಾನೊಬ್ಬಳು ಕಣಿ ಹೇಳುವಳು ಎಂದು, ನಾನು ಸಾಮಾನ್ಯವಲ್ಲ, ಇಡೀ ಕೈಲಾಸ, ವೈಕುಂಠ ಬ್ರಹ್ಮಲೋಕ ಹೀಗೆ ತ್ರಿಮೂರ್ತಿಗಳ ಲೋಕಗಳೆಲ್ಲವನ್ನು ಸುತ್ತಿ ಬಂದಿದ್ದೇನೆ ಎಂದು ಹೇಳುತ್ತಾಳೆ. ಕೊರವಂಜಿಯು ತನ್ನನ್ನು ನಿಜವಾದ ಕೊರವಂಜಿ ಎಂದು ನಂಬುವಂತೆ ಸೀತೆಗೆ ಹೇಳುತ್ತಾಳೆ. ಸೀತೆಗೂ ಶುಭವಾದ ಸುದ್ದಿ ಎಂದಾಗ ಕೊರವಂಜಿಯ ಮಾತನ್ನು ಕೇಳಬೇಕು ಎನಿಸುತ್ತದೆ. ಶೂರ್ಪನಖಿಯು ತನ್ನ ಮಾತಿನಿಂದಲೇ ಸೀತೆಯನ್ನು ತನ್ನ ಬಲೆಗೆ ಬೀಳಿಸಿಕೊ ಳ್ಳುತ್ತಾಳೆ.

ಕೊರವಂಜಿಯು ಸೀತೆಗೆ ಒಳ್ಳೆಯ ಸುದ್ದಿ ಹೇಳುವೆನು ಎಂದಾಗ ಸೀತೆಯು ನಿನ್ನನ್ನು ನಂಬಲು ಒಂದು ನಿಜವಾದ ಆಧಾರ ಬೇಕು ಎನ್ನುತ್ತಾಳೆ. ಆಗ ಕೊರವಂಜಿಯು ಸೀತೆಗೆ ನೀನು ಜನಕರಾಜನ ಸಾಕಿದ ಮಗಳು, ಭೂಮಿಯ ಮಗಳು, ನಿನ್ನ ಗಂಡ ಶ್ರೀರಾಮ, ಗಂಡನಿಲ್ಲದ ವೇಳೆ

ರಾಕ್ಷಸ ರಾವಣ ನಿನ್ನನ್ನು ಅಪಹರಿಸಿದನು ಎಂದು ಹೇಳುತ್ತಾಳೆ. ಆಗ ಸೀತೆಯು ಪೂರ್ಣವಾಗಿ ಕೊರವಂಜಿಯನ್ನು ನಂಬುತ್ತಾಳೆ. ಸೀತೆಗೆ ಬೇಕಾಗಿರುವುದು, ಹಿಂದೆ ನಡೆದದ್ದು ಅಲ್ಲ, ಮುಂದೆ ನಡೆಯುವುದು, ತಾನು ಹೇಗೆ ಬದುಕುತ್ತೇನೆ ಎಂದು ತಿಳಿಯುವ ಕುತೂಹಲ ಅವಳಿಗಿದೆ. ಹಿಂದಿನದ್ದು ಹಳೆಯ ಗಾಯಗಳು ಅಂದರೆ ದುಃಖದಿಂದ, ಜೀವನದಲ್ಲಿ ಮರೆಯಲಾಗದ ಕ್ಷಣಗಳು, ದುಃಖದ ದಿನಗಳು. ಆದ್ದರಿಂದ ಹಳೆಯದನ್ನು ಕೆದಕಬೇಡ, ಮುಂದೆ ಇರುವ ಶುಭ ಸುದ್ದಿಯನ್ನು ತಿಳಿಸು ಎನ್ನುತ್ತಾಳೆ.

3. " ಕೊರವಿ: ನಡೆದದ್ದ ನೆನೆವುದಕ್ಕೆ
ಅಂಜಿಕೆಯದೇಕೆ?
ದುಃಖವನು ಅನುಭವಿಸದೆಯೆ
ಸುಖದ ಬೆಲೆಯಂಬುದುಂಟೇ?

ನಿನ್ನ ನಂಬಿಸಲೆಂದು
ತಿಳಿಸಿದೆನು ಹಳೆಯ ಕಥೆ
ತೊರೆದು ಬಿಡು ವ್ಯಥೆಯ

ಇಂದಿನೀ ಭೋಗ
ಮುಂದಕ್ಕಿನ್ನೂ ವೈಭೋಗ
ಸತ್ಯವಿದು ಸತ್ಯವಿದು
ಕೊರವಿ ಹೇಳುವ ಮಾತು

ಆಡುತಿಹೆ
ಎರಡು ಕಂದಮ್ಮಗಳು
ನಿನ್ನ ಗರ್ಭದೊಳಗೆ
ನಿನ್ನ ಬಾಳ್ವೆಗೆ
ನಲ್ಮೆ
ತರಲಿರುವ
ಕಂದಮ್ಮಗಳು, ಕುಡಿಗಳು."

ಶೂರ್ಪನಖಿಯು ಸೀತೆಯನ್ನು ತನ್ನ ಬಲೆಗೆ ಬೀಳಿಸಿಕೊಳ್ಳಲು ಹಿಂದೆ ನಡೆದದ್ದು ಹೇಳುತ್ತಾಳೆ. ನಂತರ ಮುಂದೆ ನಿನ್ನ ಬಾಳಿಗೆ ಸಂತೋಷ ತರಲು ಎರಡು ಮಕ್ಕಳು ಆಗುತ್ತವೆ ಎನ್ನುತ್ತಾಳೆ. ಹೀಗೆ ಹೇಳಿ ತನ್ನ ಮಾತನ್ನು ಸೀತೆಯು ಕೇಳುವಂತೆ ಮಾಡುತ್ತಾಳೆ. ಇದು ಚ ದುರಂಗರು ತಂದಿರುವ ವಿನೂತನ ಪ್ರಯೋಗವಾಗಿದೆ. ಕೊರವಂಜಿಯು ಹೀಗೆ ಹೇಳಿದಾಗ ಸೀತೆಯು ಸಂತೋಷ ಪಡುತ್ತಾಳೆ. ನಂತರ ಸಂತೋಷಕ್ಕೆ ಕಾರಣವಾದ ಸುದ್ದಿಯನ್ನು ಹೇಳಿದ ಕೊರವಂಜಿಗೆ ಏನಾದರೂ ಕೊಡಬೇಕು ಎನಿಸಿ ದವಸ ಧಾನ್ಯಗಳನ್ನು ಕೊಡಲು ಹೋಗುತ್ತಾಳೆ. ಆದರೆ ಕೊರವಂಜಿಯು ಎಲ್ಲವನ್ನೂ ನಿರಾಕರಿಸುತ್ತಾಳೆ. ಇಲ್ಲಿ ಕೊರವಂಜಿಗೆ ಬೇಕಾಗಿರುವುದು ದವಸದಾನ್ಯವಲ್ಲ. ಸೀತೆಯು ಕೊಡುತ್ತೇನೆ ಎಂಬ ಮಾತನ್ನು ತನ್ನ ತಂತ್ರಕ್ಕೆ ಬಳಸಿಕೊಳ್ಳುವುದಾಗಿದೆ.

4. "ಕೊರವಿ : ಮುತ್ತುಗಳ ನಾನೊಲ್ಲೆ
ರತುನಗಳ ನಾನೊಲ್ಲೆ
ಕನಕ ಪೀತಾಂಬರವು
ಮೊದಲೇ ಬೇಡ

ಸೀತೆ : ಮುತ್ತುಗಳು ಬೇಡ
ರತುನಗಳು ಬೇಡ
ಮತ್ತೇನು ಬೇಕೇ ನಿನಗೆ
ಹಟಮಾರಿ ಕೊರವಿ?

ಕೊರವಿ : ಬೇಕಿರುವುದೊಂದು
ಈ ವಿಶ್ವದಲ್ಲಿ
ಲಂಕೆಯಲ್ಲಿರುವಾಗ
ನೋಡಿರುವೆ ರಾವಣನ
ಬರೆದುಕೊಡುವೆಯ ಹೇಳು
ಆ ಪುರುಷಸಿಂಹನ ರೂಪ
ಆದ ನೋಡಿ ಸಂತಸ ಪಡುವೆ
ಬದುಕಿರುವ ತನಕ"

ಕೊರವಂಜಿಯು ಸೀತೆಗೆ ಒಳ್ಳೆಯ ಸುದ್ದಿಯನ್ನು ಹೇಳಿದ್ದರಿಂದ ಸೀತೆಗೆ ಶ್ರೀರಾಮನ ಆಣೆ ಏನು ಬೇಕಾದರೂ ಕೇಳು ಕೊಡುವೆ ಎಂದು ಹೇಳುತ್ತಾಳೆ. ಕೊರವಂಜಿಯು ತನಗೆ ರಾವಣನ ಚಿತ್ರ ಬರೆದುಕೊಡು, ನಾನು ಬದುಕಿರುವವರೆಗೂ ಸಂತೋಷದಿಂದ ಇರುತ್ತೇನೆ ಎಂದು ಹೇಳುತ್ತಾಳೆ. ಆದರೆ ಸೀತೆಯು ರಾವಣನನ್ನು ನೋಡಿಲ್ಲ ಎಂದು ಎಷ್ಟು ಹೇಳಿದರೂ ಬಿಡದ ಕೊರವಂಜಿಯು ಸೀತೆಯ ಕೈಯಿಂದ ರಾವಣನ ಪಾದಗಳ ಚಿತ್ರವನ್ನು ಬರೆಸುತ್ತಾಳೆ. ಸೀತೆಯು ಕೊಟ್ಟ ಮಾತಿನಂತೆ ಬರೆದುಕೊಡಬೇಕು, ಆದರೂ ಅವಳ ಮನಸ್ಸಿನಲ್ಲಿ ಬರೆಯುವುದೋ-ಬೇಡವೋ ಎಂಬ ಜಿಜ್ಞಾಸೆ ಮೂಡುತ್ತದೆ. ಕೊನೆಗೆ ರಾವಣನ ಪಾದಗಳ ಚಿತ್ರವನ್ನು ಬಿಡಿಸುತ್ತಾಳೆ. ಆಗ ಸೀತೆ ಕೋಪದಿಂದ ನೀನು ಹೊರಡು ಎಂದಾಗ ಮತ್ತೆ ಕೊರವಿಯು ಸೀತೆಯನ್ನು ರಾವಣನ ಪೂರ್ಣ ಚಿತ್ರವನ್ನು ಬರೆಯಬೇಕು ಎಂದು ಬೇಡುತ್ತಾಳೆ.

5. "ಸೀತೆ: ಏಕೆ ಕೊಡುವೆಯೆ ಕೊರವಿ
ಚಿತ್ರಹಿಂಸೆ
ಪಾದ ಗಳನಲ್ಲದೆ ಕಂಡಿಲ್ಲ
ಬೇರೆನು ನಾನು.

ಭಾಗವತ : ಕೊರವಿ ಒಡ್ಡದ ಬಲೆಗೆ
ಸಿಕ್ಕಿಬಿದ್ದಳು ಸೀತೆ
ಕೊರವಿ ಬಯಸಿದ ರೀತಿ
ಕಾಲುಗಳ ರಚಿಸಿ

ಕೊರವಿ: ಪಾದಗಳ ಆಕಾರಕ್ಕೆ ಆಹಾ
ಹೇಳಿ ಮಾಡಿಸಿದಂಥ
ಕಾಲುಗಳು
ನೀ ಜಾಣೆ, ನೋಡೋಣ
ಬರೆದು ಬಿಡು ಇನ್ನು
ಹೊಟ್ಟೆ, ಎದೆ ಕೈಗಳನ್ನು"

ಕೊರವಂಜಿ ವೇಷದ ಶೂರ್ಪನಖಿಯು ಸೀತೆಯನ್ನು ತನ್ನ ಬಲೆಗೆ ಬೀಳಿಸಿಕೊಳ್ಳಲು ಸಾಕಷ್ಟು ಪ್ರಯತ್ನ ಮಾಡುತ್ತಾಳೆ. ಕೊನೆಗೆ ಯಶಸ್ವಿಯೂ ಆಗುತ್ತಾಳೆ. ಕೊರವಂಜಿಯು ಸೀತೆಗೆ ಬಲವಂತವಾಗಿ ಒತ್ತಾಯ ಮಾಡಿ ರಾವಣನ ಚಿತ್ರವನ್ನು ಬರೆಸುತ್ತಾಳೆ. ಆದರೆ ಏನೂ ತಿಳಿಯದ ಸೀತೆಯು ರಾವಣನ ಚಿತ್ರಪಟವನ್ನು ಬರೆದು ಕಷ್ಟಕ್ಕೆ ಸಿಲುಕುತ್ತಾಳೆ. ಶೂರ್ಪನಖಿಯು ಸೀತೆಯ ಮೇಲಿರುವ ಸೇಡನ್ನು ತೀರಿಸಿಕೊಳ್ಳಲು ಬಂದಿದ್ದಾಳೆ. ಹಾಗೆಯೇ ಸೀತೆಯ ಕೈಯಿಂದ ರಾವಣನ ಚಿತ್ರಪಟವನ್ನು ಬರೆಸುತ್ತಾಳೆ. ತಾನು ಬಂದಂತಹ ಕೆಲಸ ಮುಗಿಯುತ್ತದೆ. ಇದು ಚದುರಂಗರು ಬಿಂಬ ನಾಟಕದಲ್ಲಿ ತಂದಿರುವ ಕೊರವಂಜಿಯ ಪಾತ್ರ ವಿಶೇಷವಾಗಿದೆ. ಮೂಲ ವಾಲ್ಮೀಕಿ ರಾಮಾಯಣದಲ್ಲಿ ಸೀತೆಯು ರಾವಣನ ಚಿತ್ರಪಟವನ್ನು ಬರೆಯುವ ಪ್ರಸಂಗವು ಬರುವುದೇ ಇಲ್ಲ. ಇನ್ನು ಕುವೆಂಪುರವರ "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯದಲ್ಲೂ ಸಹ ಈ ಕಲ್ಪನೆ ಬರುವುದಿಲ್ಲ. ಆದರೆ ಚದುರಂಗರು ತಮ್ಮ ನಾಟಕದಲ್ಲಿ ಈ ಪ್ರಸಂಗವನ್ನು ತಂದಿದ್ದಾರೆ. ವಾಲ್ಮೀಕಿ ರಾಮಾಯಣದಲ್ಲಿ ರಾಮ ಮತ್ತು ಸೀತೆಯರ ಮನಸ್ಸಿನಲ್ಲಿ ಬರುವ ವೈಷಮ್ಯಕ್ಕೆ ಅಗಸನ ಮಾತು ಕಾರಣವಾಗುತ್ತದೆ. ಇಲ್ಲಿ ಚದುರಂಗರು ರಾವಣನ ಚಿತ್ರಪಟವನ್ನು ಅವರಿಬ್ಬರ ಮನಸ್ಸಿನ ನಡುವೆ ಕಂದಕವನ್ನು ತರುವಲ್ಲಿ ಬಳಸಿದ್ದಾರೆ. ಹಾಗೆಯೇ ಕೊರವಂಜಿಯು ತನ್ನ ಸೇಡನ್ನು ತೀರಿಸಿಕೊಳ್ಳಲು ಚಿತ್ರಪಟ, ಅಂದರೆ ಸೀತೆ ಬರೆದುಕೊಟ್ಟ ರಾವಣನ ಚಿತ್ರಪಟವು ಸಹಾಯಕವಾಗುತ್ತದೆ. ಸೀತೆಯು ಚಿತ್ರಪಟ ಬರೆದುಕೊಟ್ಟು ಕಷ್ಟದಲ್ಲಿ ಸಿಲುಕುತ್ತಾಳೆ.

ಕೊರವಂಜಿಯು ಸೀತೆಯ ಕೈಯಿಂದ ರಾವಣನ ಚಿತ್ರಪಟವನ್ನು ಬರೆಸಿ ಆ ಪಟಕ್ಕೆ ಜೀವ ತುಂಬುತ್ತಾಳೆ. ಆ ಜೀವ ತುಂಬಿದ ಚಿತ್ರಪಟವು ಸೀತೆಯನ್ನು ಬಿಡದೇ ಅಂಟಿಕೊಳ್ಳುತ್ತದೆ. ಆಗ ಸೀತೆಯು ಇವಳು ನಿಜವಾದ ಕೊರವಂಜಿ ಅಲ್ಲ, ಇವಳು ಬೇರಾರೊ ಇರಬೇಕು ಎಂದು ಕೊರವಂಜಿಯನ್ನು ಕೇಳುತ್ತಾಳೆ. ಆಗ ಕೊರವಂಜಿಯು ತಾನು ನಿಜವಾದ ಕೊರವಂಜಿ ಅಲ್ಲ, ನಾನು ಶೂರ್ಪನಖಿ ಎಂದು ಹೇಳುತ್ತಾಳೆ. ತನ್ನ ನಿಜರೂಪವನ್ನು ತಿಳಿಸಿ ತಾನು ಏಕೆ ನಿನ್ನ ಕೈಯಿಂದ ಚಿತ್ರಪಟವನ್ನು ಬರೆಯಿಸಿದೆ ಎಂಬುದನ್ನು ತಿಳಿಸುತ್ತಾಳೆ. ಹಿಂದೆ ರಾಮ ಲಕ್ಷಣ ಸೀತೆಯು ದಂಡಕಾರಣ್ಯದಲ್ಲಿ ವಾಸವಾಗಿದ್ದಾಗ ನಾನು ಬಂದಿದ್ದೆ, ನಾನು ಕಾಡಿನಲ್ಲಿ ಒಂಟಿಯಾಗಿ ಅಲೆದಾಡುತ್ತಿದ್ದೆ, ಅಲ್ಲಿ ನಾನು ಯಾವ ಪುರುಷನಿಗೂ ಆಕರ್ಷಿತಳಾಗದೇ ಇದ್ದವಳು. ಆದರೆ ಕಾಡಿನಲ್ಲಿ ರಾಮನನ್ನು ಕಂಡೆ, ಕಂಡಾಕ್ಷಣ ಅವನಿಗೆ ನಾನು ಮನಸೋತೆ, ತನಗೆ ರಾಮ ಬೇಕು, ತಾನು ಮೋಹಿಸಬೇಕು ಎಂಬ ಬಯಕೆಯು ನನ್ನಲ್ಲಿ ಮೂಡಿತು. ಆಗ ನಾನು ರಾಮನನ್ನು

ಒಲಿಸಿಕೊಳ್ಳಲು ಬಂದೆನು, ಅಲ್ಲಿ ನೀನು ರಾಮನ ಬಳಿಯಿದ್ದೆ, ಆದ್ದರಿಂದ ನೀನಿದ್ದ ಕಾರಣ ರಾಮನು ನನಗೆ ಒಲಿಯಲಿಲ್ಲ. 'ನೀನಿರದೇ ಇದ್ದರೆ ರಾಮನು ನನ್ನ ಯೌವ್ವನಕ್ಕೆ ಸೋಲುತ್ತಿದ್ದನೋ ಏನೋ ಎಂದು ಹೇಳುತ್ತಾಳೆ.' ರಾಮನು ನನ್ನನ್ನು ತಿರಸ್ಕರಿಸುವ ಮುನ್ನ ನಿನ್ನ ಮುಖ ನೋಡಿದ, ಆಗ ನೀನು ನನ್ನನ್ನು ತಿರಸ್ಕಾರ ಭಾವನೆಯಿಂದ ನೋಡುತ್ತಿದ್ದೆ, ನಗುತ್ತಿದ್ದೆ. ಆ ನಿನ್ನ ತಿರಸ್ಕಾರ ನಗುವಿನಿಂದ ರಾಮನು ನನ್ನನ್ನು ಮೋಹಿಸದೇ ತಿರಸ್ಕಾರ ಮಾಡುವಂತೆ ಪ್ರಚೋದಿಸಿತು. ನಂತರ ಲಕ್ಷಣನು ನಾನು ನಿರಪರಾಧಿಯಾಗಿದ್ದಾಗಲೂ ನನ್ನನ್ನು ಶಿಕ್ಷಿಸಿದನು. ನನ್ನನ್ನು ಲಕ್ಷ್ಮಣನು ದಂಡಿಸುತ್ತಿದ್ದಾಗ ನೀನು ಸುಮ್ಮನಿದ್ದೆ, ನೀನು ನನ್ನಂತೆ ಹೆಣ್ಣು, ಹೆಣ್ಣಿಗೆ ಆಗುವ ನೋವನ್ನು ಅರಿತವಳು. ನಿನಗೂ ನನ್ನಂತೆ ಹೆಣ್ತನ ಇದ್ದು, ಒಂದು ಹೆಣ್ಣು ಮೋಹಿಸಿ ಬಂದಾಗ ತನ್ನಂತೆ ಅವಳ ಹೆಣ್ಣು ಎಂದು ಸಹಾನುಭೂತಿ ತೋರಲಿಲ್ಲ, ಬದಲಾಗಿ ಲಕ್ಷ್ಮಣನು ನನ್ನನ್ನು ದಂಡಿಸುವಾಗ ನೀನು ಗಹಗಹಿಸಿ ನಗುತ್ತಿದ್ದೆ. ನೀನು ನಗುನಗುತ್ತಾ ನನ್ನ ಮನಸ್ಸನ್ನು ಚುಚ್ಚಿ ಚುಚ್ಚಿ ನೋಯಿಸಿದೆ. ಇದರ ನೋವನ್ನು ಅನುಭವಿಸಿ ತನ್ನ ಒಳಗೆ ಸುಟ್ಟುಹೋದೆನು. ನನ್ನ ಕಣ್ಣಿನಲ್ಲಿ ಧಾರೆ ಸುರಿಯಿತು. ಆಗ ನಿನ್ನನ್ನು ಕಂಡು ಅತಿಯಾದ ರೋಷ ಉಂಟಾಗುತ್ತಿತ್ತು. ಅಂದು ನೀನು ನನ್ನ ಎದೆಯಲ್ಲಿ ಮಾಡಿದ ಗಾಯದಿಂದ ಈಗಲೂ ರಕ್ತ ಸುರಿಯುತ್ತಲೇ ಇದೆ. ನೋವು ಆಗುತ್ತಲೇ ಇದೆ. ಇಂದಿಗೂ ನೀನು ಅಂದು ನಗುತ್ತಿದ್ದ ಕೆಟ್ಟ ನಗುವನ್ನು ನಾನು ಇನ್ನೂ ಮರೆಯಲು ಸಾಧ್ಯವಾಗಿಲ್ಲ. ಆದ್ದರಿಂದಲೇ ಆ ನಿನ್ನ ಕೆಟ್ಟನಗು ನನಗೆ ಪ್ರೇರಕವಾಗಿತ್ತು. ನಾನು ಲಂಕೆಗೆ ಮರಳಿದಾಗ ಅಣ್ಣನಾದ ರಾವಣನಿಗೆ ನಿನ್ನ ಮೇಲೆ ಮೋಹ ಉಂಟಾಗುವಂತೆ ಪ್ರಚೋದಿಸಿದೆನು. ನಾನು ನಿನ್ನ ಚೆಲುವಿನ ಬಗ್ಗೆ ಹೊಗಳಿದಾಗ ರಾವಣನು ನಿನ್ನ ಕಾಣುವ ಹಂಬಲದಿಂದ ಹುಚ್ಚು ಹಿಡಿದವನಂತೆ ಆದನು. ತನಗೆ ಸೀತೆಯು ಬೇಕೇಬೇಕು, ತಾನು ಪಡೆಯಲೇ ಬೇಕು ಎಂಬ ಬಯಕೆ ರಾವಣನಲ್ಲಿ ಮೂಡಿಸಿದೆನು.

6. "ಶೂರ್ಪನಖಿ: ತರಬೇಕು ತರುಣಿಯಳ
ಕಾಮನ ಮುಂಗೈ ಅರಗಿಣಿಯಂಥವಳ
ಎಂಥವಳೆಂಥವಳ

ರಾವಣ: ನಿಜವೇನೆ ತಂಗಿ?
ಅಂಥ ಚೆಲುವೆಯೇನೆ
ಜಾನಕಿದೇವಿ

ಅಂಥ ಚೆಲುವೆಯೇನೇ?
ಕುಡಿನೋಟ ಒಂದರಲೆ
ಜಗವನ್ನೆ ಮರೆಸುವ
ಮೋಹದ ಮಮಕಾಂತೆ
ಮಂಡೋದರಿಗಿಂತ
ಅಂಥ ಚೆಲುವೆಯೇನೆ
ಜಾನಕಿದೇವಿ
ಅಂಥ ಚೆಲುವೆಯೇನೆ"........

ನಾನು ಹೇಳಿದ್ದನ್ನು ಕೇಳಿದ ರಾವಣನು ನಿನ್ನನ್ನು ಪಡೆಯಬೇಕೆಂಬ ಬಯಕೆಯಿಂದ ನಿನ್ನನ್ನು ಅಪಹರಿಸಿದ್ದು. ನಿನಗೆ ಕಷ್ಟವು ಒದಗಿದ್ದು, ಗಂಡನಾದ ರಾಮನಿದ್ದರೂ ಒಂಟಿಯಾಗಿ ಬದುಕಿದ್ದು, ಯಾತನೆ ಅನುಭವಿಸಿದ್ದು, ಇದಕ್ಕೆಲ್ಲ ಕಾರಣ ಅಂದು ನೀನು ನನ್ನ ಮುಂದೆ ಗಹಗಹಿಸಿ ನಕ್ಕಿದ್ದರ ಪ್ರತಿಫಲ. ಹಾಗೆಯೇ ಇಂದು ಸಹ ಅಂದು ಬಯಸಿದ ರಾಮನು ನನಗೆ ಸಿಗದಿದ್ದವನು ನಿನಗೂ ಸಿಗಬಾರದು, ಆದ್ದರಿಂದ ನಿಮ್ಮಿಬ್ಬರ ನಡುವೆ ಪ್ರೀತಿಗೆ ಬದಲಾಗಿ ಅನುಮಾನಗಳು ಮೂಡಲು ಈ ನೀನೇ ಬರೆದ ರಾವಣನ ಚಿತ್ರಪಟವು ಕಾರಣವಾಗುತ್ತದೆ. ನನಗೆ ಸಿಗದ ಪ್ರೀತಿ ನಿನಗೂ ಸಿಗಬಾರದು, ಆದ್ದರಿಂದಲೇ ನಾನು ಕೊರವಂಜಿಯ ವೇಷದಲ್ಲಿ ಬಂದು ನಿನ್ನ ಕೈಯಿಂದಲೇ ರಾವಣನ ಚಿತ್ರಪಟವನ್ನು ಬರೆಸಿದ್ದು, ಇನ್ನು ಆ ಚಿತ್ರಪಟಕ್ಕೆ ಜೀವ ಬಂದು ನಿನ್ನ ಬಳಿಯೇ ಇರುತ್ತದೆ. ಅದನ್ನು ಹರಿದರೂ, ಸುಟ್ಟರೂ, ನೀರಿನಲ್ಲಿ ಮುಳುಗಿದರೂ ಏನೂ ಆಗಬಾರದೆಂದು ಶಾಪನೀಡುತ್ತೇನೆ. ಅದು ನಿನಗೆ ಅಂಟಿಕೊಂಡಿರುತ್ತದೆ, ನಂತರ ರಾಮ ಮತ್ತು ನಿನ್ನ ನಡುವೆ ಸಂಬಂಧ ಕೆಡುತ್ತದೆ. ಅಂದಿನ ನಿನ್ನ ನಗುವಿಗೆ ಇದೇ ಪ್ರತೀಕಾರ ಎಂದು ಹೇಳಿ ಶೂರ್ಪನಖಿಯು ಹೊರಟು ಹೋಗುತ್ತಾಳೆ. ಇಲ್ಲಿ ತಾನು ಮೋಹಿಸಿದ್ದು ಸಿಗದಿದ್ದಾಗ ಸಿಡಿದೇಳುವುದು ಉಚಿತವಾಗಿದೆ. ಹಾಗೆಯೇ ಇಲ್ಲಿ ಶೂರ್ಪನಖಿಯು ಮಾಡುತ್ತಾಳೆ. ಶೂರ್ಪನಖಿಯು ದುಷ್ಟ ನಗುವಿಗೆ ಇದು ನನ್ನ ಪ್ರತಿಕಾರ. ಇದರಿಂದ ನೀನು ಮುಕ್ತಳಾಗುವುದು ದುಸ್ಸಾಧ್ಯ, ಈ ಮಾತುಗಳಲ್ಲಿ ಜೀವನದಲ್ಲಿ ಪ್ರೀತಿ, ಅನುಕಂಪ, ಮಮತೆಗಳನ್ನು ಅನುಭವಿಸಿದ ಶೂರ್ಪನಖಿ, ತಾನು ತಿರಸ್ಕಾರಗಳಿಗೆ ಗುರಿಯಾದಾಗ ಕೆರಳಿದ್ದು

ಸಹಜವೇ ಎನಿಸುತ್ತದೆ. ಇಲ್ಲಿ ಚದುರಂಗರು ವಾಲ್ಮೀಕಿ ರಾಮಾಯಣದ ಶೂರ್ಪನಖಿ ಪಾತ್ರಕ್ಕಿಂತ ಹೊಸ ರೀತಿಯಲ್ಲಿ ಕಂಡಿದ್ದಾರೆ. ಇದೊಂದು ಇವರ ವಿಶೇಷವಾಗಿದೆ.

ಶೂರ್ಪನಖಿಯು ರಾವಣನ ಚಿತ್ರಪಟಕ್ಕೆ ಜೀವ ತುಂಬಿ ಹೋದಾಗ ಆ ಪಟವು ಅವಳನ್ನು ಬಿಡುವುದಿಲ್ಲ. ಇದನ್ನು ಯಾರಾದರೂ ಕಂಡರೆ ಏನು ಗತಿ ಎಂದು ತನ್ನ ಮಂಚದ ಹಾಸಿಗೆಯ ಅಡಿ ಇಡುತ್ತಾಳೆ. ಸೀತೆಯ ಅಂತಃಪುರವನ್ನು ರಾಮನು ಪ್ರವೇಶಿಸುತ್ತಾನೆ. ಮಂಚದ ಮೇಲೆ ಕುಳಿತುಕೊಳ್ಳುತ್ತಾನೆ. ಆದರೆ ಅದರ ಅಡಿಯಿಂದ ಚುಚ್ಚುವಂತೆ ಭಾಸವಾಗುತ್ತದೆ. ತೆಗೆದು ನೋಡಿದರೆ ರಾವಣನ ಚಿತ್ರಪಟ. ಆಗ ಅವನಿಗೆ ಸೀತೆಯು ಕೊರವಂಜಿಯ ಕಥೆಯನ್ನು ಹೇಳುತ್ತಾಳೆ. ಆದರೂ ರಾಮನಿಗೆ ಸೀತೆಯ ಮೇಲೆ ಸಂಶಯ, ತಿರಸ್ಕಾರ ಮೂಡುತ್ತದೆ. ಇದರಿಂದ ನೊಂದ ಸೀತೆಯು ತನ್ನ ಚೇಟಿಯ ಸುಜಾತೆ ಜೊತೆ ಕಾಡಿಗೆ ಹೊರಟು ಹೋಗುತ್ತಾಳೆ.

ಸೀತೆಯು ಕಾಡಿಗೆ ಹೋಗಲು ಕಾರಣ ವಾಲ್ಮೀಕಿ ರಾಮಾಯಣದಲ್ಲಿ ಅಯೋಧ್ಯೆಯಲ್ಲಿನ ಅಗಸನ ಮಾತನ್ನು ರಾಮನು ಸೀತೆಯನ್ನು ಕಾಡಿಗೆ ಕಳುಹಿಸುತ್ತಾನೆ. ನಂತರ ಲಕ್ಷ್ಮಣನ ಜೊತೆಯಲ್ಲಿ ಕಳುಹಿಸುತ್ತಾನೆ. ಆದರೆ ಚದುರಂಗರ 'ಬಿಂಬ' ನಾಟಕದಲ್ಲಿ ಸೀತೆ ಕಾಡಿಗೆ ಹೋಗಲು ಕಾರಣ ರಾಮನ ತಿರಸ್ಕಾರ ಭಾವನೆ, ಅವನ ನಡತೆ, ಪ್ರೀತಿಯಿಲ್ಲದ ಅವನ ಮಾತುಗಳು ಇದರಿಂದ ಬೇಸರಗೊಂಡು ಕಾಡಿಗೆ ಹೋಗುತ್ತಾಳೆ. ಅದು ತನ್ನ ಸೇವಕಿಯಾದ ಸುಜಾತೆಯೊಂದಿಗೆ ಕಾಡಿಗೆ ಹೋಗಿ ಏಕಾಂಗಿ ಆಗುತ್ತಾಳೆ.

ಕಾಡಿನಲ್ಲಿ ವನದೇವತೆಗಳ ಆಶ್ರಯದಲ್ಲಿ ಸೀತೆಯು ಎರಡು ಗಂಡುಮಕ್ಕಳಿಗೆ ಜನ್ಮ ನೀಡುತ್ತಾಳೆ. ನಂತರ ವಾಲ್ಮೀಕಿಯು ಸಿಗುತ್ತಾನೆ. ರಾಮನು ಬಂದು ಕರೆದುಕೊಂಡು ಹೋಗುವವರೆಗೂ ತಾನು ಹೋಗುವುದಿಲ್ಲ ಎಂದು ಹೇಳಿ ಅಶ್ರಮದಲ್ಲಿ ಇರುತ್ತಾಳೆ. ಆದರೆ ಸೀತೆಯು ಎರಡು ಗಂಡು ಮಕ್ಕಳನ್ನು ಹಡೆದಿರುತ್ತಾಳೆ. ಅವಳ ಎದೆಹಾಲನ್ನು ಮಕ್ಕಳಿಗೆ ಉಣಿಸಲು ಸಾಧ್ಯವಾಗುವುದಿಲ್ಲ. ರಾವಣನ ಚಿತ್ರಪಟವು ಸೀತೆಯ ಎದೆಗೆ ಅಂಟಿಕೊಂಡಿರುವುದರಿಂದ ಮಕ್ಕಳಿಗೆ ಹಾಲುಣಿಸಲು ಸಾಧ್ಯವಾಗುವುದಿಲ್ಲ. ಸೀತೆ ಹಾಲುಣಿಸದೇ ಸಂಕಟಪಡುತ್ತಿರುತ್ತಾಳೆ. ಮಕ್ಕಳು ಹಾಲನ್ನು ಸ್ವೀಕರಿದೇ ಕುಡಿಯದೇ ಅಳುತ್ತವೆ. ಇದನ್ನು ಕೊರವಂಜಿಯು ನೋಡುತ್ತಾಳೆ. ರಾವಣನ ಚಿತ್ರಪಟದ ಅಡಚಣೆಯಿಂದ ಹಾಲು ಕುಡಿಯಲಾರದ ಮಕ್ಕಳ ಪರದಾಟಕ್ಕೆ ಶೂರ್ಪನಖಿಯು ಕನಿಕರ ಪಡುತ್ತಾಳೆ.

ಹೇಗಾದರೂ ಮಾಡಿ ಮಕ್ಕಳನ್ನು ಮುಕ್ತಗೊಳಿಸಬೇಕು ಎಂಬ ಉದ್ದೇಶದಿಂದ ಶೂರ್ಪನಖಿಯು ಬರುತ್ತಾಳೆ. ಇಲ್ಲಿ ಸೀತೆಯ ಮೇಲಿನ ದ್ವೇಷ, ರಾಮನ ಮೇಲಿನ ಪ್ರೀತಿಯಿಂದ ತಾನು ಚಿತ್ರಪಟ ಬರೆಯಿಸಿ ಅವರನ್ನು ದೂರ ಮಾಡಿದ್ದೆ, ಆದರೆ ಮಕ್ಕಳನ್ನು ನೋಡಿ ತನ್ನ ಸೇಡು ಕರಗಿ ಕನಿಕರ ಉಂಟಾಗುತ್ತದೆ. ಅದರ ಪರಿಣಾಮವಾಗಿ ತನ್ನ ಸೇಡನ್ನು ತೀರಿಸಿಕೊಳ್ಳಲು ಬಳಸಿದ್ದ ಚಿತ್ರಪಟವನ್ನು ಶೂರ್ಪನಖಿಯೇ ಹಿಂದೆ ತೆಗೆದುಕೊಳ್ಳತ್ತಾಳೆ.

ಶೂರ್ಪನಖಿಯು ತನ್ನ ಸೇಡಿಗಾಗಿ ಸೀತೆಯ ಎದೆಗೆ ಅಂಟಿದ್ದ ರಾವಣನ ಚಿತ್ರಪಟವನ್ನು ಹಿಂತೆಗೆದುಕೊಳ್ಳುತ್ತಾಳೆ. ನಂತರ ಆ ಚಿತ್ರಪಟ ರಾವಣನ ಬಿಂಬವನ್ನು ಕುರಿತು ನೀನು ಇಲ್ಲಿಂದ ನೇರವಾಗಿ ಲಂಕೆಗೆ ಹೋಗು, ಲಂಕೆಯ ಹೆಬ್ಬಾಗಿಲಲ್ಲಿ ಕುಳಿತು ಲಂಕೆಗೆ ಶುಭವನ್ನು ಕೋರು ಎನ್ನುತ್ತಾಳೆ. ಆಗ ರಾವಣನ ಚಿತ್ರಪಟವು ಹೀಗೆ ಹೇಳುತ್ತದೆ.

7. "ಚಿತ್ರಪಟದ ರಾವಣ :

ಆಗಲಾಗಲಿ ತಂಗಿ
ನಿನ್ನ ಅಣತಿಯಂತೆ
ಮರಳುವೆನು ನಾನು
ಶ್ರೀಲಂಕೆಗೆ
ಉಳಿದಿಲ್ಲವೀಗ
ಎಂಥದೇ ಮೋಹ
ತುಂಬಿದೆ ಒಳಗೆಲ್ಲ
ವಾಂಛಲ್ಯ, ನೇಹ
ನೆಲೆಸಿರುವೆನಲ್ಲೆ
ಶುಭವ ಕೋರುತ್ತ
ಜಾನಕಿ ದೇವಿಗೆ
ಮತ್ತವಳ ಮಕ್ಕಳಿಗೆ.

ಇಲ್ಲಿ ರಾವಣ ಹೇಳುವಂತೆ ಈಗ ರಾವಣನಿಗೆ ಸೀತೆಯ ಮೇಲಿದ್ದ ಮೋಹ ಹೊರಟು ಹೋಗುತ್ತದೆ. ನಾನು ಸೀತೆಯನ್ನು ಬಯಸಿದ್ದೆ, ಆದರೆ ಈ ನನ್ನ ಮನಸ್ಸು ಶುಭ್ರವಾಗಿದೆ, ನಾನು ಲಂಕೆಗೆ ಹೋಗುತ್ತೇನೆ. ಸೀತೆಗೆ ಇನ್ನು ಮುಂದೆ ಒಳ್ಳೆಯದಾಗಲಿ, ನನ್ನಿಂದ ನೋವನ್ನು ಅನುಭವಿಸಿದ್ದಳು, ಚಿತ್ರಪಟವಾಗಿಯೂ ದುಃಖವನ್ನು ಕೊಟ್ಟಿದ್ದೇನೆ. ಇನ್ನು ಮುಂದೆಯಾದರೂ ತನ್ನ ಮಕ್ಕಳೊಂದಿಗೆ ಸುಖವಾಗಿರಲಿ ಎಂದು ಶುಭ ಕೋರುತ್ತಾಳೆ. ಇದೊಂದು ಚದುರಂಗರ ವಿನೂತನ ಕಲ್ಪನೆ. ವಾಲ್ಮೀಕಿ ರಾಮಾಯಣದಲ್ಲಿ ರಾವಣನ ಈ ರೀತಿಯ ಒಳ್ಳೆಯ ಮನಸ್ಸಿನ ಚಿತ್ರಣ ಬರುವುದಿಲ್ಲ.

ಶೂರ್ಪನಖಿಯು ಸೀತೆಗೆ ನೀಡಿದ ಶಾಪವನ್ನು ಹಿಂತೆಗೆದುಕೊಳ್ಳುತ್ತಾಳೆ. ನಂತರ ರಾವಣನ ಚಿತ್ರಿಪಟವನ್ನು ಲಂಕೆಗೆ ಕಳುಹಿಸುತ್ತಾಳೆ. ತಾನು ಮಾತ್ರ ರಾಮನ ಮೇಲಿನ ಪ್ರೀತಿಯಿಂದ ಕಾಡಿನಲ್ಲಿ ಉಳಿಯುತ್ತಾಳೆ. ಅವಳಿಗೆ ಲಂಕೆ ಬೇಕಿಲ್ಲ, ರಾಮನ ಪ್ರೀತಿ ಬೇಕು. ಆದ್ದರಿಂದ ಅವಳು ರಾಮನಿಗೋಸ್ಕರ ಕಾಡಿನಲ್ಲಿ ಅಲೆದಾಡುತ್ತಾಳೆ. ಇವಳಿಗೆ ರಾಮನನ್ನು ಪಡೆದರೆ ಮಾತ್ರ ತನ್ನ ಜೀವನ ಸಾರ್ಥಕವಾಗುತ್ತದೆ ಎನ್ನುವ ಭಾವನೆಯಿಂದ ಅವಳು ಕಾಡಿನಲ್ಲಿ ಅಲೆದಾಡುತ್ತಾಳೆ.

ರಾಮನು ತನ್ನ ಸೇವಕರನ್ನು ಬಿಟ್ಟು ಕಾಡಿನಲ್ಲಿ ಹುಡುಕಿಸುತ್ತಾನೆ. ಆದರೆ ಸೀತೆಯ ಸುಳಿವು ಮಾತ್ರ ಸಿಗುವುದಿಲ್ಲ. ಸೀತೆಯ ಮೇಲಿನ ಪ್ರೀತಿಯಿಂದ ಸೀತೆಯನ್ನು ಹುಡುಕಲು ರಾಮನು ಕಾಡಿಗೆ ಹೊರಡುತ್ತಾನೆ. ರಾಮನು ಕಾಡಿಗೆ ಹೋದಾಗ ಹೊಸ ಚೈತ್ರ ಬಂದಂತೆ ಕಾಡು ಸಂಭ್ರಮಿಸುತ್ತದೆ. ಇದನ್ನು ಕಂಡ ವಾಲ್ಮೀಕಿ ಮಹರ್ಷಿಗಳು ಅನೇಕ ವರ್ಷಗಳಿಂದಲೂ ಚೈತ್ರಮಾಸವನ್ನು ನೋಡಿದ್ದರೂ ಈ ಸಲದ ಕಾಲ ವಿಶೇಷವಾಗಿದೆ ಅನಿಸುತ್ತದೆ. ರಾಮನು ತನ್ನ ಪ್ರೀತಿಯ ಸೀತೆಗಾಗಿ ಕಾಡಿಗೆ ಬಂದರೆ, ಈ ಕಡೆ ಕಾಡಿನಲ್ಲಿ ರಾಮನಿಗಾಗಿ ಶೂರ್ಪನಖಿಯು ಕಾಯುತ್ತಿರುತ್ತಾಳೆ. ರಾಮನು ಸಹ ಎಷ್ಟೇ ಹುಡುಕಿದರೂ ಸೀತೆಯು ಸಿಗುವುದಿಲ್ಲ. ಆಗ ರಾಮನಲ್ಲಿ ಶೂರ್ಪನಖಿಯ ನೆನಪು ಬರುತ್ತದೆ. ನನ್ನನ್ನು ಮೋಹಿಸಿ ಬಂದ ಶೂರ್ಪನಖಿಯನ್ನು ಲಕ್ಷ್ಮಣನಿಂದ ದಂಡಿಸಿದೆ. ಅವಳು ಏನೋ ಆತುರದಿಂದ ನನ್ನನ್ನು ಮೋಹಿಸಿದಳು, ಆದರೆ ನಾನು ಅವಳನ್ನು ಏಕೆ ಶಿಕ್ಷಿಸಬೇಕಾಗಿತ್ತು, ಹೆಣ್ಣು ತನಗೆ ಇಷ್ಟಪಟ್ಟಿದ್ದು ಸಿಗದಿದ್ದಾಗ ಕೆರಳುವುದು ಸಹಜವೇ. ಆದರೆ ನಾನು ಅವಳು ನನ್ನ ಎಷ್ಟೇ ಪೀಡಿಸಿದರೂ ಒಳ್ಳೆಯ ಮಾತಿನಿಂದ, ಜಾಣ್ಮೆಯಿಂದ, ಪ್ರೀತಿಯಿಂದ ಕಳುಹಿಸಿಬಿಡಬಹುದಿತ್ತು. ಆದರೆ

ಶೂರ್ಪನಖಿಯು ದುಡುಕಿದಂತೆ ನಾನು ಸಹ ದುಡುಕಿದ್ದೇನೆ. ಒಂದು ಗಳಿಗೆಯಲ್ಲಿ ಆದ ಒಂದು ಸಣ್ಣ ತಪ್ಪಿನಿಂದ ಈಗ ಎಂತಹ ದಂಡವನ್ನು ಬೇಡುವಂತಾಗಿದೆ. ಎಲ್ಲವೂ ಸೇಡಿಗಾಗಿ ಶೂರ್ಪನಖಿಯೇ ಮಾಡಿರಬಹುದು ಎಂದುಕೊಳ್ಳುತ್ತಾನೆ. ಇಲ್ಲಿ ರಾಮನಿಗೆ ಶೂರ್ಪನಖಿಯ ಮೇಲೆ ಸೇಡು ಅಥವಾ ಕೋಪವಿಲ್ಲ; ಬದಲಾಗಿ ಅವಳ ಮೇಲೆ ಕನಿಕರ, ಅನುಕಂಪ ಉಂಟಾಗುತ್ತದೆ. ಚದುರಂಗರು ತಮ್ಮ ರಾಮನ ಪಾತ್ರದಲ್ಲಿ ತಂದಿರುವ ನೂತನ ಪ್ರಯೋಗ ಅದೇ; ರಾಮನಿಗೆ ಉಂಟಾಗುವ ಸೀತೆಯ ಮೇಲಿನ ಪ್ರೀತಿ, ಶೂರ್ಪನಖಿಯ ಮೇಲಿನ ಅನುಕಂಪವೇ ಆಗಿದೆ.

ಶೂರ್ಪನಖಿಯು ರಾಮನ ಮೇಲಿನ ಪ್ರೀತಿಯಿಂದ ಕಾಡಿನಲ್ಲಿ ಅಲೆದಾಡುವಾಗ ರಾಮನು ಎದುರುಗೊಳ್ಳುತ್ತಾನೆ. ಕೊರವಿ ವೇಷವನ್ನು ನೋಡಿದಾಕ್ಷಣ ಶೂರ್ಪನಖಿಯೇ ಎಂದು ರಾಮನಿಗೆ ತಿಳಿಯುತ್ತದೆ. ಆಗ ರಾಮನು ಶೂರ್ಪನಖಿಯ ಜೊತೆ ಮಾತಾಡುತ್ತಾನೆ. 'ನೀನು ಏಕೆ ಬಂದೆ? ನನ್ನನ್ನು-ಸೀತೆಯನ್ನು ದೂರ ಮಾಡಿದ್ದು ಸಾಲದೇ' ಎಂದು ಪ್ರಶ್ನಿಸುತ್ತಾನೆ. ಆಗ ಶೂರ್ಪನಖಿಯು 'ರಾಮ-ಸೀತೆಯನ್ನು ಒಂದುಮಾಡಲು ಬಂದಿದ್ದೇನೆ, ಅಂದು ತನ್ನಿಂದ ದೂರವಾಗಿದ್ದಿರಿ, ಈಗ ನನ್ನಿಂದಲೇ ಒಂದಾಗುವಿರಿ' ಎಂದು ಹೇಳುತ್ತಾಳೆ. ಆದರೆ 'ಇದು ನೆರವೇರಬೇಕಾದರೆ ನೀನು ನನ್ನನ್ನು ಸ್ವೀಕರಿಸಿದರೆ ಮಾತ್ರ' ಎಂದು ಷರತ್ತನ್ನು ವಿಧಿಸುತ್ತಾಳೆ. ಆದರೆ ರಾಮನು ತಾನು ಏಕಪತ್ನಿವ್ರತಸ್ಥ, ನಾನೆಂದೂ ನಿನ್ನನ್ನು ಸ್ವೀಕರಿಸಲು ಸಾಧ್ಯವಿಲ್ಲ ಎಂದು ಹೇಳುತ್ತಾನೆ. ಶೂರ್ಪನಖಿಯು ತನ್ನ ರೂಪವನ್ನು ಬದಲಿಸಿ ಸೀತೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತಾಳೆ. ಈಗಲಾದರೂ ನನ್ನನ್ನು ಸ್ವೀಕರಿಸು ಎಂದು ಬೇಡಿಕೊಳ್ಳುತ್ತಾಳೆ. ಅವಳ ಹೇಗಾದರೂ ಮಾಡಿ ರಾಮನನ್ನು ಮೋಹಿಸಲೇಬೇಕು ಎಂದು ಹಟಮಾಡುತ್ತಾಳೆ. ಸೀತೆಯ ವೇಷದಲ್ಲಿ ಬಂದ ಶೂರ್ಪನಖಿಯನ್ನು ನೋಡಿ ರಾಮ ಆಶ್ಚರ್ಯಗೊಳ್ಳುತ್ತಾನೆ. ಆದರೆ ತಾನು ಮಾತ್ರ ಶೂರ್ಪನಖಿಯನ್ನು ಸ್ವೀಕರಿಸುವುದಿಲ್ಲ ಎಂದು ಹೇಳಿಕೊಳ್ಳುತ್ತಾನೆ. ಆಗ ಶೂರ್ಪನಖಿಗೆ ಪ್ರೀತಿ ಎಂಬುದು ವಿನಯದಿಂದ, ಪ್ರೀತಿಯಿಂದ ಸಿದ್ಧಿಸುತ್ತದೆಯೇ ಹೊರತು, ಮಾಯಾ ಮಂತ್ರ ಕುಟಿಲ ಉಪಾಯಗಳಿಂದ, ಬಲಾತ್ಕಾರದಿಂದಾಗಲಿ ಅಲ್ಲ ಎನ್ನುತ್ತಾನೆ. ಶೂರ್ಪನಖಿಯು ರಾಮನನ್ನು ಎಷ್ಟೇ ಬೇಡಿದರೂ ಸ್ವೀಕರಿಸಲು ಅವನು ಒಪ್ಪುವುದಿಲ್ಲ. ಆಗ ಶೂರ್ಪನಖಿಗೆ ಕೋಪ ಬರುತ್ತದೆ, ರಾಮನನ್ನು ಕೊಲ್ಲುವಷ್ಟು, ಆದರೆ ಅವನ ಮೇಲಿನ ಪ್ರೀತಿಯಿಂದ ಹಾಗೆ ಮಾಡಲು ಅವಳಿಗೆ ಮನಸ್ಸಾಗುವುದಿಲ್ಲ. ನಂತರ ಶೂರ್ಪನಖಿಯು ರಾಮನಿಗೆ ಹೀಗೆ ಹೇಳುತ್ತಾಳೆ. "ನಾನು ನಿನ್ನನ್ನು ಪ್ರೀತಿಯಿಂದ ಸೇರಲು ಬಂದೆ, ಆದರೆ ನೀನು ನನ್ನನ್ನು ಮತ್ತೊಮ್ಮೆ ನಿರಾಕರಿಸುತ್ತಿದ್ದೀಯ?

ಆದ್ದರಿಂದ ನೀನು ಇನ್ನು ಕೆಲವು ವರ್ಷಗಳ ಕಾಲ ಸೀತೆಯನ್ನು ಕೂಡಲು ಅವಕಾಶ ಕೊಡುವುದಿಲ್ಲ. ಆದರೂ ನೀನು ನನ್ನನ್ನು ಎಷ್ಟೇ ನಿರಾಕರಿಸಿದರೂ ನೀನು ನಿನ್ನ ಪ್ರೀತಿಯ ರಾಮ, ನಿನ್ನನ್ನು ನಾನು ಪೂರ್ಣವಾಗಿ ದ್ವೇಷಮಾಡಲಾರೆ. ನೀನು ನನಗೆ ದುಃಖವನ್ನು ತಂದಿರುವೆ, ನೀನು ಸಹ ನನ್ನಂತೆ ಕೆಲವು ವರ್ಷಗಳ ಕಾಲ ನರಳಬೇಕು. ನಾನು ಇನ್ನು ಚಿರವಿರಹಿ, ನಿನಗೆ ಸೀತೆ ಮುಂದೆ ಒಮ್ಮೆ ಸಿಗುತ್ತಾಳೆ. ಆದರೆ ನನ್ನ ರಾಮ ಎಂದಿಗೂ ನನಗೆ ಸಿಗುವುದಿಲ್ಲ. ನನ್ನ ಕೊನೆಯ ಉಸಿರು ಇರುವವರೆಗೂ ಪ್ರೀತಿಸುತ್ತೇನೆ, ನೆನಪಲ್ಲಿ ಇಟ್ಟುಕೊಂಡಿರುತ್ತೇನೆ ಎಂದು ಹೇಳುತ್ತಾಳೆ. ಕೊನೆಯದಾಗಿ ಶೂರ್ಪನಖಿಯು 'ರಾಮನಿಗೆ ನಿನಗೆ ಸೀತೆ ಒಬ್ಬಳಲ್ಲ ಇನ್ನೊಂದು ಜೀವ ಪ್ರೀತಿಸುತ್ತಲೇ ಇರುತ್ತದೆ, ಅದು ನಾನೇ' ಎಂದು ದುಃಖದಿಂದ ಹೇಳುತ್ತಾಳೆ.

ಇಲ್ಲಿ ಶೂರ್ಪನಖಿಗೆ ರಾಮನ ಮೇಲೆ ದ್ವೇಷ ಇದೆ, ಅದಕ್ಕಿಂತ ಪ್ರೀತಿ ಹೆಚ್ಚಾಗಿದೆ. ಇಲ್ಲಿ ಚದುರಂಗರು ಶೂರ್ಪನಖಿಯನ್ನು ಸಾಮಾನ್ಯ ಹೆಣ್ಣಿಗಿರುವ ಭಾವನೆಯಂತಿರುವ ಹೆಣ್ಣು ಎಂದು ರೂಪಿಸಿದ್ದಾರೆ.

ಶೂರ್ಪನಖಿಯು ರಾಮನಿಗೆ ತನ್ನ ಅಭಿಪ್ರಾಯವನ್ನು ಹೇಳಿ ಹೊರಟುಹೋಗುತ್ತಾಳೆ. ಇಲ್ಲಿ ರಾಮನು ಸೀತೆಯನ್ನು ನೆನಸಿಕೊಂಡು ತನ್ನ ಬೆರಳಿನಿಂದ ಮರಳಿನ ಮೇಲೆ ಸೀತೆಯ ಚಿತ್ರವನ್ನು ಬರೆಯುತ್ತಾನೆ. ಆ ಚಿತ್ರದಲ್ಲಿ ಶೂರ್ಪನಖಿಯ ಛಾಯೆಯನ್ನು ಕಾಣುತ್ತಾನೆ. ತನಗೆ ಏಕೆ ಈ ರೀತಿ ಆಗುತ್ತಿದೆ, ತಾನು ಸೀತೆಯನ್ನು ಪ್ರೀತಿಸುತ್ತೇನೆ, ಶೂರ್ಪನಖಿಯು ನನ್ನನ್ನು ಪ್ರೀತಿಸುತ್ತಾಳೆ. ಅವಳು ಒಂದು ಹೆಣ್ಣು, ಅವಳಿಗೂ ಬಯಕೆಗಳಿರುತ್ತವೆ, ಅವುಗಳನ್ನು ಈಡೇರಿಸದ ಸ್ಥಿತಿಯಲ್ಲಿ ನಾನು ಇದ್ದೇನೆ ಎಂದು ಹೇಳಿಕೊಳ್ಳುತ್ತಾನೆ. ಇಲ್ಲಿ ಮೂಲರಾಮಾಯಣದ ಆದರ್ಶ ರಾಮನಿಗಿಂತ ಭಿ ನ್ನವಾಗಿದೆ. ಶೂರ್ಪನಖಿಯು ಮಾತ್ರ ಶಾಪಗ್ರಸ್ಥ ಹೆಣ್ಣಿನಂತೆ ಕಾಡಿನಲ್ಲಿ ಅಲೆದಾಡುತ್ತಾಳೆ.

ಚದುರಂಗರು ತಮ್ಮ ಬಿಂಬ ನಾಟಕದಲ್ಲಿ ಶೂರ್ಪನಖಿಯ ಪಾತ್ರವನ್ನು ಪ್ರಧಾನವಾಗಿ ಚಿತ್ರಿಸಿದ್ದಾರೆ. ರಾಮ -ಸೀತೆಯರು ದೂರವಾಗುವುದೇ ಶೂರ್ಪನಖಿಯಿಂದ. ಮೂಲ ರಾಮಾಯಣದಲ್ಲಿ ಸೀತೆಯು ಕನಸಿನಲ್ಲೂ ಶೂರ್ಪನಖಿಯನ್ನು ನೆನೆಯುವುದಿಲ್ಲ. ಆದರೆ ಇಲ್ಲಿ

ಕ್ಷಣಾಕ್ಷಣಕ್ಕೂ ಶೂರ್ಪನಖಿಯನ್ನು ಸೀತೆಯು ನೆನೆಯುತ್ತಾಳೆ. ರಾಮನನ್ನು ಮೋಹಿಸಿ ತಿರಸ್ಕಾರಗೊಂಡ ಶೂರ್ಪನಖಿಯು ತನ್ನ ಪ್ರಾಣ ಇರುವವರರೆಗೂ ರಾಮನನ್ನು ಪ್ರೀತಿಸುತ್ತಿರುತ್ತೇನೆ ಎಂದು ಹೇಳುತ್ತಾಳೆ.

ಚದುರಂಗರ 'ಬಿಂಬ' ನಾಟಕದಲ್ಲಿ ನಾಟಕಕಾರರ ನವೀನತೆ ಇರುವುದು ಶೂರ್ಪನಖಿ ಸೃಷ್ಟಿಯಲ್ಲಿ. ವಾಲ್ಮೀಕಿಯ ತಿರಸ್ಕಾರಕ್ಕೆ ಕಾರಣವಾದ ಮಂಥರೆಯು ಕುವೆಂಪುರವರ "ಶ್ರೀರಾಮಾಯಣ ದರ್ಶನಂ" ನಲ್ಲಿ ಹೊಸ ಜೀವಂತಿಕೆ ಪಡೆದಿದ್ದಾಳೆವಾಲ್ಮೀಕೆಯು ಮಂಥರೆ ಕುರೂಪಿ, ಕೆಟ್ಟವಳು, ಊರ ಜನರು ಅನಿಷ್ಟ ಎಂದು ಬೈಯುವಂತೆ ಚಿತ್ರಿಸಿದ್ದಾರೆ.
ಕುವೆಂಪು ಭಿನ್ನವಾಗಿ ಚಿತ್ರಿಸಿದ್ದಾರೆ:

8. "ಕೈಕೆ ಗೂನಿಯ ವಕ್ರಗಾತ್ರಮಂ
ತಬ್ಬಿ ನುಡಿದಳ್ ಕಂಗೆಟ್ಟೆನಗೆ ದಾರಿ ತೋರ್ದಯ್
ಓ ನನ್ನ ಭಾಗ್ಯ ದೇವತೆ ಮರಳಿ ಹಡೆದೆಯೌ
ನೀನೆನ್ನ ತಾಯಿ ನೀಂ ತೊರೆಯಲಿನ್ನಾರೆ ಗತಿ
ಪರದೇಸಿಯೆನಗೆ? ಕಣ್ಣೆರ್ದುರ್ಮಾನಿನ್ನೆಗಂ
ಕುರುಡಿಯೊಗಿದೇಸೌ, ನೋಡಿತ್ತ ನೋಡೆನ್ನನಃ
ಇಂದೆನಿತು ಚಾ ರುರೂಪಿಣಿಯಾಗಿ ತೋರುತಿಹೆ
ನೀನೆನಗೆ ಲೋಕದೊಳ್ ಹೊರಮಯ್ಯನೀಕ್ಷಿಸುತೆ
ಸೊಬಗನಾರೈವವರ್ ಬರಿಯ ಬೆಪ್ಪುಗಳಲ್ತೆ?
ನಿಜಮಪ್ಪ ಸೌಂದರ್ಯಮಾತ್ಮಕ್ಕೆ ಸೇರ್ದುದನೆ
ನಿನಗೀನೇಂ ಸುಂದರಿಯರೊಳಕೆ? ಗೂನಿರ್ದರೇಂ?
ಚಂದನದ ಕೊರಡು ಮುರುಟಿರ್ದರೇನೂನಾಯ್ತೆ
ಗಂಧಕ್ಕೆ? ಎನ್ನುತ್ತಾ ಕುರೂಪತಾಮಿದ್ರೆಯಂ
ಮುದ್ದಾಡಿದಳು ಕೈಕೆ"

ಇಲ್ಲಿ ಮಂಥರೆಯು ಕುರೂಪಿ, ಗೂನಿಯಾಗಿದ್ದರೂ, ಕೈಕೆಯ ಹೊಗಳಿಕೆಗೆ ಪಾತ್ರವಾಗಿದ್ದಾಳೆ. ಒಳ್ಳೆಯದನ್ನು ಹೇಳುವರು ಕುರೂಪಿಗಳಲ್ಲ, ಸೌಂದರ್ಯ ಎನ್ನುವುದು ಆತ್ಮಕ್ಕೆ ಹೊರತು ಹೊರಮೈಗೆ

ಅಲ್ಲ. ನಿನ್ನ ರೀತಿಯಾಗಿ ಆತ್ಮಸೌಂದರ್ಯವನ್ನು ಯಾರು ಒಳಗೊಂಡಿದ್ದಾರೆ? ನಿನಗಿಂತಲೂ ಯಾರು ಸುಂದರವಾಗಿದ್ದಾರೆ? ನೀನೆ ಸುಂದರವಾದವಳು. ಶ್ರೀಗಂಧದ ಮರದ ತುಂಡು ಡೊಂಕಾಗಿದ್ದರೆ ಅದರ ವಾಸನೆಯು ಡೊಂಕಾಗಿರುತ್ತದೆಯೇ, ಇಲ್ಲಿ ಬೇಕಿರುವುದು ಸುವಾಸನೆ, ಹಾಗೆಯೇ ಹೊರಮೈ ಸುಂದರವಾಗಿಲ್ಲದಿದ್ದರೂ ಆತ್ಮ ಸೌಂದರ್ಯದಲ್ಲಿ ನಿನ್ನನ್ನು ಮೀರಿಸುವವರು ಯಾರೂ ಇಲ್ಲ ಎಂದು ಕೈಕೆಯು ಹೇಳುತ್ತಾಳೆ.

ಹೀಗೆ ಮಂಥರೆಗೆ ಕುವೆಂಪುರವರು ಹೊಸ ಜೀವ ತುಂಬಿದಂತೆ ಚದುರಂಗರು ಶೂರ್ಪನಖಿಗೆ ನೀಡಿದ್ದಾರೆ. ಇಡೀ ನಾಟಕದ ಪಾತ್ರಗಳ ವರ್ತನೆಯ ಬದಲಾವಣೆಗೆ ಶೂರ್ಪನಖಿಯೇ ಕಾರಣವಾಗುತ್ತಾಳೆ. ಈ ಪಾತ್ರ ರಾಮಾಯಣದಲ್ಲಿ ಪ್ರಾಧಾನ್ಯತೆ ಪಡೆಯದೇ ಉದಾಸೀನತೆಗೆ ಒಳಗಾಗಿತ್ತು. ಇಲ್ಲಿ ಆ ಪಾತ್ರವನ್ನು ನಾಟಕಕಾರರು ಪ್ರಧಾನ ಪಾತ್ರವಾಗಿ ಚಿತ್ರಿಸಿದ್ದಾರೆ. ಶೂರ್ಪನಖಿಯು ಕೆಟ್ಟವಳಲ್ಲ, ಅವಳು ಸಹ ಒಂದು ಹೆಣ್ಣು, ಎಲ್ಲ ಹೆಣ್ಣುಗಳಿಗೆ ಇರುವಂತೆ ಇವಳಿಗೂ ಆಸೆಗಳಿವೆ, ಹುಟ್ಟಿನಿಂದಲೂ ಪ್ರೀತಿ ಸಿಗದಿದ್ದ ಶೂರ್ಪನಖಿ ಪ್ರೀತಿಗಾಗಿ ರಾಮನಿಗೆ ಆಕರ್ಷಿತಳಾಗುವುದು ಸಾಮಾನ್ಯ. ಎಲ್ಲಾ ಹೆಣ್ಣುಗಳಂತೆ ತಾನು ಇಷ್ಟಪಟ್ಟಿದ್ದು ಸಿಗದಿದ್ದಾಗ ಸಿಡಿದೇಳುವುದು ಉಚಿತ ಎನಿಸಿಕೊಳ್ಳುತ್ತದೆ.

ಒಟ್ಟಾರೆಯಾಗಿ ಚದುರಂಗರ 'ಬಿಂಬ' ನಾಟಕದಲ್ಲಿ ಶೂರ್ಪನಖಿಯು ನಾಟಕದ ಆರಂಭದಿಂದ ಕೊನೆಯವರೆಗೂ ಗಮನ ಸೆಳೆಯುತ್ತಾಳೆ. ಅವಳ ಕೊರವಂಜಿ ವೇಷವು ಶೂರ್ಪನಖಿಗೆ ತನ್ನ ಸೇಡನ್ನು ತೀರಿಸಿಕೊಳ್ಳಲು ಸಹಾಯ ಮಾಡಿದೆ. ಹೀಗೆ ಮೂಲರಾಮಾಯಣದ ಶೂರ್ಪನಖಿಗೂ ಇಲ್ಲಿನ ಶೂರ್ಪನಖಿ ಪಾತ್ರಕ್ಕೂ ವ್ಯತ್ಯಾಸವಿದೆ, ಇಲ್ಲಿ ವಿನೂತನ ರಚನೆಯಿದೆ.

# ಅಡಿ ಟಿಪ್ಪಣಿಗಳು

| | | |
|---|---|---|
| 1. ಬಿಂಬ | ಚದುರಂಗ | ಪುಟ: 148 |
| 2. ಬಿಂಬ | -- | ಪುಟ: 149 |
| 3. ಬಿಂಬ | -- | ಪುಟ: 151 |
| 4. ಬಿಂಬ | -- | ಪುಟ: 153 |
| 5. ಬಿಂಬ | -- | ಪುಟ: 155 |
| 6. ಬಿಂಬ | -- | ಪುಟ: 160 |
| 7. ಬಿಂಬ | -- | ಪುಟ: 192 |
| 8. ಶ್ರೀರಾಮಾಯಣ ದರ್ಶನಂ- | ಕುವೆಂಪು | ಪುಟ: 56 |

# ಉಪಸಂಹಾರ

# ಉಪಸಂಹಾರ

ಚದುರಂಗರು ಕನ್ನಡ ಸಾಹಿತ್ಯದಲ್ಲಿ ಒಂದು ಉತ್ತಮ ಸ್ಥಾನವನ್ನು ಹೊಂದಿದ್ದಾರೆ. ಇವರು ಸಾಹಸಪ್ರಿಯರು, ಪ್ರಯೋಗಶೀಲರು. ಶಾಲೆಯಲ್ಲಿ ಓದುತ್ತಿದ್ದಾಗ ಗಾಂಧೀಜಿಯವರಿಂದ ಆಕರ್ಷಿತರಾಗಿ ಖಾದಿಯನ್ನು ತೊಟ್ಟರು. ಕಮ್ಯುನಿಸಂ ಪ್ರಭಾವಕ್ಕೆ ಒಳಗಾಗಿದ್ದರು. ಎಂ.ಎನ್. ರಾಯರ ವಿಚಾರಗಳಿಂದ ಪ್ರೇರಿತರಾಗಿದ್ದರು. ಪ್ರಗತಿಶೀಲ ಚಳುವಳಿಯ ಮುಂದಾಳುಗಳಲ್ಲಿ ಒಬ್ಬರಾಗಿದ್ದರು. ನವ್ಯತೆಯನ್ನು ವಿಶೇಷವಾಗಿ ಬಳಸಿದ್ದರು. ಹಲವಾರು ನವ್ಯ ಸಾಹಿತಿಗಳ ಜೊತೆಗೆ ಒಡನಾಟವಿತ್ತು. ಅದರ ಫಲವಾಗಿಯೇ 'ಇಲಿಬೋನು' ಎಂಬಂಥ 'ಅಸಂಗತ' ನಾಟಕವು ಉದಯವಾಗಿದ್ದು. ಬದುಕಿನ ಉದ್ದಕ್ಕೂ ಬಂಡಾಯವನ್ನು ಕಾಣುವ ಅವರ ಕೃತಿಗಳಲ್ಲಿ ದಲಿತ ಸಂವೇದನೆಯಿದೆ. ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಇವರು ತೊಡಗಿದ್ದರು. ಇವರು ಚಲನಚಿತ್ರದಲ್ಲಿ ಆಸಕ್ತಿಯನ್ನು ಹೊಂದಿದ್ದರು. ಸರ್ವಮಂಗಳಾ, ಉಯ್ಯಾಲೆ, ವೈಶಾಖ ಎಂಬ ಕಾದಂಬರಿಗಳನ್ನು ರಚಿಸಿದ್ದರು. ಇವು ಚಲನಚಿತ್ರಗಳಾಗಿ ಪ್ರಶಸ್ತಿಗಳನ್ನು ಗಳಿಸಿಕೊಂಡು ಪ್ರಸಿದ್ಧವಾಗಿವೆ.

ಚದುರಂಗರ 4 ನಾಟಕಗಳು. ಸತ್ಯದ ಝೋಕು, ಕುಮಾರರಾಮ, ಇಲಿಬೋನು, ಬಿಂಬ – ಇವುಗಳನ್ನು ಸಮಗ್ರವಾಗಿ ಅಧ್ಯಯನ ಮಾಡುವಾಗ ವಿವಿಧ ರೀತಿಯಾದ ಮಜಲುಗಳನ್ನು ಕಾಣುತ್ತೇವೆ. ಪ್ರತಿಯೊಂದು ನಾಟಕಗಳು ಒಂದೊಂದು ರೀತಿಯ ವಿಭಿನ್ನ ಟ್ರೆಂಡ್‌ಗಳನ್ನು ಪ್ರತಿನಿಧಿಸುತ್ತವೆ, ಇವರ ನಾಟಕಗಳನ್ನು ಅಧ್ಯಯನ ಮಾಡುವಾಗ ಅವುಗಳಲ್ಲಿ ಅನೇಕ ಒಳನೋಟಗಳು ಕಂಡುಬರುತ್ತವೆ. ಈ ಮೇಲಿನ ವಿಚಾರಗಳನ್ನು ಅಧ್ಯಯನ ಮಾಡಬೇಕಾಗಿದೆ. ಇವರ ಮೊದಲನೆಯ ನಾಟಕವಾದ 'ಸತ್ಯದ ಝೋಕು' ಎಂಬುದು ಒಂದು ಪ್ರಹಸನ ನಾಟಕ. ಈ ನಾಟಕದಲ್ಲಿ ಒಂದು ಸಂದೇಶವನ್ನು ಚದುರಂಗರು ನೀಡುತ್ತಾರೆ. ಈ ನಾಟಕದಲ್ಲಿ ಬರುವ ಮಿಥ್ಯೆಯನ್ನು ಪ್ರಧಾನವಾಗಿ ಚರ್ಚಿಸಿದ್ದಾರೆ. ಆಧುನಿಕ ಜೀವನದಲ್ಲಿ ಮನುಷ್ಯ ಬದುಕಬೇಕಾದರೆ ಸುಳ್ಳನ್ನು ಹೇಳಬೇಕು, ಸುಳ್ಳನ್ನು ಹೇಳದೇ ಇಲ್ಲಿನ ಸಮಾಜದಲ್ಲಿ ಬದುಕಲಾರ. ಸುಳ್ಳಿಗೆ ಅನಿವಾರ್ಯವಾಗಿ ದಾಸರಾಗಲೇಬೇಕಾಗುತ್ತದೆ ಎಂಬುದನ್ನು ಚದುರಂಗರು ಇಲ್ಲಿ ನಿರೂಪಿಸಲು ಹೊರಟಿದ್ದಾರೆ. ಈ ನಾಟಕದಲ್ಲಿ ಬರುವ ಪಾತ್ರವಾದ ಡಾ|| ಶಂಕರ್ ಸತ್ಯದ ಪರವಾಗಿ ನಾಟಕದ ಆರಂಭದಲ್ಲಿ ನಿಲ್ಲುತ್ತಾನೆ. ಆದರೆ ಈ ಸಮಾಜದಲ್ಲಿ ಮನುಷ್ಯ ಬದುಕಲು ಸುಳ್ಳು ಅನಿವಾರ್ಯ

ಎಂದು ಹೇಳುವ ಮೂರ್ತಿ ಪಾತ್ರ, ಇವೆರಡರ ನಡುವೆ ಚರ್ಚೆ ನಡೆಯುತ್ತದೆ. ಡಾ|| ಶಂಕರ್ ರೋಗಿ ನಾಯ್ಡುವಿಗೆ ಸುಳ್ಳು ಹೇಳುವುದು, ತನ್ನ ಹೆಂಡತಿಯ ಬಗೆಗೆ ಹೇಳುವ ಹೊಗಳುವ ಸುಳ್ಳಿನ ಮಾತುಗಳು, ಸುಳ್ಳಿನ ಅಗತ್ಯತೆಯನ್ನು ತಿಳಿಸುತ್ತದೆ. ನಾಟಕದ ಕೊನೆಗೆ ಡಾ|| ಶಂಕರ್ ಸತ್ಯಕ್ಕೆ ಬದಲಾಗಿ ಸುಳ್ಳು ಎಂಬುದು ಆಧುನಿಕ ಜೀವನದಲ್ಲಿ ಅನಿವಾರ್ಯ ಎಂಬುದನ್ನು ಮನಗೊಳ್ಳುತ್ತಾನೆ.

ಎರಡನೆಯ ನಾಟಕವಾದ 'ಇಲಿಬೋನು' ಇದೊಂದು ಅಸಂಗತ ನಾಟಕವಾಗಿದೆ. ಇಲ್ಲಿ ಅಗೆಯುವನು, ಏರುವವನು ಏನೋ ಮಹತ್ತರ ಕಾರ್ಯವನ್ನು ಮಾಡುವಂತೆ ನಟಿಸುತ್ತಾರೆ. ಇವರಿಬ್ಬರ ಮನಸ್ಸಿನಲ್ಲಿ ವರ್ತಮಾನ ಕಾಲಕ್ಕಿಂತ ಭೂತಕಾಲ, ಭವಿಷ್ಯತ್ ಕಾಲದ ಮೇಲೆ ನಂಬಿಕೆ. ಏನನ್ನೋ ಸಾಧಿಸುತ್ತಿದ್ದೇವೆ ಎಂಬ ಭ್ರಮೆಯಲ್ಲಿ ಮುಳುಗಿ ವ್ಯರ್ಥವಾಗಿ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಈ ನಾಟಕದಲ್ಲಿ ಬರುವ ಹೆಣ್ಣಿನ ಪಾತ್ರವು ಮುಖ್ಯವಾದದ್ದು. ಮುಖ್ಯ ಚೇತನವಾದ ಪಾತ್ರ, ವ್ಯರ್ಥವಾದ ಕಾಲಹರಣ ಮಾಡುತ್ತಿರುವ ವ್ಯಕ್ತಿಗಳಿಗೆ ವರ್ತಮಾನದ ಮಹತ್ವವನ್ನು ತಿಳಿಸುತ್ತಾಳೆ. ಇಲ್ಲಿ ಇಡೀ ನಾಟಕವೇ ಚೈತನ್ಯವಿಲ್ಲದೇ ಸಾಗುವಾಗ ಅದಕ್ಕೆ ಜೀವ ತುಂಬುವ ಪಾತ್ರವಾಗಿ ಹೆಣ್ಣು ಕಂಡುಬ ರುತ್ತಾಳೆ. ಆದ್ದರಿಂದ ಈ ನಾಟಕದಲ್ಲಿ ಬರುವ ಹೆಣ್ಣಿನ ಪಾತ್ರ ಮುಖ್ಯವಾದದ್ದು.

ಚದುರಂಗರು 'ಕುಮಾರರಾಮ' ಎಂಬ ನಾಟಕವನ್ನು ಬರೆಯು ಸಂದರ್ಭಕ್ಕೆ ರಂಗಭೂಮಿಯ ಬಗ್ಗೆ ಹಲವಾರು ಪ್ರಯೋಗಗಳು ಹೊರ ಬಂದಿದ್ದವು. ಇವರು ಚಲನಚಿತ್ರದಲ್ಲಿ ಹೆಚ್ಚು ಆಸಕ್ತಿಯನ್ನು ಹೊಂದಿದ್ದರು. ಇವರ ಕಾದಂಬರಿಗಳು ಚಲನಚಿತ್ರಗಳಾಗಿವೆ. ಹಾಗೆಯೇ ಇವರು ಚಲನಚಿತ್ರವನ್ನು ನಿರ್ದೇಶನ ಮಾಡಿ ರಾಜ್ಯ ಪ್ರಶಸ್ತಿಯನ್ನು ಗಳಿಸಿಕೊಂಡಿದ್ದರು. ಹಾಗಾಗಿ ಇವರ ಕುಮಾರರಾಮ ನಾಟಕವು ಕೇವಲ ನಾಟಕೀಕರಣಕ್ಕೆ ಸೀಮಿತವಾಗದೇ, ಸಿನಿಮೀಯ ಸನ್ನಿವೇಶಕ್ಕೂ ಹೊಂದಾಣಿಕೆ ಆಗುತ್ತದೆ. ಈ ನಾಟಕದಲ್ಲಿ ದೃಶ್ಯಗಳು, ಪಾತ್ರಗಳು ನಾಟಕೀಯ ಸನ್ನಿವೇಶವಾಗಿಯು ಇರುತ್ತದೆ. ಹಾಗೆಯೇ ಸಿನಿಮಾ ಸನ್ನಿವೇಶಕ್ಕೂ ಹೊಂದಾಣಿಕೆ ಆಗುತ್ತದೆ. ಇಲ್ಲಿ ನಾವು ಮುಖ್ಯವಾಗಿ ನೋಡುವುದು ಏನೆಂದರೆ ಕುಮಾರರಾಮ ನಾಟಕದಲ್ಲಿನ ದೃಶ್ಯಗಳು, ಸನ್ನಿವೇಶಗಳು ಕೇವಲ ನಾಟಕೀಕರಣವಲ್ಲದೇ ಅವು ಸಿನಿಮೀಯ ದೃಶ್ಯಕ್ಕೆ ಹೊಂದಾಣಿಕೆ ಆಗುತ್ತದೆ ಎಂಬುದು. ಇಲ್ಲಿ ನಾವು ಗಮನಿಸಬೇಕಾದದ್ದು ಇದೇ ಆಗಿದೆ.

ಚದುರಂಗರು ತಮ್ಮ ಇಳಿವಯಸ್ಸಿನಲ್ಲಿ ಬರೆದ ನಾಟಕ 'ಬಿಂಬ' ಚದುರಂಗರನ್ನು ಪ್ರಮುಖ ನಾಟಕಕಾರರಾಗಿ ನಿಲ್ಲಿಸಿದ ನಾಟಕವಾಗಿದೆ. ಈ ನಾಟಕವು ಮುಖ್ಯವಾಗಿ ರಾಮಾಯಣದ ಕಥೆಯನ್ನು ಹೊಂದಿದೆ. 18ನೇ ಶತಮಾನದ ಹೆಳವನಕಟ್ಟೆ ಗಿರಿಯಮ್ಮನ "ಲವ-ಕುಶರ ಕಾಳಗ" ದಲ್ಲಿ ಬರುವ ಒಂದು ದೃಶ್ಯವನ್ನು ಬಳಸಿಕೊಂಡಿದ್ದಾರೆ. ಇಡೀ ನಾಟಕವೇ ಶೂರ್ಪನಖಿಯ ಮೇಲೆ ನಿಂತಿದೆ. ಅವಳು ಜೀವ ತುಂಬಿದ ರಾವಣನ ಚಿತ್ರಪಟವೇ ನಾಟಕದ ಜೀವಾಳವಾಗಿದೆ. ಈ ನಾಟಕದಲ್ಲಿ ರಾಮನ ಮೇಲೆ ಶೂರ್ಪನಖಿಗೆ ಮೋಹ, ಹಾಗೆಯೇ ಸೀತೆಯ ಮೇಲೆ ರಾವಣನಿಗೆ ಮೋಹ. ಆದ್ದರಿಂದ ರಾಮನನ್ನು ಪಡೆಯಲು ಹೋದಾಗ ಶೂರ್ಪನಖಿಯು ಶಿಕ್ಷೆಗೆ ಒಳಪಡುತ್ತಾಳೆ. ಅವಮಾನಿತಳಾಗುತ್ತಾಳೆ. ಸೀತೆಯನ್ನು ಮೋಹಿಸಿದ ರಾವಣನು ಸೀತೆಯನ್ನು ಅಪಹರಿಸಿ ತನ್ನ ಸಾವನ್ನು ತಾನೇ ತಂದುಕೊಳ್ಳುತ್ತಾನೆ. ಇಲ್ಲಿ ಶೂರ್ಪನಖಿಯು ರಾಮನ ಮೇಲಿನ ಆಸೆಯಿಂದ ರಾಮ-ಸೀತೆಯನ್ನು ಬೇರ್ಪಡಿಸಲು ರಾವಣನ ಚಿತ್ರಪಟವನ್ನು ತರುತ್ತಾಳೆ. ಸೀತೆ-ರಾಮರ ನಡುವೆ ವೈಮನಸ್ಸು ಉಂಟಾಗಿ ಸೀತೆ ಕಾಡಿಗೆ ಹೋಗುತ್ತಾಳೆ. ರಾಮನಿಗೆ ತನ್ನ ಸೀತೆಯು ರಾವಣನ ಚಿತ್ರಪಟವನ್ನು ಹೊಂದಿದ್ದಳು ಎಂಬ ಬೇಸರ, ಆದರೆ ಶೂರ್ಪನಖಿಯು ಈ ಸಮಯವನ್ನು ಬಳಸಿ ರಾಮನನ್ನು ಮೋಹಿಸಲು ಹೋದಾಗ ವಿಫಲವಾಗುತ್ತಾಳೆ. ಏಕೆಂದರೆ ರಾಮನಿಗೆ ಸೀತೆಯ ಮೇಲೆ ನಿಜವಾದ ಪ್ರೀತಿ ಇರುತ್ತದೆ. ಅವರದು ಕೇವಲ ದೈಹಿಕ ಆಕರ್ಷಣೆಯಲ್ಲ, ಹೃದಯಗಳ ಬೆಸುಗೆ ಎಂಬುದು ತಿಳಿಯುತ್ತದೆ. ದೇಹದ ಆಕರ್ಷಣೆಗೆ ಒಳಗಾದ ಶೂರ್ಪನಖಿಯು ಸೀತೆ-ರಾಮನ ಮಧ್ಯೆ ಎಷ್ಟೇ ಭಿನ್ನಾಭಿಪ್ರಾಯ ತಂದರೂ ಅವರ ಪ್ರೀತಿಯನ್ನು ಒಡೆಯಲು ಸಾಧ್ಯವಾಗುವುದಿಲ್ಲ. ಈ ನಾಟಕದಲ್ಲಿ ನಾವು ಇದನ್ನು ನೋಡಬಹುದಾಗಿದೆ, ಅಂದರೆ ರಾಮ-ಸೀತೆಯರ ಪ್ರೀತಿ ಎಂಬುದು ಕೇವಲ ದೇಹದ ಆಕರ್ಷಣೆಯಲ್ಲ, ಅದು ನಿಜವಾದ ಹೃದಯಗಳ ಬೆಸುಗೆ ಎಂಬುದಾಗಿದೆ. ಮುಂದೆ ಇದಕ್ಕೆಲ್ಲ ಕಾರಣಳಾದ ಶೂರ್ಪನಖಿಯ ಪಾತ್ರ ಈ ನಾಟಕದಲ್ಲಿ ಮುಖ್ಯವಾಗಿದೆ. ಶೂರ್ಪನಖಿಯು ಕೊರವಂಜಿಯಾಗಿ ಬಂದು ಸೀತೆಯ ಮೇಲಿನ ತನ್ನ ಸೇಡನ್ನು ತೀರಿಸಿಕೊಳ್ಳುವುದು ಅಂದರೆ ರಾಮನನ್ನು ಪಡೆಯಲು ಹೋದಾಗ ಲಕ್ಷ್ಮಣನು ಶೂರ್ಪನಖಿಯನ್ನು ದಂಡಿಸುತ್ತಾನೆ. ಆಗ ಅದನ್ನು ನೋಡಿ ಸೀತೆ ನಗುತ್ತಾಳೆ. ಶೂರ್ಪನಖಿಗೆ ಅವಮಾನವಾಗಿ ಸೀತೆಯ ಮೇಲೆ ಕೋಪ ಬರುತ್ತದೆ. ಇಲ್ಲಿ ಶೂರ್ಪನಖಿಯು ಅಂದು ಸೀತೆಯು ನಕ್ಕಿದಳು ಎಂಬುದನ್ನು ಸೇಡಾಗಿ ಕಾಣುತ್ತಾ ಸೀತೆಯನ್ನು ಅಲೆದಾಡುವಂತೆ ಮಾಡುತ್ತಾಳೆ. ಇಲ್ಲಿ ಶೂರ್ಪನಖಿಯು ಕೆಟ್ಟವಳಲ್ಲ, ಸಾಮಾನ್ಯ ಹೆಣ್ಣು, ಹೆಣ್ಣುಗಳಿಗೆ ಆಸೆ ಇರುವಂತೆ ಶೂರ್ಪನಖಿಗೂ ಇದೆ. ಲಕ್ಷ್ಮಣನು ದಂಡಿಸುವಾಗ ತನ್ನಂತೆ ಹೆಣ್ಣಾದ ಸೀತೆ ನನ್ನನ್ನು

ಅರ್ಥಮಾಡಿಕೊಳ್ಳಲಿಲ್ಲ, ತನ್ನನ್ನು ಅವಮಾನಪಡಿಸಿದಳು ಎಂದು ಶೂರ್ಪನಖಿಯು ಕೋಪಗೊಳ್ಳುತ್ತಾಳೆ. ಈ ನಾಟಕದಲ್ಲಿ ತನ್ನ ಸೇಡನ್ನು ಶೂರ್ಪನಖಿಯು ಕೊರವಂಜಿ ವೇಷದಲ್ಲಿ ಬಂದು ತೀರಿಸಿಕೊಳ್ಳುತ್ತಾಳೆ. ಇದೇ ಬಿಂಬದಲ್ಲಿ ಶೂರ್ಪನಖಿಯಾದ ಕೊರವಂಜಿಯ ವಿಶಿಷ್ಟತೆಯಾಗಿದೆ.

ಹೀಗೆ ಚದುರಂಗರ ಒಂದೊಂದು ನಾಟಕಗಳು ಒಂದೊಂದು ರೀತಿಯ ಮಜಲುಗಳನ್ನು ಹೊಂದಿವೆ. ವಿವಿಧ ದೃಷ್ಟಿಕೋನಗಳನ್ನು ಹೊಂದಿವೆ. ನಾವು ಅವರ ಒಂದೊಂದು ನಾಟಕಗಳನ್ನು ವಿವಿಧ ರೀತಿಯ ದೃಷ್ಟಿಕೋನಗಳಿಂದ ಅಧ್ಯಯನ ಮಾಡುವುದು ಸೂಕ್ತವೆನಿಸಿಕೊಳ್ಳುತ್ತದೆ.

# ಅನುಬಂಧ

# ಅನುಬಂಧ

| | | |
|---|---|---|
| 1. | ಶ್ರೀರಾಮಾಯಣ ದರ್ಶನಂ | ಕುವೆಂಪು |
| 2. | ಆಧುನಿಕ ನಾಟಕಗಳು | ಕೆ. ಮರುಳಸಿದ್ದಪ್ಪ |
| 3. | ಚದುರಂಗರ ಸಮಗ್ರ ನಾಟಕಗಳು | |
| 4. | ಏಕಲವ್ಯ | ಡಾ. ಸಿದ್ದಲಿಂಗಯ್ಯ |
| 5. | ಸಿದ್ದತೆ | ಪಿ. ಲಂಕೇಶ್ |
| 6. | ಹೆಬ್ಬೆರಳು | ಗೋವಿಂದ ಪೈ |
| 7. | ಬೆರಳ್‌ಗೆ ಕೊರಳ್ | ಕುವೆಂಪು |
| 8. | ರಾಮಾಯಣ | ವಾಲ್ಮೀಕಿ |
| 9. | ವಿಚಾರವೀಳ್ಯ | ಡಾ. ಕೆ.ವಿ. ಚಂದ್ರಣ್ಣಗೌಡ |
| 10. | ನೆಲಸಮ ಪಂಚಸಮ | ಡಾ. ಸಿದ್ದಲಿಂಗಯ್ಯ |

| | |
|---|---|
| 11. ಶೂದ್ರ ತಪಸ್ವಿ | ಕುವೆಂಪು |
| 12. ರಕ್ತಾಕ್ಷಿ | ಕುವೆಂಪು |
| 13. ಬಿರುಗಾಳಿ | ಕುವೆಂಪು |
| 14. ಟೊಳ್ಳುಗಟ್ಟಿ | ಟಿ.ಪಿ. ಕೈಲಾಸಂ |
| 15. ಗುಣಮುಖ | ಪಿ.ಲಂಕೇಶ್ |
| 16. ಸಂಕ್ರಾಂತಿ | ಪಿ.ಲಂಕೇಶ್ |
| 17. ಅಗ್ನಿ ಮತ್ತು ಮಳೆ | ಗಿರೀಶ್‌ಕಾರ್ನಾಡು |
| 18. ರೋಮಿಯೋ ಜೂಲಿಯೆಟ್ | ಶೇಕ್ಸ್‌ಫಿಯರ್ |
| 19. ಅಶ್ವತ್ಥಾಮನ್ | ಬಿ.ಎಂ. ಶ್ರೀ |
| 20. ಜಲಗಾರ | ಕುವೆಂಪು |
| 21. ಪ್ರಸನ್ನನ ಗೃಹಸ್ಥಾಶ್ರಮ | ಪಿ. ಲಂಕೇಶ್ |

| | |
|---|---|
| 22. ಪೋಲೀಸರಿದ್ದಾರೆ ಎಚ್ಚರಿಕೆ | ಪಿ. ಲಂಕೇಶ್ |
| 23. ತೆರೆಗಳು | ಪಿ. ಲಂಕೇಶ್ |
| 24. ಕ್ರಾಂತಿ ಬಂತು ಕ್ರಾಂತಿ | ಪಿ. ಲಂಕೇಶ್ |
| 25. ಗಿಳಿಯು ಪಂಜರದೊಳಿಲ್ಲ | ಪಿ. ಲಂಕೇಶ್ |
| 26. ಕದಡಿದ ನೀರು | ಜೆ.ಬಿ. ಜೋಶಿ |
| 27. ಆಸ್ಫೋಟ | ಟಿ.ಎನ್.ಸೀತಾರಾಮ್ |
| 28. ಜೋಕುಮಾರಸ್ವಾಮಿ | ಚಂದ್ರಶೇಖರ ಕಂಬಾರ |

ಡಾ||ಕೆ.ವಿ. ಚಂದ್ರೇಗೌಡ
ಎಂ.ಎ., ಎಮ್.ಫಿಲ್., ಪಿಎಚ್.ಡಿ
ಮುಖ್ಯಸ್ಥರು, ಕನ್ನಡ ವಿಭಾಗ
ವಿ.ವಿ. ಪುರ ಕಲೆ ಮತ್ತು ವಾಣಿಜ್ಯ ಸಂಜೆ ಕಾಲೇಜು
ಕೆ.ಆರ್. ರಸ್ತೆ ಬೆಂಗಳೂರು-560 004